


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 21 ಶನಿವಾರ 2025

ಸಂಪುಟ: 46 | ಸಂಚಿಕೆ: 65 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





ಈ ಬಾರಿ ದಸರಾ ಅದ್ದೂರಿ



ಜೂ.26ರ ಪೂರ್ವಾಹ್ನ 11 ಗಂಟೆಗೆ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಉನ್ನತ ಸಭೆ



● ಜೂನ್‌ನಲ್ಲೇ ಕೆಆರ್‌ಎಸ್ ಜಲಾಶಯ ತುಂಬುವ ಶುಭ ಸೂಚನೆ; ನಾಡಿನಾದ್ಯಂತ ಉತ್ತಮ ಮಳೆ ● ಈ ಸಲ 11 ದಿನದ ಉತ್ಸವದಲ್ಲಿ ವಿಶೇಷತೆ; ಅಧಿಕ ಅನುದಾನ ಕಲ್ಪಿಸುವ ವಿಶ್ವಾಸ

ಬೆಂಗಳೂರು, ಜೂ.20(ಕೆಎಂಶಿ)– ಕಾವೇರಿ ಜಲಾನಯನ ಪ್ರದೇಶದಲ್ಲಿ ನಿರಂತರ ಮಳೆಯಿಂದ ಅಣೆಕಟ್ಟೆಗಳು ಭರ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಭಾರೀ ಅದ್ದೂರಿಯಾಗಿ ಆಚರಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಜೂನ್ 26ರಂದು ಉನ್ನತ ಮಟ್ಟದ ಸಭೆ ಕರೆದಿದ್ದಾರೆ.

45 ವರ್ಷಗಳ ನಂತರ ಇದೇ ಮೊದಲ ಬಾರಿಗೆ ಕೃಷ್ಣರಾಜ ಸಾಗರ ಜಲಾಶಯ ಜೂನ್ ತಿಂಗಳಲ್ಲೇ ಭರ್ತಿಯಾಗುವ ಸಾಧ್ಯತೆ ಇದೆ. ಈಗಾಗಲೇ ಅಣೆಕಟ್ಟೆ 118 ಅಡಿಗಳಷ್ಟು ತುಂಬಿದ್ದು, ಸದ್ಯದಲ್ಲೇ ಭರ್ತಿಯಾಗುವ ಲಕ್ಷಣಗಳಿವೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅದ್ದೂರಿ ದಸರಾ ಸಂಬಂಧ ಸಭೆ ನಿರ್ಣಯಿಸಲಿದೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಸಭೆಗೆ ಹಾಜರಾಗುವಂತೆ ಮೈಸೂರು ಜಿಲ್ಲಾಡಳಿತ, ಜನಪ್ರತಿನಿಧಿಗಳು ಹಾಗೂ ಹಣಕಾಸು, ಪ್ರವಾಸೋದ್ಯಮ, ಕನ್ನಡ–ಸಂಸ್ಕೃತಿ, ನಗರಾಭಿವೃದ್ಧಿ, ಗೃಹ ಇಲಾಖೆ ಸಚಿವರು ಮತ್ತು ಇಲಾಖಾ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ.

ಸಿದ್ದರಾಮಯ್ಯ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರದ ಎಲ್ಲಾ ದಸರಾ ಉತ್ಸವಗಳನ್ನು ಅದ್ದೂರಿಯಾಗೇ ಆಚರಿಸಿದ್ದಾರೆ. ಹಿಂದಿನ ದಸರಾ ಆಚರಣೆಗಳಿಗಿಂತ ಈ ಬಾರಿ ಭಿನ್ನವಾಗಿ ಆಚರಿಸುವ ಆಲೋಚನೆ ಹೊಂದಿದ್ದಾರೆ.

ಮುಂಗಾರು ಪೂರ್ವ ಮಳೆ ಉತ್ತಮವಾಗಿದ್ದು ಜಲಾಶಯಗಳಿಗೆ ಭಾರಿ ನೀರು ಹರಿದು ಬಂದಿದೆ, ಕೃಷಿ ಚಟುವಟಿಕೆ ಆರಂಭಗೊಂಡಿದೆ, ವಿದ್ಯುತ್ ಅಭಾವ ತಪ್ಪಿದೆ. 26ರ ಸಭೆಯಲ್ಲಿ ಈ ಬಾರಿ ಹತ್ತು ದಿನದ ಬದಲಿಗೆ ದಸರಾ 11 ದಿನ ಆಚರಣೆ ಮಾಡುವ ಮತ್ತು ಕಳೆದ ಬಾರಿಗಿಂತ ಈ ಬಾರಿ ಹೆಚ್ಚು ಹಣ ನೀಡುವುದು ಹಾಗೂ ಮಹೋತ್ಸವ ಯಾವ ಸ್ವರೂಪದಲ್ಲಿ ನಡೆಯ ಬೇಕೆಂಬ ಕುರಿತು ಸರ್ಕಾರ ತೀರ್ಮಾನ ಕೈಗೊಳ್ಳಲಿದೆ. ದಸರಾ ಉತ್ಸವ ಸಮಯದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚು ಉತ್ತೇಜನ ನೀಡಲು, ಮೈಸೂರು ಜಿಲ್ಲೆ ಮತ್ತು ಗಡಿ ಭಾಗದ ಜಿಲ್ಲೆಗಳ ಪ್ರವಾಸೋದ್ಯಮ ತಾಣಗಳಿಗೆ ಜನರನ್ನು ಆಕರ್ಷಿಸುವ ಸಂಬಂಧ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ನಡೆಸಿರುವ ಬಹುತೇಕ ಉನ್ನತ ಮಟ್ಟದ ಸಭೆಗಳಲ್ಲಿ ಮೊದಲ ದಿನವೇ ಯಾವ ಗಣ್ಯರಿಂದ ಮಹೋತ್ಸವ ಉದ್ಘಾಟಿಸ ಬೇಕೆಂಬ ನಿರ್ಣಯವನ್ನು ಇದುವರೆಗೂ ಕೈಗೊಂಡಿಲ್ಲ. ಗಣ್ಯರ ಆಯ್ಕೆ ತೀರ್ಮಾನವನ್ನು ಸಭೆ ಮುಖ್ಯಮಂತ್ರಿಗಳ ಅಧಿಕಾರಕ್ಕೆ ಬಿಡುವ ಸಾಧ್ಯತೆ ಇದೆ. ಅಂದಿನ ಸಭೆಯಲ್ಲೇ ಜಿಲ್ಲಾಡಳಿತ ಮಾಡಿಕೊಂಡಿರುವ ಸಿದ್ಧತೆ ಹಾಗೂ ಸರ್ಕಾರದಿಂದ ದೊರೆಯಬೇಕಿರುವ ಆರ್ಥಿಕ ಸಹಕಾರ ಕುರಿತು ತೀರ್ಮಾನವಾಗಲಿದೆ.

ನನ್ನಲ್ಲಿರುವ ಮಾಹಿತಿ ಬಹಿರಂಗವಾದರೆ ಸರ್ಕಾರದ ಅಡಿಪಾಯ ನಡುಗುತ್ತೆ!!

ಬೆಂಗಳೂರು, ಜೂ.20– ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಕಾಂಗ್ರೆಸ್ ಶಾಸಕ ಬಿ.ಆರ್.ಪಾಟೀಲ್, ವಸತಿ ಇಲಾಖೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿರುವ ಆಡಿಯೋ ಕ್ಲಿಪ್ ಜೂ.20ರಂದು ಎಲ್ಲೆಡೆ ವೈರಲ್ ಆಗತೊಡಗಿದೆ.



ಬಿ.ಆರ್.ಪಾಟೀಲ್

ಆಡಿಯೋ ಕ್ಲಿಪ್‌ನಲ್ಲಿ, ಶಾಸಕ ಬಿ.ಆರ್.ಪಾಟೀಲ್ ತಮ್ಮಲ್ಲಿರುವ ಮಾಹಿತಿಯನ್ನು ಬಹಿರಂಗಪಡಿಸಿದರೆ, ಕಾಂಗ್ರೆಸ್ ನೇತೃತ್ವದ ಸರ್ಕಾರದ ಅಡಿಪಾಯವೇ ಅಲುಗಾಡುತ್ತೆ ಎಂದು ಹೇಳಿದ್ದಾರೆ. ಆಡಿಯೋ ವೈರಲ್ ಆದ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿರುವ ಬಿಜೆಪಿ, ಆರೋಪಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಒತ್ತಾಯಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದೆ. ಕಲಬುರಗಿ ಜಿಲ್ಲೆಯ ಆಳಂದ್ ■6ನೇ ಪುಟಕ್ಕೆ

ರಾಜ್ಯದಲ್ಲಿ ಮಧ್ಯಂತರ ಚುನಾವಣೆ ಎದುರಾದರೂ ಅಚ್ಚರಿ ಇಲ್ಲ... ನೀವು ಜೆಡಿಎಸ್ ಜೊತೆ ಹೋಗಿ

ರಾಜ್ಯ ಬಿಜೆಪಿ ನಾಯಕರಿಗೆ ಅಮಿತ್ ಷಾ ತಾಕೀತು




ಬೆಂಗಳೂರು, ಜೂ.20(ಕೆಎಂಶಿ)– ಕರ್ನಾಟಕ ವಿಧಾನ ಸಭೆಗೆ ಮಧ್ಯಂತರ ಚುನಾವಣೆ ನಡೆದರೂ ಆಶ್ಚರ್ಯವಿಲ್ಲ, ಅನಿವಾರ್ಯವಾದರೆ ಮಿತ್ರ ಪಕ್ಷ ಜೆಡಿಎಸ್‌ನೊಂದಿಗೆ ಜೊತೆಗೂಡಿ ಹೋಗುವಂತೆ ಕೇಂದ್ರ ಸಚಿವ ಅಮಿತ್ ಷಾ ರಾಜ್ಯ ಬಿಜೆಪಿ ನಾಯಕರಿಗೆ ಆದೇಶಿಸಿದ್ದಾರೆ.

ರಾಜ್ಯಕ್ಕೆ ಎರಡು ದಿನಗಳ ಭೇಟಿ ನೀಡಿದ್ದು, ರಾಜ್ಯ ಬಿಜೆಪಿ ನಾಯಕರ ಭೇಟಿ ಮಾಡಿದ ಅವರು, ರಾಷ್ಟ್ರಮಟ್ಟದಲ್ಲಿ ಜೆಡಿಎಸ್ ಜೊತೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಈ ವಿಷಯದಲ್ಲಿ ಯಾವುದೇ ತೀರ್ಮಾನ ಕೈಗೊಳ್ಳುವ ಅಧಿಕಾರ ನಿಮಗಿಲ್ಲ. ರಾಜ್ಯ ನಾಯಕರಲ್ಲಿ ಮೈತ್ರಿ ಬಗ್ಗೆ ಭಿನ್ನಾಭಿಪ್ರಾಯಗಳಿದ್ದಂತಿದೆ, ಅದನ್ನು ಬದಿಗಿಟ್ಟು ಹೊಂದಾಣಿಕೆ ಮಾಡಿಕೊಂಡು ಮುಂದೆ ಎದುರಾಗಲಿರುವ ಎಲ್ಲ ಚುನಾವಣೆಗಳಲ್ಲಿ ಒಟ್ಟಾಗಿ ಹೋಗಿ. ಕಾಂಗ್ರೆಸ್ ಸರ್ಕಾರದ ವಿರುದ್ಧ ನೀವು ಪ್ರತ್ಯೇಕ ■6ನೇ ಪುಟಕ್ಕೆ

ಇಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಮೈಸೂರು ಅರಮನೆ ಅಂಗಳದಲ್ಲಿ 15 ಸಾವಿರ ಮಂದಿ ಯೋಗ ಪ್ರದರ್ಶನ

- ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆಯಿಂದ ಯೋಗ ದಿನಾಚರಣೆ
- ಶಾಲಾ–ಕಾಲೇಜು ವಿದ್ಯಾರ್ಥಿಗಳು, ಯೋಗಪಟುಗಳು, ಸರ್ಕಾರಿ ನೌಕರರು ಭಾಗಿ



ಅರಮನೆ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮಕ್ಕೆ ವೇದಿಕೆ ನಿರ್ಮಿಸುತ್ತಿರುವುದು.

ಮೈಸೂರು, ಜೂ.20(ಎಂಟಿವೈ)– ಮೈಸೂರು ಅರಮನೆ ಆವರಣದಲ್ಲಿ ನಾಳೆ(ಜೂ.21) ಬೆಳಗ್ಗೆ ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಮೈಸೂರಿನ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಯೋಗ ಸಂಸ್ಥೆಗಳ ಯೋಗಪಟುಗಳೂ ಸೇರಿದಂತೆ 15 ಸಾವಿರಕ್ಕೂ ಹೆಚ್ಚು ಮಂದಿ ಸಾಮೂಹಿಕ ಯೋಗ ಪ್ರದರ್ಶನ ನೀಡಲಿದ್ದು, ಅದಕ್ಕಾಗಿ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ.


ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆ ವಿವಿಧ ಯೋಗ ಸಂಸ್ಥೆಗಳ ಸಹಯೋಗದಲ್ಲಿ ಅರಮನೆ ಆವರಣದಲ್ಲಿ ಆಯೋಜಿಸಿರುವ 11ನೇ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಲಿದ್ದಾರೆ. ನಾಳೆ ಬೆಳಗ್ಗೆ 6ರಿಂದ 8 ಗಂಟೆವರೆಗೆ ನಡೆಯಲಿರುವ ಯೋಗ ಕಾರ್ಯಕ್ರಮದ ಯಶಸ್ಸಿಗಾಗಿ ಈಗಾಗಲೇ ಆಯುಷ್ ಇಲಾಖೆ ಮೂರು ಹಂತದ ಕಾರ್ಯಕ್ರಮ ಮತ್ತು ತಾಲೀಮು ನಡೆಸಲಾಗಿದ್ದು, ಯೋಗಪಟುಗಳಿಗೆ ಮಾಹಿತಿ ನೀಡಲಾಗಿದೆ. ಮುಂಜಾನೆ 5 ಗಂಟೆಯಿಂದಲೇ ಅರಮನೆ ಗೇಟ್ ತೆರಲಾಗುತ್ತದೆ. ವಿವಿಧ ಶಾಲೆಗಳಿಂದ 7 ಸಾವಿರ, ಕಾಲೇಜುಗಳಿಂದ ■6ನೇ ಪುಟಕ್ಕೆ

> ಅಂತರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. 15 ಸಾವಿರಕ್ಕೂ ಹೆಚ್ಚು ಯೋಗಪಟುಗಳು ಪಾಲ್ಗೊಳ್ಳಲಿದ್ದಾರೆ. ಕುಡಿಯಲು ನೀರು, ಶೌಚಾಲಯ ಸೇರಿದಂತೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಲಾಗಿದೆ ವಿವಿಧ ಯೋಗ ಸಂಸ್ಥೆಗಳ ಮುಖ್ಯಸ್ಥರು, ಯೋಗಪಟುಗಳು, ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಯೋಗ ಪ್ರದರ್ಶಿಸಲಿದ್ದಾರೆ.
> – ಡಾ. ಸಿ.ರೇಣುಕಾದೇವಿ, ಜಿಲ್ಲಾ ಆಯುಷ್ ಅಧಿಕಾರಿ








INTERNATIONAL
Yoga Day
PAYANA ಪಯಣ
ಪಯಣ ಕಾರ್ ಮ್ಯೂಸಿಯಂ ನಲ್ಲಿ ಹಮ್ಮಿಕೊಂಡಿರುವ ವಿಶ್ವ ಯೋಗ ದಿನಾಚರಣೆ
ಅಂಗವಾಗಿ ಮುಖ್ಯ ಅತಿಥಿಯಾಗಿ ಆಗಮಿಸುತ್ತಿರುವ
ಪರಮಪೂಜ್ಯ, ಖಾವಂದರು, ಶ್ರೀ ಡಾ. ಡಿ. ವೀರೇಂದ್ರ ಹೆಗ್ಗಡೆ,
ಧರ್ಮದರ್ಶಿಗಳು ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗು ಇತರೆ ಗಣ್ಯರಿಗೆ ಹಾರ್ದಿಕ ಸ್ವಾಗತ
ಸ್ವಾಗತ ಬಯಸುವವರು
ಹರಿ ಗೋವಿಂದಾಸ್
ಹೋಟೆಲ್ & ರೆಸ್ಟೋರೆಂಟ್ಸ್

ಏರ್ ಇಂಡಿಯಾ ವಿಮಾನ ದುರಂತ

ಏರ್ ಇಂಡಿಯಾ ಬುಕ್ಕಿಂಗ್‌ನಲ್ಲಿ ಶೇ.20ರಷ್ಟು ಕುಸಿತ; ಟಿಕೆಟ್ ದರ ಕೂಡ ಶೇ.15 ಕಡಿತ!

ಬೆಂಗಳೂರು, ಜೂ.20– ಅಹ್ಮದಾಬಾದ್‌ನಲ್ಲಿ ನಡೆದ ಏರ್ ಇಂಡಿಯಾ ವಿಮಾನ ದುರಂತದ ಬಳಿಕ ಸಂಸ್ಥೆಯ ಟಿಕೆಟ್ ಬುಕ್ಕಿಂಗ್‌ನಲ್ಲಿ ಭಾರಿ ಕುಸಿತ ಕಂಡುಬಂದಿದ್ದು, ಏರ್ ಇಂಡಿಯಾ ಸಂಸ್ಥೆ ಟಿಕೆಟ್ ದರದಲ್ಲಿ ಕಡಿತ ಮಾಡಿದೆ.

ಅಹ್ಮದಾಬಾದ್‌ನಲ್ಲಿ ನಡೆದ ಬೋಯಿಂಗ್ ಡ್ರೀಮ್‌ಲೈನರ್ ವಿಮಾನದ ಅಪಘಾತದ ನಂತರ ಏರ್ ಇಂಡಿಯಾ ಬುಕಿಂಗ್‌ಗಳು ಗಣನೀಯವಾಗಿ ಕುಸಿದಿದೆ. ಕಳೆದ ವಾರ ಬೋಯಿಂಗ್ 787–8 ಡ್ರೀಮ್‌ಲೈನರ್ ವಿಮಾನದ ದುರಂತ ಅಪಘಾತದ ನಂತರ, ಏರ್ ಇಂಡಿಯಾ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ಬುಕಿಂಗ್‌ಗಳ ಪ್ರಮಾಣದಲ್ಲಿ ಶೇಕಡಾ 20ರಷ್ಟು ಕುಸಿದಿದ್ದು, ಟಿಕೆಟ್ ದರಗಳು ಕೂಡ ಶೇಕಡಾ 15ರಷ್ಟು ಇಳಿಕೆಯಾಗಿವೆ.

ಭಾರತೀಯ ಪ್ರವಾಸ ನಿರ್ವಾಹಕರ ಸಂಘದ (ಐಎಟಿಒ) ಅಧ್ಯಕ್ಷ ರವಿ ಗೋಸೈನ್ ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಏರ್ ಇಂಡಿಯಾ ವಿಮಾನದ ದುರದೃಷ್ಟಕರ ಘಟನೆಯ ನಂತರ, ವಿಶೇಷವಾಗಿ ಅಂತರರಾಷ್ಟ್ರೀಯ ವಲಯಗಳಲ್ಲಿ ಬುಕಿಂಗ್‌ಗಳಲ್ಲಿ ತಾತ್ಕಾಲಿಕ ಕುಸಿತ ಕಂಡುಬಂದಿದೆ. ನಮ್ಮ ಅಂದಾಜಿನ ಪ್ರಕಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ಶೇಕಡಾ 18ರಿಂದ 22 ಮತ್ತು ದೇಶೀಯವಾಗಿ ಶೇಕಡಾ 10ರಿಂದ 12ರಷ್ಟು ಕುಸಿತ ಕಂಡುಬಂದಿದೆ ಎಂದು ಹೇಳಿದ್ದಾರೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾಕೋ ಸ್ಕೂಲಿಗೆ ಲೇಟಾಗಿ ಬಂದೆ?
ಗುಂಡ : ಕ್ಷಮಿಸಿ ಸಾರ್, ಬೈಕ್ ಕೆಟ್ಟಿತ್ತು. ಅದಕ್ಕೆ ಬರೋದು ಲೇಟ್ ಆಯ್ತು
ಟೀಚರ್ : ಬಸ್‌ನಲ್ಲಿ ಬರೋದು ತಾನೇ.
ಗುಂಡ : ಬಸ್ ತಗೋಳುವಷ್ಟು ದುಡ್ಡು ನಮ್ಮತ್ರ ಇಲ್ಲ ಸಾರ್!

ಮೈಸೂರು ಮಿತ್ರ

ಶನಿವಾರ, 21 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನಮ್ಮೊಳಗಿನ ಬೆಳಕು ಹೇಗಿರಬೇಕೆಂದರೆ
ಅದು ಇನ್ನೊಬ್ಬರ ಬಾಳನ್ನೂ ಬೆಳಗಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊಲ ಬಿತ್ತಿ ನೋಡು, ನೆಲ ಸಾರಿಸಿ ನೋಡು.

ನಿಮ್ಮ ಪತ್ರಗಳು

65 ಸಾವಿರ ಮರಗಳ ಹನನ ಎಷ್ಟು ಸರಿ?

ಮಾನ್ಯರೆ,

ಮೈಸೂರಿನ ಕುಕ್ಕರಹಳ್ಳಿ ಕೆರೆ ಅಂಗಳದಲ್ಲಿ, ಮಾಳವೀಯ ಮಿಷನ್ ಕೇಂದ್ರದ ಬಳಿ ಗಾಳಿಗೆ ಮುರಿದು ಬಿದ್ದಿದ್ದ ಆಕಾಶ ಮಲ್ಲಿಗೆ ಮರ, ಪರಿಸರ ಪ್ರಿಯರ



ಕಾಳಜಿಯಿಂದ ಮತ್ತೆ ಚಿಗುರೊಡೆದಿರುವ ಪತ್ರಿಕೆಗಳಲ್ಲಿ (20.06.25) ಪ್ರಕಟವಾಗಿದೆ. ಇದು ಪ್ರಶಂಸಾರ್ಹ. ಆದರೆ ಕಂಡೂ ಕಾಣದೆ ನಿತ್ಯ ಹಲವಾರು ಮರಗಳಿಗೆ ಕೊಡಲಿ ಏಟು ಬೀಳುತ್ತಿರುತ್ತದೆ ಎನ್ನುವುದು ವಾಸ್ತವ.

ಇತ್ತ ಪರಿಸರ ಸಂರಕ್ಷಣೆ ಮಾಡಬೇಕಾದ ಸರ್ಕಾರವೇ ಸವದತ್ತಿಯ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆ ಮಾಡುವ ಉದ್ದೇಶದಿಂದ 65 ಸಾವಿರ ಮರಗಳ ಮಾರಣ ಹೋಮ ಮಾಡಲು ಮುಂದಾಗಿರುವ ಸುದ್ದಿ ಕೂಡ ವರದಿಯಾಗಿದೆ. ಇದೊಂದು ವಿಪರ್ಯಾಸ. ಮೊದಲು 5 ಸಾವಿರ ಮರ ಇದ್ದುದು ಪರಿಷ್ಕೃತ ಯೋಜನೆಯ ಪ್ರಕಾರ ಹತ್ತು ಪಟ್ಟು ಹೆಚ್ಚಾಗಿದೆ. ಯೋಜನೆಯನ್ನು ಪರಿಷ್ಕರಣೆ ಮಾಡಿರುವುದು ಯೋಜನೆಯ ಗುತ್ತಿಗೆ ಪಡೆದಿರುವ ಗ್ರೀನ್ ಕೋ ಕಂಪೆನಿಯ ವ್ಯಾಪಾರಿ ಉದ್ದೇಶವೂ ಇರಬಹುದು. ಸರ್ಕಾರ ಪರಿಸರ ನಾಶವಾಗುವ ಇಂತಹ ಯೋಜನೆ ಬಗ್ಗೆ ಮರು ಚಿಂತನೆ ಮಾಡಲಿ. ಭಾರಿ ವೆಚ್ಚದ ಇಂತಹ ಯೋಜನೆ ಅನಗತ್ಯ ಎನ್ನುವ ವರದಿಗಳಿವೆ. ಪರ್ಯಾಯ ಯೋಜನೆಯ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಅಗತ್ಯ.

– ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಯುದ್ಧ ವಿರಾಮ ಆದರೂ ನಿಲ್ಲದ ವಾಕ್ ಸಂಗ್ರಾಮ!

ಮಾನ್ಯರೆ,

ಭಾರತ ಮತ್ತು ಪಾಕಿಸ್ತಾನ ಮಧ್ಯೆ ಯುದ್ಧ ವಿರಾಮ ಆದರೂ ಯುದ್ಧ ನಿಲ್ಲಿಸಿದ್ದು ಯಾರು ಎಂಬ ಚರ್ಚೆಗೆ ಮಾತ್ರ ಇನ್ನೂ ವಿರಾಮ ಆಗುವಂತೆ ಕಾಣುತ್ತಿಲ್ಲ. ಭಾರತ ಮತ್ತು ಪಾಕಿಸ್ತಾನ ಎರಡೂ ಅಣ್ವಸ್ತ್ರ ಕ್ಷಿಪಣಿ ಹೊಂದಿರುವ ದೇಶಗಳು. ಒಂದು ವೇಳೆ ಯುದ್ಧ ತಾರಕಕ್ಕೆ ಏರಿದರೆ ಎರಡೂ ಕಡೆಗಳಲ್ಲಿ ಭೀಕರ ಪರಿಣಾಮ ಆಗುತ್ತಿತ್ತು, ಬಹುಶಃ ಪಾಕಿಸ್ತಾನಕ್ಕೆ ಹೆಚ್ಚು ನಷ್ಟ ಆಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ಎರಡೂ ಕಡೆಯ ಮಿತ್ರ ರಾಷ್ಟ್ರಗಳೂ ಸಹ ಯುದ್ಧಕ್ಕೆ ನಿಲ್ಲಲೇಬೇಕಾದ ಅನಿವಾರ್ಯತೆ ಉಂಟಾಗಿ ಅದು ಮೂರನೆಯ ಮಹಾ ಯುದ್ಧಕ್ಕೆ ನಾಂದಿ ಆಗಬಹುದಿತ್ತು. ಇಂತಹ ಸನ್ನಿವೇಶದಲ್ಲಿ ಬಲಿಷ್ಠ ರಾಷ್ಟ್ರ ಎಂದೇ ಹೆಸರಾಗಿರುವ ಅಮೆರಿಕ ಕಣ್ಣು ಬಾಯಿ ಮುಚ್ಚಿ ಕುಳಿತಿರಲು ಅಸಾಧ್ಯ. ಹಾಗಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಭಾರತ ಮತ್ತು ಪಾಕಿಸ್ತಾನ ಎರಡೂ ದೇಶದ ನಾಯಕರುಗಳಿಗೆ ತಾಕೀತು ಮಾಡಿ ಯುದ್ಧ ಬೇಡ ಎಂದಿರಬಹುದು. ಟ್ರಂಪ್ ಅವರು ನಾನೇ ಯುದ್ಧವನ್ನು 'ಸ್ಟಾಪ್' ಮಾಡಿಸಿದೆ ಎಂದು ಪದೇ ಪದೆ (ಹನ್ನೆರಡು ಸಲ!) ಹೇಳಿರುವುದು ಜಗಜ್ಜಾಹೀರಾಗಿದೆ. ಯುದ್ಧವನ್ನು ನಿಲ್ಲಿಸುವುದು ಯಾರು? ಯುದ್ಧ ಮಾಡುತ್ತಿರುವವರು ತಾನೇ? ಟ್ರಂಪ್ ಅವರು ಯುದ್ಧ ಬೇಡ ಎಂದು ಒತ್ತಾಯ ಮಾಡಿದ್ದನ್ನೇ ನಾನೇ ಯುದ್ಧ 'ನಿಲ್ಲಿಸಿದೆ' ಎಂದು ಹೇಳುತ್ತಾ ಬಂದರು. ಟ್ರಂಪ್ ಅವರು ಈ ಮಾತನ್ನು ಮೊದಲ ಸಲ ಹೇಳಿದಾಗಲೇ ಪ್ರಧಾನಿ ಮೋದಿಯವರು ಅದನ್ನು ಅಲ್ಲಗಳೆಯಲಿಲ್ಲ. ಆ ರೀತಿಯ ಮೌನ ಮೋದಿ ಅವರ ಜಾಯಮಾನವಲ್ಲ. ಹತ್ತು ಹನ್ನೆರಡು ಸಲ ಟ್ರಂಪ್ ತಮ್ಮ ಮಾತನ್ನು ಪುನರುಚ್ಚರಿಸುವ ತನಕ ಮೌನ ತಳೆದು ತಡವಾಗಿ ಅದನ್ನು ಅಲ್ಲಗಳೆದರು.

ಟ್ರಂಪ್ ಅವರು ಒತ್ತಾಯ ಮಾಡಿದರೂ ಯುದ್ಧ ವಿರಾಮದ ನಿರ್ಧಾರ ಭಾರತದ್ದೇ. ಟ್ರಂಪ್ ಅವರ ಸಲಹೆ, ಸೂಚನೆ, ಒತ್ತಾಯ, ತಾಕೀತು (ಇಂಗ್ಲೀಷ್‌ನಲ್ಲಿ jugglery of words ಎನ್ನುವಂತೆ) ಇತ್ತು ಆದರೆ ನಿರ್ಧಾರ ನಮ್ಮದೇ ಎಂದು ಹೇಳುವುದರಿಂದ ಮೋದಿ ಸರ್ಕಾರ ಅಥವಾ ಭಾರತಕ್ಕೆ ಯಾವ ರೀತಿಯಲ್ಲೂ ಘನತೆಗೆ ಕುಂದು ಬರಲಾಗದು.

– ಲಕ್ಷ್ಮಣ್ ಗೋರ್ಲ್‌ಕಟ್ಟೆ, ಬೋಗಾದಿ, ಮೈಸೂರು.

ಆರೋಗ್ಯಕ್ಕಾಗಿ ಯೋಗ

ಮಾನ್ಯರೆ,

ಮಾನಸಿಕ ಹಾಗೂ ದೈಹಿಕ ಆರೋಗ್ಯವಾಗಿರಲು ಯೋಗ ಸಹಕಾರಿಯಾಗಲಿದೆ. ಯೋಗವನ್ನು ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ಸೇರಿಸಲಾಗಿದೆ.



ಭಾರತದಲ್ಲಿ ಯೋಗವು ಕ್ರಿಸ್ತ ಪೂರ್ವ 5,000 ವರ್ಷಗಳ ಹಿಂದೆ ಇತ್ತು ಎಂದು ಇತಿಹಾಸ ಹೇಳುತ್ತದೆ ಹಾಗೂ ಇಂದು ಪ್ರಚಲಿತವಾಗಿದೆ. ಇಂದಿನ ಒತ್ತಡದ ಬದುಕಿನ ಆಧುನಿಕ ಜೀವನ ಶೈಲಿ ಪದ್ಧತಿಯಿಂದ ಕೆಲವು ಮನುಷ್ಯರು ತಮಗೆ ಅರಿವಿಲ್ಲದೆ ಅನಾರೋಗ್ಯದ ಕಡೆಗೆ ವಾಲುತ್ತಿರುವುದು ಶೋಚನೀಯ, ಯೋಗವು ಮನಸ್ಸು ಮತ್ತು ದೇಹವನ್ನು ಸಂಪರ್ಕಿಸುವ ಪ್ರಾಚೀನಕಲೆಯಾಗಿದೆ. ಮನಸ್ಸು ಹಾಗೂ ದೇಹದ ಮೇಲೆ ನಿಯಂತ್ರಣ ಇರಿಸಿಕೊಳ್ಳಲು ಸಹಾಯ ಮಾಡುತ್ತದೆ. ನಮ್ಮ ಒತ್ತಡ ಮತ್ತು ಆತಂಕವನ್ನು ಬಿಡುಗಡೆ ಜೊತೆಗೆ ಹದಿಹರಿಯದವರಲ್ಲಿ ಮನಸ್ಸನ್ನು ಸದಾ ಶಾಂತ ಚಿತ್ತತೆ ಏಕಾಗ್ರತೆಯನ್ನು ಸಮತೋಲನದಲ್ಲಿ ಇರಿಸುತ್ತದೆ. ದೇಹವನ್ನು ಸದೃಢಗೊಳಿಸಲು, ತೂಕವನ್ನು ಇಳಿಸಲು, ರೋಗ ನಿರೋಧಕ ಶಕ್ತಿ ಹೆಚ್ಚಿಸಲು, ಯೋಗ ಸಹಕಾರಿಯಾಗಲಿದೆ ನಮ್ಮ ಪ್ರಾಚೀನತೆಯಲ್ಲಿ ಆರೋಗ್ಯ ಮತ್ತು ಮಾನಸಿಕ ಉತ್ತಮಗೊಳಿಸಲು ಪ್ರಕೃತಿಯೊಂದಿಗೆ ನಮ್ಮನ್ನು ಹೋಲಿಸುತ್ತಾ. ಈ ಯೋಗ ದಿನವನ್ನು ಜೂನ್ 21ರಂದು ಯೋಗ ದಿನವಾಗಿ ಆಚರಿಸುತ್ತಿರುವುದು ಶ್ಲಾಘನೀಯ ಇಡಿ ಪ್ರಪಂಚದಲ್ಲೇ ನಮ್ಮ ಪ್ರಾಚೀನತೆ ಯೋಗವು ಪ್ರಸಿದ್ಧಗೊಂಡಿರುವುದು ನಮ್ಮೆಲ್ಲರ ಹೆಮ್ಮೆಯು ಕೂಡಾ.

– ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಈ ಬಾರಿಯ ಯೋಗ ದಿನದ ವಿಶೇಷ

ಒಂದು ಭೂಮಿ - ಒಂದು ಆರೋಗ್ಯ



ಡಾ॥ ಸುಧಾ .ಎಂ.ಎನ್
ಆಯುರ್ವೇದ ಮತ್ತು ಯೋಗ ತಜ್ಞರು
ಮೊ.: 9448071933.

ಜಗತ್ತಿನ ಚಿತ್ತವೆಲ್ಲ ಇಂದು ಭಾರತದತ್ತ! ಯೋಗವು ದೇಹವನ್ನು ಬಲಪಡಿಸಿ ಮನಸ್ಸನ್ನು ಶಾಂತಗೊಳಿಸಿ ದೈನಂದಿನ ಜೀವನದಲ್ಲಿ ಜವಾಬ್ದಾರಿಯ ಉನ್ನತ ಪ್ರಜ್ಞೆಯನ್ನು ಬೆಳೆಸಿ ಸಾವಧಾನತೆಯ ಸುಸ್ಥಿರ ಆರೋಗ್ಯಕರ ಜೀವನ ಶೈಲಿಯನ್ನು ಆಯ್ಕೆ ಮಾಡಲು ಅನುವು ಮಾಡಿ ಕೊಡುವುದರಿಂದ ನಮ್ಮನ್ನು ನಾವು ನೋಡಿಕೊಳ್ಳುವಲ್ಲಿ ಮತ್ತು ನಮ್ಮ ಈ ಭೂಮಿಯ ಬಗ್ಗೆ ಕಾಳಜಿ ವಹಿಸಲು ಪ್ರಾರಂಭಿಸುತ್ತೇವೆ. ವಸುದೈವ ಕುಟುಂಬಕಂ ಎಂಬ ಭಾರತೀಯ ಸನಾತನ ಸಂಸ್ಕೃತಿಯ ನೀತಿಯನ್ನು ಈ ಬಾರಿಯ ಘೋಷಣಾ ವಾಕ್ಯದೊಂದಿಗೆ ಪ್ರತಿಬಿಂಬಿಸಲಾಗಿದೆ ಎಂದರೆ ತಪ್ಪಾಗಲಾರದು.

ಪ್ರಪಂಚದಾದ್ಯಂತ ನಡೆಯುತ್ತಿರುವ ಯುದ್ಧದ ಪರಿಸ್ಥಿತಿಯ ವಿಲಕ್ಷಣ ತಲ್ಲಣಗಳು, ನೈಸರ್ಗಿಕ ವಿಕೋಪಗಳು, ಜಾಗತಿಕ ರಾಜಕೀಯ ವಿಪ್ಲವಗಳು, ಮತಾಂಧರ ದಾಳಿಗಳು ಇವುಗಳೆಲ್ಲದರ ಮಧ್ಯದಲ್ಲಿ ಜಗತ್ತೇ ನಲುಗುತ್ತಿರುವಾಗ ಈ ಘೋಷಣಾ ಸೂಕ್ತವೇನೋ ಅಲ್ಲವೇ?

ಯೋಗ ದಿನಾಚರಣೆ ಜೂನ್ 21 ರಂದೇ ಏಕೆ? : ಈ ದಿನ ದೀರ್ಘಕಾಲ ಹಗಲು ಹೊಂದಿರುವ ದಿನ, ವರ್ಷದಲ್ಲಿ ಉತ್ತರ ಗೋಳಾರ್ಧದ ಅತಿ ಉದ್ದ ಹಾಗೂ ದಕ್ಷಿಣ ಗೋಳಾರ್ಧದ ಅತಿ ಚಿಕ್ಕ ದಿನವನ್ನು ಅಂತಾರಾಷ್ಟ್ರೀಯ ಯೋಗ ದಿನವಾಗಿ ಆಯ್ಕೆ ಮಾಡಲಾಗಿದೆ. ಈ ದಿನವನ್ನು ಬೇಸಿಗೆ ಆಯನ ಸಂಕ್ರಾಂತಿ ದಿನವೆಂದೂ, ಯೋಗದ ದೃಷ್ಟಿಯಲ್ಲಿ ದಕ್ಷಿಣಾಯನಕ್ಕೆ ಪರಿವರ್ತನೆಯಾಗುವ ದಿನವಾದ್ದರಿಂದ ಆಧ್ಯಾತ್ಮಿಕ ಅಭ್ಯಾಸಗಳಿಗೆ ನೈಸರ್ಗಿಕವಾಗಿ ಬೆಂಬಲ ಸಿಗುತ್ತದೆ, ಸೂರ್ಯಾಭಿಮುಖವಾಗಿ ದೃಷ್ಟಿ ನೆಟ್ಟು ಧೀಶಕ್ತಿ ಉದ್ದೀಪನಗೊಳಿಸುವ ದಿನವೂ ಇದಾಗಿರುವುದರಿಂದ, ಹಾಗೆಯೇ ಆದಿಯೋಗಿ ಶಿವ ಅಗಸ್ತ್ಯ ಮಹರ್ಷಿ ಮುಂತಾದ ಋಷಿ ಮುನಿಗಳ ಮೂಲಕ ಮಾನವ ಜನಾಂಗಕ್ಕೆ, ಯೋಗದ ಜ್ಞಾನವನ್ನು ನೀಡಿದ ದಿನವೂ ಇದಾಗಿದೆ.

ನಮ್ಮ ಯೋಗ ಲಾಂಛನ ವಿಶ್ವ ಪ್ರಜ್ಞೆ, ವಿಶ್ವ ಶಾಂತಿಯ ಸಂಕೇತ: ನಮ್ಮ ಯೋಗ ಲಾಂಛನದಲ್ಲಿ ಚಿತ್ರಿಸಲಾಗಿರುವ ನಮಸ್ಕರಿಸುವ ಕೈಗಳು ಏಕತೆಯ ಸಂಕೇತ, ವ್ಯಕ್ತಿಯ ಪ್ರಜ್ಞೆಯು ವಿಶ್ವ ಪ್ರಜ್ಞೆಯ ಜೊತೆಗೆ ಸಮನ್ವಯಗೊಳ್ಳುವುದನ್ನು ಇದು ಸಂಕೇತಿಸುತ್ತದೆ, ದೇಹ ಮತ್ತು ಮನಸ್ಸಿನ ಸಮನ್ವಯವನ್ನು ಪ್ರತಿನಿಧಿಸುತ್ತದೆ ಕಂದು ಬಣ್ಣದ ಎಲೆಗಳು ಭೂಮಿಯ ಸಂಕೇತ, ಹಸಿರು ಎಲೆಗಳು ಪ್ರಕೃತಿಯ ಸಂಕೇತ, ನೀಲಿ ಬಣ್ಣವು ಜಲದ ಸಂಕೇತ, ಹೊಳಪು ಅಗ್ನಿಯ ಸಂಕೇತ, ಮತ್ತು ಸೂರ್ಯನೇ ಶಕ್ತಿ, ಪ್ರೇರಣೆಯೇ ಸಂಕೇತ, ಲಾಂಛನದ ತಳಭಾಗದಲ್ಲಿ ಉಲ್ಲೇಖಿಸಿದಂತೆ ಯೋಗವು ಮಾನವ ಜನಾಂಗಕ್ಕೆ ಅಗತ್ಯವಿರುವ ಸೌಹಾರ್ದತೆ ಮತ್ತು ಶಾಂತಿಯೇ ಯೋಗದ ಅಂತಃ ಸತ್ವ ಎಂಬುದನ್ನು ಸೂಚಿಸುತ್ತದೆ.

ಸರಿ ಈಗನಿಸಿರಬೇಕಲ್ಲ ಯೋಗವೆಂದರೆ ಏನೆಂದು; ಹೌದು ಈಗ ಯೋಗವೆಂದರೆ ಆರೋಗ್ಯ ಭಾಗ್ಯಕ್ಕಾಗಿಯೋ, ತೂಕ ಇಳಿಸಲೋ ಅಥವಾ ಸೌಂದರ್ಯವರ್ಧನೆಗೋ ಇಲ್ಲ ಬಹುಮಾನಗಿಟ್ಟಿಸಲು ಇರುವ ಕಸರತ್ತು ಎಂದು, ಹಾಗೆಯೇ ಪ್ರಾಣಾಯಾಮ ಎಂದರೆ ಉಸಿರಾಟದ ವ್ಯಾಯಾಮ ಅಂದರೆ ಒಂಥರಾ ಕಸರತ್ತೇ, ಇದರಿಂದ ಎಲ್ಲಾ ರೋಗಾನೂ ವಾಸಿಯಾಗಿ ಬಿಡುತ್ತದೆ.... ಎಂಬ ನಂಬಿಕೆ.

ಇತ್ತೀಚೆಗೆ ಭಾರತ ಜಗತ್ತಿನ ಗಮನವನ್ನು ತನ್ನೆಡೆಗೆ ಮತ್ತೆ ಯೋಗದ ಮೂಲಕ ಸೆಳೆಯುತ್ತಿದೆ. ಹೆಂಗಸರು, ಮಕ್ಕಳು, ಪುರುಷರು, ಸೇರಿದಂತೆ ಮಧ್ಯಮ, ಮೇಲ್ವರ್ಗದ ಸುಶಿಕ್ಷಿತ, ಅರೆಶಿಕ್ಷಿತ, ಜನರು ಯೋಗದ ಅಭ್ಯಾಸ ಆರಂಭಿಸಿದ್ದಾರೆ. ಯೋಗ ಇಂದಿನ ಜನರ ಫ್ಯಾಷನ್ ಆಗಿದೆ ಎಂದರೆ ತಪ್ಪಾಗಲಾರದು. ಶರೀರವನ್ನು ಬೇಕು ಬೇಕಾದಂತೆ ತಿರುಗಿಸುವುದು. ತಲೆಕೆಳಗಾಗಿ ನಿಲ್ಲುವುದು, ಉಸಿರಾಟದ ವ್ಯಾಯಾಮವನ್ನು ಹೇಳಿಕೊಡುವ ನಿಮ್ಮೆಲ್ಲರ ಸಮಸ್ಯೆಗಳಿಗೆ ಯೋಗಿಕ್ ಕೌನ್ಸಿಲಿಂಗ್ ಕೊಡುತ್ತೇವೆ. ಎಂಬಿತ್ಯಾದಿ ಅಸಂಖ್ಯಾತ ಘೋಷಣೆಗಳೊಂದಿಗೆ ನಡೆಯುತ್ತಿರುವ ಯೋಗಕೇಂದ್ರಗಳು, ಹೇಳಿಕೊಡುವ ಅನೇಕ ಯೋಗಿಗಳು ಯೋಗ ಪಟುಗಳು ಪ್ರತೀ ನಗರಗಳಲ್ಲಿಯೂ ಗಲ್ಲಿಗೊಂದರಂತೆ ನಾಯಿಕೊಡೆಗಳಂತೆ ಮೇಲೇಳುತ್ತಿವೆ. ಇದು ಭಾರತದಲ್ಲಿ ಈಗಿನ ಸದ್ಯದ ಯೋಗದ ಟ್ರೆಂಡಿನ ವಿಷಯ. ಭಾರತದಲ್ಲಿ ಯೋಗಕ್ಕೆ ಇಷ್ಟೊಂದು ಜನಪ್ರಿಯತೆ ಈಗ ಏಕೆ? ಬಹುಶ: ವಿದೇಶಿಯರು ಬಂದು ಕಲಿಯುತ್ತಿದ್ದಾರಲ್ಲ ಅದಕ್ಕೆ ಇರಬಹುದು. ಏನಂತೀರಿ?.

ಹಾಗಾದರೆ ವೇದಗಳು, ಉಪನಿಷತ್ತುಗಳು, ಭಗವದ್ಗೀತೆ, ಆಯುರ್ವೇದ, ಮನುಸ್ಮೃತಿಯಂತಹ ಮಹತ್ತರ ಜ್ಞಾನ ಭಂಡಾರವನ್ನು ಜಗತ್ತಿಗಿತ್ತಾ, ಅನೇಕಾನೇಕ ಸಿದ್ಧಿಪುರುಷರ ವಿಚಾರಧಾರೆಗಳನ್ನು ಜಗತ್ತಿಗೇ ಸಾರಿದ, ಉನ್ನತ ಜೀವನ ಮೌಲ್ಯಗಳು, ಸಾಮಾಜಿಕ ವ್ಯವಸ್ಥೆಯ ಬಗ್ಗೆ ಜಗತ್ತಿಗೆ ಮಾದರಿಯಾದ ಸಿದ್ಧಾಂತಗಳನ್ನು ನೀಡಿದ ಭಾರತದ ಸುಶಿಕ್ಷಿತ ಜನರ ಕಲ್ಪನೆಯೇ ಯೋಗದ ಬಗ್ಗೆ ಹೀಗಿರುವಾಗ, ಅನ್ಯದೇಶೀಯರ ಕಲ್ಪನೇ ಹೇಗಿರಬೇಡ

ಶಾಲೆಗೆ ಹೋಗುವ ಮಕ್ಕಳಿಗೆ ಬೆಳಿಗ್ಗೆನೇ ಎದ್ದು ಯೋಗ ಮಾಡು ಮುಂದೆ ಖಾಯಿಲೆ ಬರಲ್ಲ, ಪ್ರತೀ ದಿನವೂ ನೀನೇ ಕ್ಲಾಸಿನಲ್ಲಿ ಫಸ್ಟ್ ರ್‍ಯಾಂಕ್ ಬರ್ತಿಯಾ, ಮತ್ತೇ ಸ್ಪೋಟ್ಸ್ ಕಾಂಪೀಟೇಷನ್‌ನಲ್ಲಿ ನಿಂಗೇ ಪ್ರೈಜ್, ನೋಡು ಯೋಗ ಮಾಡಿದ್ರೆ ಸಚಿನ್ ತರ ಕುಂಬ್ಳೆತರ ಆಗಬಹುದು..... ಇತ್ಯಾದಿ ಇತ್ಯಾದಿ ತಮ್ಮ ಮಕ್ಕಳ ಮೆದುಳಿನಲ್ಲಿ ತುಂಬಿ ಯೋಗಕ್ಕೆ ಬಲವಂತವಾಗಿಯೋ ಅಥವಾ ಆಸೆ ತೋರಿಸಿಯೋ ಕಳುಹಿಸುವ ದೂರಾಲೋಚನೆಯ ಅತೀ ಮೆದುಳಿನ ಮಾತಾಪಿತೃಗಳಿಗೇನೂ ಕಡಿಮೆ ಇಲ್ಲ.

ಹಾಗಾದರೆ ನಾವು ನಮ್ಮ ಮುಂದಿನ ಜನಾಂಗಕ್ಕೆ ಉಚ್ಚ ಜೀವನ ಮಾನವೀಯ ಮೌಲ್ಯಗಳನ್ನು ತಿಳಿಸುವ ಯೋಗ ಶಾಸ್ತ್ರವೆಂದರೆ ಬರೀ ಶಾರೀರಿಕ ವ್ಯಾಯಾಮ, ಉಸಿರಾಟದ ಕಸರತ್ತು ಇದರಿಂದ ಎಲ್ಲಾ ಕಡೆಯೂ ಫಸ್ಟ್ ಬರಬಹುದು. ಸ್ಲಿಮ್ ಆಗಿರಬಹುದು. ಇದೊಂದು ಮ್ಯಾಜಿಕ್ ಎಂದಷ್ಟೇ ಮಾತ್ರ ಹೇಳಿ ತಪ್ಪು ಕಲ್ಪನೆ ನೀಡಿ ಅವರ ಬೌದ್ಧಿಕ ಬೆಳವಣಿಗೆಯನ್ನು ನಾವೇ ಕುಂಠಿತಗೊಳಿಸುತ್ತಿದ್ದೇವೆಯೇ? ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾದ ಕಾಲ ಈಗ ಈ ಶತಮಾನದ ಅಂತ್ಯದಲ್ಲಿಯಾದರೂ ಬಂದಿದೆ.

ಈಗಿನ ಪರಿಸ್ಥಿತಿಯಲ್ಲಿ ಯೋಗ ಜೀವನ ಏಕೆ ಬೇಕು: ಇದು ವಿಪರೀತ ವೈಜ್ಞಾನಿಕ ಯುಗ, ಅತ್ಯಾಧುನಿಕ ಕಂಪ್ಯೂಟರೀಕರಣಗೊಂಡ ತಂತ್ರಜ್ಞಾನವೂ ಜೀವನದ ಮೂಲಭೂತ ಅವಶ್ಯಕತೆಗಳ ಸಮಸ್ಯೆಯನ್ನು ಬಗೆಹರಿಸಿ ವ್ಯಕ್ತಿಯ ಹೆಚ್ಚಿನ ಸುಖ ಸೌಕರ್ಯ ನೀಡಿದೆ, ನೀಡುತ್ತಿದೆ.

> **"** ಯೋಗವೆಂದರೆ ಆರೋಗ್ಯ ಭಾಗ್ಯಕ್ಕಾಗಿಯೋ, ತೂಕ ಇಳಿಸಲೋ ಅಥವಾ ಸೌಂದರ್ಯವರ್ಧನೆಗೋ ಇಲ್ಲ ಬಹುಮಾನಗಿಟ್ಟಿಸಲು ಇರುವ ಕಸರತ್ತು ಎಂದು, ಹಾಗೆಯೇ ಪ್ರಾಣಾಯಾಮ ಎಂದರೆ ಉಸಿರಾಟದ ವ್ಯಾಯಾಮ ಅಂದರೆ ಒಂಥರಾ ಕಸರತ್ತೇ, ಇದರಿಂದ ಎಲ್ಲಾ ರೋಗಾನೂ ವಾಸಿಯಾಗಿ ಬಿಡುತ್ತದೆ.... ಎಂಬ ನಂಬಿಕೆ.

ಮಾನವ ತನ್ನೆಲ್ಲಾ ಮೌಲ್ಯಗಳನ್ನು ಮರೆತು ಈ ತಂತ್ರಜ್ಞಾನ ಯುಗದಲ್ಲಿ ಕೊಲೆ, ಹಿಂಸೆ, ಪರಿಸರ ನಾಶ, ಯುದ್ಧಗಳು ಮುಂತಾದ ಅನಾಹುತಕಾರಿ ವಿಷಯಗಳತ್ತ ನಡೆಸುತ್ತಿದ್ದಾನೆ. ಹಣದ ಲೆಕ್ಕಾಚಾರವೇ ಅಥವಾ ಆರ್ಥಿಕ ಅಭಿವೃದ್ಧಿಯೇ ಸಾಮಾಜಿಕ ಪ್ರಗತಿಯ ಅಳತೆ ಗೋಲಾಗಿರುವುದು. ಹಾಗೆಯೇ ಸಕಲ ಸುಖ ಸಂಪಾದನೆಯೆಂದರೆ ಲೈಂಗಿಕ ಸುಖವೆಂದೇ ಈಗಿನ ಪೀಳಿಗೆ ತಿಳಿದಿದೆ. ಇದರ ಪರಿಣಾಮ ಹೆಚ್ಚುತ್ತಿರುವ ಕೊಲೆ, ವಂಚನೆ, ಅತ್ಯಾಚಾರ ಪ್ರಕರಣಗಳು, ಅಮಾನವೀಯವಾದ ಅಪ್ರಾಪ್ತ ಬಾಲಕಿಯರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳು, ಏಡ್ಸ್‌ನಂತಹ ಮಾರಕ ವ್ಯಾಧಿಗಳು, ಅನೇಕ ಮಾನಸಿಕ ಒತ್ತಡ ಜನ್ಯ ವ್ಯಾಧಿಗಳು ಹೆಚ್ಚಾಗಿ ಕಂಡು ಬರುತ್ತಿದೆ. ಅಮೇರಿಕಾದಂತಹ ಮುಂದುವರಿದ ದೇಶಗಳಲ್ಲಿ ಜನರಿಗೆ ಮಾನಸಿಕ ನೆಮ್ಮದಿ ಎಂಬುದೇ ಇಲ್ಲ. ಈಗೀಗ ಪಾಶ್ಚಾತ್ಯರು ನಮ್ಮ ಸಂಸ್ಕೃತಿಯ ಕಡೆಗೆ ವಾಲುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಭಾರತೀಯ ಸನಾತನ ಧರ್ಮದಿಂದ ಪ್ರಭಾವಿತ ವಿದೇಶೀಯರು ಇತ್ತೀಚೆಗೆ ಭಾರಿ ನಿರೀಕ್ಷೆಯಿಂದ ಬರುತ್ತಿರುವುದು ಕಾಣುತ್ತಿದೆ. ನಮ್ಮ ಸಂಸ್ಕೃತಿಯ ಮಹತ್ವ ಅರಿತು ಕೆಲವನ್ನಾದರೂ ಮೈಗೂಡಿಸಿಕೊಂಡು ಹೋಗಲು ಆಸಕ್ತಿ ತೋರುವ ವಿದೇಶಿಯರಿಗೆ ಈಗಿನ ಭಾರತದಲ್ಲಿ ಸಿಗುತ್ತಿರುವುದೇನು ಅಥವಾ ಭಾರತೀಯರಾದ ನಮಗೆ ನಮ್ಮ ಸಂಸ್ಕೃತಿಯ ಮೂಲ ಪರಿಚಯವಿದೆಯೇ


ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಅಧಿವೇಶನದಲ್ಲಿ, ಯೋಗವು ಪ್ರಾಚೀನ ಭಾರತ ಜಗತ್ತಿಗೆ ನೀಡಿದ ಅಮೂಲ್ಯ ಕೊಡುಗೆ. ಇದು ಮನಸ್ಸು ಮತ್ತು ದೇಹ ಚಿಂತನೆ ಮತ್ತು ವರ್ತನೆ ಹಾಗೂ ಸಂಯಮ ಮತ್ತು ಸಾಧನೆಗಳ ಏಕೀಕರಣವನ್ನು ಸಾಕಾರಗೊಳಿಸುತ್ತದೆ. ಮಾನವ ಮತ್ತು ನಿಸರ್ಗದ ನಡುವೆ ಸೌಹಾರ್ದ, ಆರೋಗ್ಯ ಮತ್ತು ಯೋಗ ಕ್ಷೇಮದ ಬಗ್ಗೆ ಪವಿತ್ರ ವಿಧಾನವನ್ನು ಹೇಳಿಕೊಡುತ್ತದೆ ಇದು ಬರೇ ವ್ಯಾಯಾಮವಲ್ಲ, ನಿಮ್ಮನ್ನು ನೀವು ಜಗತ್ತು ಮತ್ತು ಪ್ರಕೃತಿಯ ಜತೆಗೆ ಒಂದಾಗಿಸುವ ಪ್ರಕ್ರಿಯೆ.

ನಮ್ಮ ಜೀವನಶೈಲಿ ಬದಲಾವಣೆ ಹಾಗೂ ಪ್ರಜ್ಞಾಸ್ಥಿತಿಯನ್ನು ಸೃಷ್ಟಿಸಿಕೊಳ್ಳುವ ಮೂಲಕ ಇದು ಯೋಗ ಕ್ಷೇಮಕ್ಕೆ ದಾರಿಯಾಗುತ್ತದೆ. ಅಂತಾರಾಷ್ಟ್ರೀಯ ಯೋಗ ದಿನವಾಗಿ ಈ ದಿನವನ್ನು ಅಂಗೀಕರಿಸುವ ಚಿಂತನೆ ಮತ್ತು ವರ್ತನೆ ಹಾಗೂ ಸಂಯಮ ಮತ್ತು ಸಾಧನೆಗಳ ಏಕೀಕರಣವನ್ನು ಸಾಕಾರಗೊಳಿಸುತ್ತದೆ. ಮಾನವ ಮತ್ತು ನಿಸರ್ಗದ ನಡುವೆ ಸೌಹಾರ್ದ, ಆರೋಗ್ಯ ಮತ್ತು ಯೋಗ ಕ್ಷೇಮದ ಬಗ್ಗೆ ಪವಿತ್ರ ವಿಧಾನವನ್ನು ಹೇಳಿಕೊಡುತ್ತದೆ.

ಇದು ಬರೇ ವ್ಯಾಯಾಮವಲ್ಲ, ನಿಮ್ಮನ್ನು ನೀವು ಜಗತ್ತು ಮತ್ತು ಪ್ರಕೃತಿಯ ಜತೆಗೆ ಒಂದಾಗಿಸಿಕೊಳ್ಳುವ ಪ್ರಕ್ರಿಯೆ. ನಮ್ಮ ಜೀವನ ಶೈಲಿ ಬದಲಾವಣೆ ಹಾಗೂ ಪ್ರಜ್ಞಾಸ್ಥಿತಿಯನ್ನು ಸೃಷ್ಟಿಸಿಕೊಳ್ಳುವ ಮೂಲಕ ಇದು ಯೋಗ ಕ್ಷೇಮಕ್ಕೆ ದಾರಿಯಾಗುತ್ತದೆ. ಅಂತಾರಾಷ್ಟ್ರೀಯ ಯೋಗ ದಿನವಾಗಿ ಈ ದಿನವನ್ನು ಅಂಗೀಕರಿಸುವ ಮೂಲಕ ನಾವೆಲ್ಲರೂ ಒಂದಾಗೋಣ ಎಂದು ಮೋದಿಯವರ ಸಂದೇಶವನ್ನು ಪ್ರಪಂಚದಾದ್ಯಂತ ಅರ್ಥಪೂರ್ಣವಾಗಿ ಸಾರೋಣವಲ್ಲವೆ.

ಈ ಯೋಗವೆಂಬ ಉದ್ಯಮ 2023ರ ಅಂಕಿ ಅಂಶದಂತೆ 107 ಶತಕೋಟಿ (ಬಿಲಿಯನ್) ಡಾಲರ್ ಮೌಲ್ಯದ ಜಾಗತಿಕ ಉದ್ಯಮ ಎಂದರೆ ನಂಬಲಾಗುತ್ತಿಲ್ಲ ಅಲ್ಲವೇ ಬಹುಶಃ ಮುಂದಿನ 2034ರ ಹೊತ್ತಿಗೆ ಅದು 238 ಶತಕೋಟಿ ಡಾಲರ್ ಮುಟ್ಟುವ ನಿರೀಕ್ಷೆ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯ. ಇಂತಹ ಯೋಗ ವಿಶ್ವವ್ಯಾಪಿ ಮಾರುಕಟ್ಟೆಯಲ್ಲಿ ನಿಮ್ಮೆಲ್ಲರ ನರನಾಡಿಗಳನ್ನು ಚಕ್ರಗಳನ್ನು ಶುದ್ಧಗೊಳಿಸಿ ನಿಮ್ಮ ಕುಂಡಲಿನಿ ಶಕ್ತಿಯನ್ನು ಪ್ರಚೋದಿಸಿ, ಉದ್ದೀಪಿಸಿ ಸಾಕ್ಷಾತ್ಕಾರ ನೀಡುತ್ತೇವೆ ಎಂಬ ಘೋಷಣೆಯ ವೈಭವೀಕರಣದಲ್ಲಿ ನಮ್ಮ ಸಾಂಪ್ರದಾಯಿಕ ಗುರುಗಳಾದ ಪತಂಜಲಿ, ಪರಾಶರ, ಅಗಸ್ತ್ಯರಂತಹ ಋಷಿಮುನಿಗಳ ಚಿಂತನೆಗಳು, ಆದರ್ಶಗಳು ಮಾಯವಾಗಿವೆ. ಪಾಶ್ಚಿಮಾತ್ಯ ದೇಶಗಳಲ್ಲಿ Hot Yoga Club, Nude Yoga Club, Yogic Body Show ಹೀಗೆ ಹತ್ತು ಹಲವಾರು ವಿಕೃತಗೊಂಡ ನಮ್ಮ ಯೋಗದ ಧ್ಯೇಯವನ್ನೇ ತಿರುಚಿ ಸುಧಾರಿತ ಹೊಸ ಅಸಹ್ಯಕರ ಆವಿಷ್ಕಾರಗಳು ಶುರುವಾಗಿ ಬಹಳ ವರ್ಷಗಳೇ ಆಗಿವೆ ! ಮುಂದೊಂದು ದಿನ ಇವಕ್ಕೆಲ್ಲಾ ಕಾಪಿ ರೈಟ್ ಕೇಳಿದರೂ ಆಶ್ಚರ್ಯವೇನಿಲ್ಲ.

ಯೋಗದ ಕ್ರಮಗಳು ಮತ್ತು ಅಭ್ಯಾಸಗಳು ನಮ್ಮ ಈಗಿನ ಅನ್ವೇಷಣೆಗಳಲ್ಲ, ನಮ್ಮ ಪ್ರಾಚೀನ ಋಷಿಮುನಿಗಳು ಅನ್ವೇಷಿಸಿದ, ಸಿದ್ಧಿಸಿದ ಮನುಕುಲಕ್ಕಾಗಿ ಅಭಿವೃದ್ಧಿಪಡಿಸಿದ ವಿಜ್ಞಾನವು ಇಂದಿನ ಈ ಜಾಗತಿಕ ಮಾರುಕಟ್ಟೆಯಲ್ಲಿ ಕಳೆದುಹೋಗದಂತೆ ಕಾಪಾಡುವುದು, ಯೋಗದ ಮೂಲ ಋಷಿಗಳು, ಗುರುಗಳು, ಮುನಿಗಳನ್ನು ಮೂಲೆ ಗುಂಪು ಮಾಡದೇ, ಈ ಅಂತಾರಾಷ್ಟ್ರೀಯ ಯೋಗದಿನವನ್ನು ಮೂಲ ಉದ್ದೇಶದೊಂದಿಗೆ ಅರ್ಥಪೂರ್ಣವಾಗಿ ಆಚರಿಸಬೇಕಾಗಿರುವುದು ನಮ್ಮ ಮೂಲ ಗುರಿಯಾಗಿರಬೇಕು.



ಬಿಜೆಪಿ ನಗರಾಧ್ಯಕ್ಷರಿಗೆ ಸನ್ಮಾನ



ಬಿಜೆಪಿ ಮೈಸೂರು ನಗರಾಧ್ಯಕ್ಷರಾಗಿ ಮತ್ತೊಮ್ಮೆ ಆಯ್ಕೆಯಾಗಿರುವ ಮಾಜಿ ಶಾಸಕರೂ ಆದ ಎಲ್. ನಾಗೇಂದ್ರ ಅವರನ್ನು ಚಾಮರಾಜ ಕ್ಷೇತ್ರದ ಬಿಜೆಪಿ ವತಿಯಿಂದ ಶುಕ್ರವಾರ ಸನ್ಮಾನಿಸಲಾಯಿತು. ಈ ವೇಳೆ ಹಿರಿಯ ಮುಖಂಡ ಎಂ. ಶಿವಕುಮಾರ್, ಮಾಜಿ ಕಾರ್ಪೊರೇಟರ್‌ಗಳಾದ ಸುಬ್ಬಯ್ಯ, ಪ್ರಮೀಳ, ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಮುಖಂಡರಾದ ಪುನೀತ್, ಹೇಮಾ ನಂದೀಶ್, ಕೇಬಲ್ ಮಹೇಶ್, ಅರವಿಂದ್ ಇನ್ನಿತರರು ಉಪಸ್ಥಿತರಿದ್ದಾರೆ.

ಕೆಲಸದಾಕೆ ಮೇಲೆ ಅತ್ಯಾಚಾರ ಆರೋಪ

ಪ್ರಜ್ವಲ್ ವಿರುದ್ಧ ವಿಚಾರಣೆಗೆ ಹೈಕೋರ್ಟ್ ಅಸ್ತು

ಬೆಂಗಳೂರು: ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ ಆರೋಪದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ವಿಚಾರಣೆಯನ್ನು, ವಿಚಾರಣಾ ನ್ಯಾಯಾಲಯ ಮುಂದುವರಿಸಬಹುದು ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಎಫ್‌ಐಆರ್, ದೋಷಾರೋಪ ಪಟ್ಟಿ ಮತ್ತು ಈ ಕುರಿತ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು ಎಂದು ಕೋರಿ ಜೆಡಿಎಸ್ ಶಾಸಕ ಹಾಗೂ ಪ್ರಜ್ವಲ್ ತಂದೆ ಎಚ್.ಡಿ. ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಎಚ್.ಡಿ.ರೇವಣ್ಣ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್, ರೇವಣ್ಣ ಅವರಿಗೆ ಸೀಮಿತಗೊಳಿಸಿ ಈ ನ್ಯಾಯಾಲಯ ಮಧ್ಯಂತರ ಆದೇಶ ನೀಡಿದೆ. ಹಾಗಾಗಿ, ಪ್ರಜ್ವಲ್ ವಿರುದ್ಧದ ವಿಚಾರಣೆ ಮುಂದುವರಿಸಲು ಯಾವುದೇ ಅಡ್ಡಿಯಿಲ್ಲ ಎಂದರು. ಈ ಮಾತಿಗೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್ ಸಹಮತ ವ್ಯಕ್ತಪಡಿಸಿದರು.

ಮೀಸಲಾತಿ ಹೋರಾಟ ಹತ್ತಿಕ್ಕಲು ಉಸ್ತುವಾರಿ ಸಚಿವ ಮಹದೇವಪ್ಪ ಯತ್ನ

ಮೈಸೂರು, ಜೂ.20(ಜಿಎ)–ಒಳ ಮೀಸಲಾತಿಗಾಗಿನ ಹೋರಾಟಗಾರರ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಮ್ಮ ಚೇಲಾಗಳನ್ನು ಬಳಸಿ ಕೊಂಡು ಪ್ರಕರಣ ದಾಖಲಿಸುತ್ತಿದ್ದಾರೆ. ಆದರೆ ತಾವೆಲ್ಲ ನೀಡಿರುವ ಹೇಳಿಕೆ ಪ್ರಚೋದನಾಕಾರಿಯೇ ಎಂಬ ಬಗ್ಗೆ ಚರ್ಚೆಗೆ ಬರುವರೇ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ಹೋರಾಟ ವೇದಿಕೆ ಅಧ್ಯಕ್ಷ ಎಸ್. ಅರುಣ್‌ಕುಮಾರ್ ಮಹದೇವಪ್ಪಗೆ ಸವಾಲ್ ಹಾಕಿದ್ದಾರೆ.



ಅರುಣ್‌ಕುಮಾರ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ಹೋರಾಟ ವೇದಿಕೆ ಹಾಗೂ ಒಳ ಮೀಸಲಾತಿಗಾಗಿ ಹೋರಾಟ ಸಮಿತಿಯ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣಗಳನ್ನು ದಾಖಲಿಸಿ ತಮ್ಮನ್ನು ಸದೆಬಡಿಯುವ ಉದ್ದೇಶವಿದ್ದರೆ ಅದು ಈಡೇರುವುದಿಲ್ಲ. ಒಂದಲ್ಲ ನೂರು ಪ್ರಕರಣಗಳನ್ನೂ ನ್ಯಾಯಾಲಯದಲ್ಲಿ ಎದುರಿಸಲು ನಾವು ಸಿದ್ಧ ಎಂದರು.

ಮಹದೇವಪ್ಪ ಅವರು ಮಹದೇಶ್ವರ ಬೆಟ್ಟಕ್ಕೆ ಸಚಿವರಾಗಿ ಹೋಗಿದ್ದ ಕಾರಣ ಗರ್ಭಗುಡಿಗೆ ಪ್ರವೇಶ ನೀಡಲಾಗಿತ್ತು. ಈ ವೇಳೆ ಅವರು ಮಂಗಳಾರತಿ ಸ್ವೀಕರಿಸುವುದಿಲ್ಲ ಎಂದು ನಿರಾಕರಿಸಿದ್ದಾರೆ. ಇದು ಎಲ್ಲರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದೆ. ಈ ಕುರಿತು ದೂರು ನೀಡಿದ್ದರೂ ಪೊಲೀಸರು ಕ್ರಮ ಕೈಗೊಂಡಿಲ್ಲ. ಇದೇ ರೀತಿ ಮಹದೇವಪ್ಪ ಅವರ ವಿರುದ್ಧ ನಾವು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದೇವೆ. ಈ ಕುರಿತ ಸ್ಥಿತಿಗತಿಯನ್ನು ತಿಳಿಯಲೆಂದು ನಗರ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಲಿದ್ದೇವೆ. ಒಂದು ವೇಳೆ ಅವರು ನಕಾರಾತ್ಮಕ ಉತ್ತರ ನೀಡಿದರೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಪೊಲೀಸರನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಒಳ ಮೀಸಲಾತಿ ಕುರಿತಂತೆ ಸುಪ್ರೀಂಕೋರ್ಟ್ ಆದೇಶ ಬಂದು ಸುಮಾರು ಒಂದು ವರ್ಷವೇ ಆಗಿದೆ. ತೆಲಂಗಾಣ, ಆಂಧ್ರ ಈ ಕುರಿತು ಕ್ರಮ ಕೈಗೊಂಡಿವೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ಢೋಂಗಿತನ ಪ್ರದರ್ಶಿಸುತ್ತಿದೆ. ಹೊಲೆಯ, ಮಾದಿಗ ಸಮುದಾಯ ಕುರಿತಂತೆ ಸದಾಶಿವ ಆಯೋಗ, ಮಾಧುಸ್ವಾಮಿ ವರದಿಗಳಲ್ಲಿ ದತ್ತಾಂಶ ಇದೆ. ಇವನ್ನೇ ಬಳಸಿಕೊಂಡು ಒಳ ಮೀಸಲಾತಿ ಜಾರಿಗೊಳಿಸಬಹುದಾಗಿತ್ತು. ಆದರೆ ಈ ಸಮುದಾಯಗಳನ್ನು ವಂಚಿಸುವ ಹುನ್ನಾರ ಸರ್ಕಾರದ್ದಾಗಿದೆ ಎಂದು ದೂರಿದರು.

ಒಳ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಭಾಸ್ಕರ್ ಪ್ರಸಾದ್ ಮಾತನಾಡಿ, ಒಳ ಮೀಸಲಾತಿ ಹಕ್ಕಿಗಾಗಿ ನಮ್ಮ ಹೋರಾಟ ನಡೆಯುತ್ತಿದೆ. ನಮ್ಮ ಹೋರಾಟಕ್ಕೆ ಹೆದರಿರುವ ಸರ್ಕಾರ ನಮ್ಮ ಸಮುದಾಯದವರನ್ನೇ ಎತ್ತಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಒಬ್ಬ ಪೇಮೆಂಟ್ ಗಿರಾಕಿ. ಇಂತಹವರು ನಮ್ಮ ಸಮುದಾಯದ ಕುಲಕಂಟಕರು ಎಂದು ವಾಗ್ದಾಳಿ ನಡೆಸಿದರು. ಸುದ್ದಿಗೋಷ್ಠಿಯಲ್ಲಿ ಬೆಳ್ತೂರು ಎಂ.ಶಿವಕುಮಾರ್, ಪ್ರಸನ್ನ ಚಕ್ರವರ್ತಿ, ಬಿ.ಪಿ.ಶಿವಮಲ್ಲು ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಅಭಿವೃದ್ಧಿಯ ಹರಿಕಾರ ನಾಯಕ ಸಮಾಜದ ಪರ್ಯಾಯ
ಪದವಾದ ಪರಿವಾರವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು
ಪ್ರಮುಖ ಪಾತ್ರವಹಿಸಿದ ಮಾಜಿ ಸಂಸದರಾದ
ಶ್ರೀ ಪ್ರತಾಪ್ ಸಿಂಹರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ನಾಯಕ ಸಮುದಾಯದ ಮುಖಂಡರುಗಳು
ಟೆನ್ನಿಸ್ ಗೋಪಿ


|| ಓಂ ||
|| ಶ್ರೀ ವೀರಮಡಿವಾಳ ಮಾಚಿದೇವ ನಮಃ ||
ಕರುನಾಡ ಕುವರ, ಮೈಸೂರಿನ ಮಾನಸ ಪುತ್ರ
ರಾಜ್ಯ ರಾಜಕಾರಣದ ಮುಂದಿನ ಧ್ರುವತಾರೆ,
ನವ ಮೈಸೂರು ನಿರ್ಮಾಣದ ಆದರ್ಶ ರಾಜಕಾರಣಿ
ಶ್ರೀ ಪ್ರತಾಪ್ ಸಿಂಹ ಅವರಿಗೆ
ಜನುಮದಿನದ
ಶುಭಾಶಯಗಳು
ಮಾದುರಾಜ್ ಮಡಿವಾಳ (ವೈಭವ್) M.Sc.,
ಅಧ್ಯಕ್ಷರು
ಮೈಸೂರು ಜಿಲ್ಲಾ ವೀರಮಡಿವಾಳರ ಜಾಗೃತಿ ಯುವ ಬಳಗ (ರಿ.)


PRATHAP
SIMHA
Happy Birthday
ಮಾಜಿ ಸಂಸದರಾದ
ಶ್ರೀ ಪ್ರತಾಪ್ ಸಿಂಹ ಅವರಿಗೆ
ಜನುಮದಿನದ
ಶುಭಾಶಯಗಳು
ಪ್ರಕಟಣೆ : ಶ್ರೀ ಪ್ರತಾಪ್‌ಸಿಂಹ ಅಭಿಮಾನಿಗಳ ಬಳಗ ಮೈಸೂರು

ಮೈಸೂರು ಮಿತ್ರ ಶನಿವಾರ 21 ಜೂನ್ 2025

ಸಿದ್ದರಾಮಯ್ಯ ಸರ್ಕಾರದಲ್ಲಿ ಭಾರಿ ಭ್ರಷ್ಟಾಚಾರ, ಕಮಿಷನ್ ಹಾವಳಿ

ಸಚಿವರು, ಸಿಎಂ ಸಲಹೆಗಾರರಿಂದಲೇ ಬಯಲಾಗುತ್ತಿದೆ!

● ಕೇಂದ್ರ ಸಚಿವ ಕುಮಾರಸ್ವಾಮಿ ಲೇವಡಿ ● ಕಂದಾಯ ಇಲಾಖೆಯಲ್ಲಿ ರೇಟ್ ಫಿಕ್ಸ್; ವಸತಿ ಇಲಾಖೆಯಲ್ಲಿ ಕಮಿಷನ್ ಹಾವಳಿ

ಬೆಂಗಳೂರು, ಜೂ.20(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಪ್ರತೀ ಹಂತದಲ್ಲಿಯೂ ಕಮೀಷನ್ ಹಾವಳಿ ಹಾಗೂ ಭ್ರಷ್ಟಾಚಾರ ಮಿತಿ ಮೀರಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ನೇರ ಆರೋಪ ಮಾಡಿದ್ದಾರೆ.



ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದಕ್ಕೆ ಮುಖ್ಯಮಂತ್ರಿ ಸಲಹೆಗಾರ ಬಿ.ಆರ್.ಪಾಟೀಲ್ ಹಾಗೂ ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿಕೆಗಳೇ ಸಾಕ್ಷಿಯಾಗಿದೆ.

ವಸತಿ ಇಲಾಖೆಯಲ್ಲಿ ಕಮಿಷನ್ ಹಾವಳಿ ಎಷ್ಟಿದೆ ಎಂಬ ಕುರಿತ ಆಡಿಯೋ ವೈರಲ್ ಆಗಿದೆ. ಇದು ಆಶ್ಚರ್ಯದ ವಿಷಯವೇ ಅಲ್ಲ, ಭ್ರಷ್ಟಾಚಾರ ಅಷ್ಟರ ಮಟ್ಟಿಗೆ ಮಿತಿ ಮೀರಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವರು ಮತ್ತು ಮುಖ್ಯಮಂತ್ರಿ ಸಲಹೆಗಾರರು ನೀಡಿರುವ ಹೇಳಿಕೆ ನಿಮಗೆ ಅಚ್ಚರಿನಾ ಎಂಬುದಾಗಿ ಸುದ್ದಿಗಾರರನ್ನು ಪ್ರಶ್ನಿಸಿದರಲ್ಲದೆ, ಇದು ನಿರಂತರವಾಗಿ ನಡೆಯುತ್ತಲೇ ಇದೆ. ಸೈಟ್ ಕೊಡಬೇಕಾದರೆ ದುಡ್ಡು, ಗುತ್ತಿಗೆ ಹಣ ನೀಡಲು ಕಮಿಷನ್, ಸರ್ಕಾರದ ಎಲ್ಲ ಇಲಾಖೆಗಳದ್ದೂ ಇದೇ ಕರ್ಮ.

ಕೃಷ್ಣ ಬೈರೇಗೌಡ ಏನು ಹೇಳಿದ್ದಾರೆ ಎಂಬುದನ್ನು ನಾನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ, ಯಾವುದಕ್ಕೆ ಎಷ್ಟೆಷ್ಟು ರೇಟ್ ಫಿಕ್ಸ್ ಮಾಡಿದ್ದಾರೆ ಎಂಬುದಾಗಿ ಅವರು ನೇರವಾಗಿ ಹೇಳಿದ್ದಾರೆ, ತಮ್ಮ ಇಲ್ಲಾಖೆಗಳಲ್ಲಿ ಏನೆಲ್ಲಾ ನಡೆಯುತ್ತಿದೆ ಎಂಬುದು ಆಯಾ ಇಲಾಖೆಯ ಮಂತ್ರಿಗಳಿಗೆ ಗೊತ್ತಿದೆ.

ಕೃಷ್ಣಬೈರೇಗೌಡ ಅವರ ಇಲಾಖೆಯಲ್ಲಿ ಯಾವ ರೀತಿ ಕೆಲಸ ನಡೆಯುತ್ತಿದೆ ಎಂಬುದನ್ನು ಅವರೇ ಹೇಳಿದ್ದಾರೆ. ಈ ಸರ್ಕಾರ ಯಾವ ರೀತಿ ನಡೆಯುತ್ತಿದೆ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ.

ಬಿ.ಆರ್.ಪಾಟೀಲ್ ಹೇಳಿರುವುದು ನಿಜ, ವಸತಿ ಇಲಾಖೆಯಲ್ಲಿ ಹಣ ಕೊಟ್ಟರೆ ಮಾತ್ರ ಅನುದಾನ ಬಿಡುಗಡೆ ಆಗುತ್ತಿದೆ ಎಂದಿದ್ದಾರೆ. ಇದನ್ನು ನಾನಾಗಲಿ, ವಿರೋಧ ಪಕ್ಷವಾಗಲಿ ಹೇಳುತ್ತಿಲ್ಲ. ಸಾಕ್ಷಾತ್ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರು, ಮುಖ್ಯಮಂತ್ರಿಗಳ ಸಲಹೆಗಾರರೇ ಹೇಳಿದ್ದಾರೆ. ಈಗ ಚೆನ್ನಾಗಿ ಹಣ ಲೂಟಿ ಹೊಡೆದರೆ ಮುಂದೆ ಚುನಾವಣೆ ನಡೆಸಬಹುದು ಎಂಬುದು ಇವರ ಉದ್ದೇಶ ಎಂದರು.

ಕಾನೂನು ಹೋರಾಟ: ಕೇತಗಾನಹಳ್ಳಿ ಭೂಮಿ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನು ಹೋರಾಟ ಮಾಡುತ್ತಿದ್ದೇನೆ. ಕಾನೂನು ವ್ಯಾಪ್ತಿಯಲ್ಲಿ ಖರೀದಿಸಿರುವುದಾಗಿ ನಾನು ಮೊದಲೇ ಹೇಳಿದ್ದೇನೆ. ರಾಜ್ಯ ಸರ್ಕಾರ ರಾಜಕೀಯ ದುರುದ್ದೇಶದಿಂದ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿದರು.

ಭೂಮಿ ವಿವಾದ ತನಿಖೆಗೆ ರಚಿಸಿರುವ ಎಸ್ಐಟಿ ಕಾರ್ಯಕ್ಕೆ ಹೈಕೋರ್ಟ್ ತಡೆ ನೀಡಿದ್ದು, 40 ವರ್ಷಗಳ ಹಿಂದೆ ಖರೀದಿ ಮಾಡಿದ ಭೂಮಿ, ಯಾವುದೇ ಒತ್ತುವರಿ ಆಗಿಲ್ಲ, ನ್ಯಾಯಾಲಯದಲ್ಲಿ ತೀರ್ಮಾನ ಆಗುತ್ತದೆ. ರಾಜ್ಯ ಸರ್ಕಾರ ಕೇಂದ್ರದ ಮೇಲೆ ರಾಜಕೀಯ ದ್ವೇಷ ಆರೋಪ ಮಾಡುತ್ತಿದೆ. ಕರ್ನಾಟಕದಲ್ಲಿ ಇವರು ಮಾಡುತ್ತಿರುವುದು ಏನು? ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಇಟ್ಟುಕೊಂಡು ದ್ವೇಷ ರಾಜಕಾರಣ ಮಾಡುತ್ತಿದ್ದಾರೆ. ಇದಕ್ಕೆಲ್ಲ ಕಾಲವೇ ಉತ್ತರ ನೀಡುತ್ತದೆ ಎಂದರು.

ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದರೆ ನಾನೇ ಬಟ್ಟೆ ಹೊಲಿಸಿಕೊಡುತ್ತೇನೆ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಅಹಂಕಾರದ ಮಾತುಗಳು. ನನಗೆ ಅಂತಹ ದಾರಿದ್ರ್ಯ ಇನ್ನೂ ಬಂದಿಲ್ಲ.

ಆ ವ್ಯಕ್ತಿಯಿಂದ ಬಟ್ಟೆ ಹೊಲಿಸಿಕೊಳ್ಳುವಷ್ಟು ದಾರಿದ್ರ್ಯ ಈ ನಾಡಿನ ಜನತೆ ನನಗೆ ಕೊಟ್ಟಿಲ್ಲ. ದಾರಿದ್ರ್ಯ ಇರುವುದು ಅವರಿಗೆ, ಮನುಷ್ಯತ್ವದ ದಾರಿದ್ರ್ಯ ಅವರಿಗಿದೆ. ಜನರಿಂದ ಕೊಳ್ಳೆ ಹೊಡೆದ ಪಾಪದ ಹಣದಿಂದ ನಾನು ಬಟ್ಟೆ ಹೊಲಿಸಿ ಕೊಳ್ಳಬೇಕೇ, ನನಗೆ ಬಟ್ಟೆ ಬೇಕಾದರೆ ನಾಡಿನ ಜನರಿದ್ದಾರೆ, ನನ್ನನ್ನು ಇಲ್ಲಿಯವರೆಗೂ ಬೆಳೆಸಿರುವ ಅವರೇ ತಂದು ಕೊಡುತ್ತಾರೆ. ಪಾಪದ ಹಣ, ಲೂಟಿ ಹೊಡೆದಿರುವ ಹಣದಿಂದ ಬಟ್ಟೆ ತರಿಸಿಕೊಳ್ಳಬೇಕಾ ಎಂದು ವಾಗ್ದಾಳಿ ನಡೆಸಿದರು.

ಕೇಂದ್ರದ ಮಾರ್ಗಸೂಚಿಯಂತೆ ವಸತಿ ಮೀಸಲಾತಿ

ಬೆಂಗಳೂರು, ಜೂ.20– ಪ್ರಧಾನಮಂತ್ರಿ ಅವರ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ 15–ಅಂಶಗಳ ಕಾರ್ಯಕ್ರಮದ (2019) ಮಾರ್ಗಸೂಚಿಯಂತೆಯೇ ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗೆ ಶೇ.15 ಮೀಸಲು ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



ಕೇಂದ್ರ ಮತ್ತು ರಾಜ್ಯದ ಅನುಷ್ಠಾನ ಸಂಸ್ಥೆಗಳು ಅಲ್ಪಸಂಖ್ಯಾತರಿಗೆ ಶೇ 15ರಷ್ಟು ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಮೀಸಲಿಡುವಂತೆ ಕೇಂದ್ರ ಸರ್ಕಾರ ಸ್ಪಷ್ಟ ನಿರ್ದೇಶನ ನೀಡಿದೆ. ಕೇಂದ್ರದ ಮಾರ್ಗಸೂಚಿಗಳಿಗೆ ಅನುಗುಣವಾಗಿಯೇ ಕ್ರೈಸ್ತರು, ಜೈನರು, ಮುಸ್ಲಿಮರು ಸೇರಿದಂತೆ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಮೀಸಲು ನೀಡಲು ಸಚಿವ ಸಂಪುಟ ಅನುಮೋದಿಸಿದೆ. ಈ ಮಾರ್ಗಸೂಚಿಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೇ ಹೊರಡಿಸಿದೆ. ಹಲವು ವರ್ಷಗಳಿಂದ ಈ ನೀತಿ ಜಾರಿಯಲ್ಲಿದೆ. ಪ್ರಧಾನ ಮಂತ್ರಿ ಆವಾಸ್‌ನಂತಹ ಕೇಂದ್ರ ಯೋಜನೆಗಳಲ್ಲೇ ಶೇ.15ರಷ್ಟು ಮೀಸಲು ನಿಗದಿ ಮಾಡಲಾಗಿದೆ ಎಂದಿದ್ದಾರೆ. ಅಲ್ಪಸಂಖ್ಯಾತರಿಗೆ ಶೇ.15ರಷ್ಟು ಮೀಸಲಿಡುವುದು ಅಸಾಂವಿಧಾನಿಕ ಎನ್ನುವುದಾದರೆ ಕೇಂದ್ರ ಸರ್ಕಾರ ಏಕೆ ಪಾಲನೆ ಮಾಡುತ್ತಿದೆ. ಎಲ್ಲಾ ರಾಜ್ಯಗಳಿಗೆ ಏಕೆ ಮಾರ್ಗಸೂಚಿ ಕಳುಹಿಸಿದೆ ಎಂದು ಪ್ರಶ್ನಿಸಿದ್ದಾರೆ.

ಒಂದನೇ ಪುಟದಿಂದ

15 ಸಾವಿರ ಮಂದಿ ಯೋಗ ಪ್ರದರ್ಶನ

1 ಸಾವಿರ ವಿದ್ಯಾರ್ಥಿಗಳು ಆಗಮಿಸಲಿದ್ದಾರೆ. ಉಳಿದಂತೆ ವಿವಿಧ ಯೋಗ ಸಂಸ್ಥೆಗಳ ಯೋಗಪಟುಗಳು, ಸರ್ಕಾರದ ವಿವಿಧ ಇಲಾಖೆಯ ಸಿಬ್ಬಂದಿ, ಸಾರ್ವಜನಿಕರು, ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಒಟ್ಟು 15 ಸಾವಿರಕ್ಕೂ ಹೆಚ್ಚು ಮಂದಿ ಸಾಮೂಹಿಕ ಯೋಗ ಪ್ರದರ್ಶನ ಮಾಡಲಿದ್ದಾರೆ.

ಯೋಗ ಪ್ರದರ್ಶನಕ್ಕೆ ಆಗಮಿಸುವ ಯೋಗಪಟುಗಳ ಸುರಕ್ಷತೆಗಾಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಸ್ಥಳದಲ್ಲಿ ಆಂಬುಲೆನ್ಸ್ ಸೇರಿದಂತೆ ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ವಿವಿಧ ಬಡಾವಣೆಗಳಿಂದ ಅರಮನೆಗೆ ಆಗಮಿಸುವ ಯೋಗಪಟುಗಳಿಗಾಗಿ ಸಾರಿಗೆ ಸಂಸ್ಥೆಯಿಂದ ಮುಂಜಾನೆಯಿಂದಲೇ ಬಸ್ ಸಂಚಾರದ ವ್ಯವಸ್ಥೆ ಕಲ್ಪಿಸಲಾಗಿದೆ. ಯೋಗ ಪ್ರದರ್ಶನದ ಬಳಿಕ ಚಾಮುಂಡಿ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಅರಮನೆ ಆವರಣದಲ್ಲಿ 40X25 ಅಡಿ ಅಳತೆಯ ಮುಖ್ಯ ವೇದಿಕೆ ನಿರ್ಮಿಸಲಾಗಿದ್ದು, ಅದಕ್ಕೆ ಎಲ್ಇಡಿ ಪರದೆ ಅಳವಡಿಸಲಾಗಿದೆ. ಅದರ ಪಕ್ಕ 20X15 ಅಡಿ ಅಳತೆಯ ಮತ್ತೊಂದು ವೇದಿಕೆ ನಿರ್ಮಿಸಲಾಗಿದ್ದು, ಅದರ ಮೇಲೆ ಯೋಗ ಶಿಕ್ಷಕರು ಮಾರ್ಗದರ್ಶನ ನೀಡಲಿದ್ದಾರೆ.

ಬೆಳಗ್ಗೆ 6.30ಕ್ಕೆ ಅಂತರರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮದ ರೂಪು–ರೇಷೆಗಳ ಬಗ್ಗೆ ಯೋಗಪಟುಗಳಿಗೆ ಮಾಹಿತಿ ನೀಡಲಾಗುತ್ತದೆ. ಬಳಿಕ ಪ್ರಾರ್ಥನೆ, ನಾಲ್ಕು ನಿಮಿಷಗಳ ಕಾಲ ಚಲನೆಗೆ ಸಂಬಂಧಿಸಿದ ವ್ಯಾಯಾಮ, ಯೋಗ ಪ್ರದರ್ಶನಕ್ಕೆ ಅಗತ್ಯವಾದ ಕುತ್ತಿಗೆ, ಭುಜ, ಸೊಂಟ, ಮಂಡಿಯ ಚಲನ ಪ್ರಕ್ರಿಯೆ ಬಳಿಕ, ಬೆಳಗ್ಗೆ 7 ಗಂಟೆಗೆ ಯೋಗ ಪ್ರದ ರ್ಶನ ಆರಂಭವಾಗಲಿದೆ. 25 ನಿಮಿಷ ತಾಡಾಸನ, ಹಸ್ತಾಸನ, ಶಲಭಾಸನ, ಪಾದಹಸ್ತಾಸನ, ಅರ್ಧ ಚಕ್ರಾಸನ, ತ್ರಿಕೋಣಾಸನ, ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಂಕಾಸನ, ಉತ್ಥಾನ ಮಂಡೂಕಾಸನ, ವಕ್ರಾಸನ, ಮಕರಾಸನ, ಭುಜಂಗಾಸನ, ಶಲಭಾಸನ, ಸೇತುಬಂದಾಸನ, ಉತ್ಥಾನ ಪಾದಾಸನ, ಅರ್ಧ ಹಲಾಸನ, ಪವನ ಮುಕ್ತಾಸನ, ಶವಾಸನಗಳನ್ನು ಪ್ರದರ್ಶಿಸಲಾಗುತ್ತದೆ. ಬಳಿಕ 15 ನಿಮಿಷಗಳ ಕಾಲ ಕಪಾಲಭಾತಿ, ನಾಡಿ ಶೋಧನ ಪ್ರಾಣಾಯಾಮ, ಶೀತಲಿ, ಭ್ರಾಮರಿ, ಧ್ಯಾನದ ಮೂಲಕ ಯೋಗ ದಿನದ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ.

ಕಾರ್ಯಕ್ರಮದಲ್ಲಿ ಶಾಸಕರಾದ ಟಿ.ಎಸ್.ಶ್ರೀವತ್ಸ, ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ವಿವೇಕಾನಂದ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ನೀವು ಜೆಡಿಎಸ್ ಜೊತೆ ಹೋಗಿ

ಹೋರಾಟಗಳನ್ನು ನಡೆಸುತ್ತಿದ್ದೀರಿ, ನಿಮ್ಮಲ್ಲಿ ಸಮನ್ವಯತೆ ಇಲ್ಲವೇ? ಮೊದಲು ನೀವು ಪ್ರತ್ಯೇಕ ಸಭೆಗಳನ್ನು ಮಾಡಿದಿರಿ, ಅವರೂ ಅದೇ ದಾರಿ ಹಿಡಿದಿದ್ದಾರೆ. ಇದೆಲ್ಲಾ ಇನ್ನು ಮುಂದೆ ಬೇಡ, ಸಮನ್ವಯ ಸಮಿತಿ ಏಕೆ ರಚನೆ ಏಕೆ ಆಗಿಲ್ಲ. ಮೊದಲು ಕುಮಾರಸ್ವಾಮಿ ಜೊತೆ ಮಾತನಾಡಿ, ಸಮಿತಿ ರಚಿಸಿ, ಅಲ್ಲಿಯೇ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಿ. ಜೆಡಿಎಸ್ ಬಿಟ್ಟು ಸ್ವತಂತ್ರವಾಗಿ ಚುನಾವಣೆ ಎದುರಿಸಿದರೆ 130ರಿಂದ 140 ಸ್ಥಾನಗಳನ್ನು ಗೆಲ್ಲುತ್ತೇವೆಂಬ ಭ್ರಮೆ ಬೇಡ. ಚುನಾವಣೆಗೆ ಹೋದರೆ ಸ್ವಂತ ಬಲದ ಮೇಲೆ ಅಧಿಕಾರ ಹಿಡಿಯಬಹುದೆಂಬ ಮಾತುಗಳು ನಮ್ಮ ಕಿವಿಗೆ ಬಿದ್ದಿವೆ, ಇಂತಹ ಮಾತುಗಳಲ್ಲಿ ಅರ್ಥವಿಲ್ಲ.

ಕಾಂಗ್ರೆಸ್‌ನ ಮತಬ್ಯಾಂಕ್ ಎದುರಿಸಲು ಮೈತ್ರಿ ಪಕ್ಷಗಳ ಹೋರಾಟ ಅವಶ್ಯ, ಕಳೆದ ಲೋಕಸಭಾ ಚುನಾವಣೆಯಲ್ಲಿ ಇದು ನಿಸ್ಸಂಶಯವಾಗಿ ಸಾಬೀತಾಗಿದೆ, ಇಷ್ಟಾದ ನಂತರವೂ ಒಬ್ಬಂಟಿಯಾಗಿ ಚುನಾವಣೆ ಎದುರಿಸಬೇಕೆಂಬ ನಿಲುವು ಸರಿಯಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ನೀವು ಒಟ್ಟಾಗಿ ಹೋದರೆ 130–140 ಅಲ್ಲ, 150 ಮುಟ್ಟಬಹುದು ಎಂಬ ಮಾಹಿತಿ ನಮಗಿದೆ, ಗೊಂದಲ ಮಾಡಿ ಕೊಳ್ಳಬೇಡಿ, ಸಂಘಟನೆಗೆ ಒತ್ತುಕೊಡಿ ಎಂದಿದ್ದಾರೆ.

ನಮಗೆಲ್ಲವೂ ತಿಳಿದಿದೆ, ಕೇಂದ್ರ ಬಿಜೆಪಿ ಏನು ತೀರ್ಮಾನ ಕೈಗೊಳ್ಳುವುದೋ ಅದಕ್ಕೆ ನೀವುಗಳು ಬದ್ಧರಾಗಬೇಕು, ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವವರು ನಮಗೆ ಬೇಕಿಲ್ಲ ಎಂದು ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ನಿಮ್ಮ ಹೋರಾಟ ಏನೇನು ಸಾಲದು: ಕರ್ನಾಟಕ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ, ಇದರ ವಿರುದ್ಧ ನೀವು ನಡೆಸುತ್ತಿರುವ ಹೋರಾಟ ಏನೂ ಸಾಲದು. ಮತ್ತಷ್ಟು ತೀವ್ರಗೊಳಿಸಿ ಎಂದಿದ್ದಾರೆ.

ಕರ್ನಾಟಕಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದ ಅಮಿತ್ ಷಾ, ತಡರಾತ್ರಿ ಹಾಗೂ ಇಂದು ಮುಂಜಾನೆ ಪ್ರಮುಖ ನಾಯಕರನ್ನು ಕರೆಸಿಕೊಂಡು ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದಾರೆ.

ರಾಜ್ಯಾಧ್ಯಕ್ಷರು ಹಾಗೂ ವಿಧಾನಸಭೆ ಪ್ರತಿಪಕ್ಷ ನಾಯಕರ ನಡುವೆಯೇ ಸಮನ್ವಯತೆ ಇಲ್ಲ, ಹಿರಿಯರನ್ನು ಕಡೆಗಣಿಸುತ್ತಿದ್ದೀರಿ ಎಂಬ ಆರೋಪಗಳಿವೆ. ಕೇವಲ ಕಿರಿಯರಿಂದಲೇ ಪಕ್ಷ ಕಟ್ಟಲಾಗದು, ಹಿರಿಯರ ಮಾರ್ಗದರ್ಶನವೂ ಇರಬೇಕು. ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಿ, ನಿಮಗೆ ಈ ಹಿಂದೆಯೇ ಈ ಮಾತುಗಳನ್ನು ಹೇಳಿದರೂ ಸರಿಪಡಿಸಿಕೊಂಡಿಲ್ಲ ಎಂದು ಖಾರವಾಗಿ ನುಡಿದಿದ್ದಾರೆ.

ರಾಜ್ಯ ನಾಯಕರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಅಮಿತ್ ಷಾ ನಂತರ ಎರಡನೇ ಬಾರಿಗೆ ಯಡಿಯೂರಪ್ಪ ಅವರನ್ನು ಕರೆಸಿಕೊಂಡು ಒಂದು ತಾಸಿಗೂ ಹೆಚ್ಚು ಕಾಲ ಚರ್ಚೆ ಮಾಡಿದ್ದಾರೆ.

ನಿಮ್ಮ ಮಾರ್ಗದರ್ಶನದ ಅಗತ್ಯವಿದ್ದು, ಸಂಘಟನೆ ಮತ್ತು ಪಕ್ಷ ಅಧಿಕಾರಕ್ಕೆ ತರಲು ಸಮನ್ವಯತೆಗೆ ಮುಂದಾಳತ್ವ ವಹಿಸಿ ಎಂಬ ಸಲಹೆ–ಸೂಚನೆ ನೀಡಿದ್ದಾರೆ. ಸರ್ಕಾರದ ವಿರುದ್ಧದ ಹೋರಾಟದಲ್ಲಿ ಕೈಜೋಡಿಸಿ, ಸಮಯ ಸಿಕ್ಕಾಗ ಪಕ್ಷದ ಕಚೇರಿಯಲ್ಲಿ ನಾಯಕರುಗಳನ್ನು ಭೇಟಿ ಮಾಡಿ ಎಂಬ ಸಲಹೆ ನೀಡಿದ್ದಾರೆ.

ಅಮಿತ್ ಷಾ ಭೇಟಿ ನಂತರ ಯಡಿಯೂರಪ್ಪ ಪಕ್ಷದ ರಾಜ್ಯ ಕಚೇರಿಗೆ ನೇರವಾಗಿ ಬಂದು ಸುಮಾರು ನಾಲ್ಕು ತಾಸುಗಳ ಕಾಲ ಕಾರ್ಯಕರ್ತರೊಂದಿಗೆ ಚರ್ಚಿಸಿದರು.

ಸರ್ಕಾರದ ಅಡಿಪಾಯ ನಡುಗುತ್ತೆ!!

ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕ ಪಾಟೀಲ್, ಸಚಿವ ಜಮೀರ್ ಅವರ ಆಪ್ತ ಕಾರ್ಯದರ್ಶಿ ಸರ್ಫರಾಜ್ ಖಾನ್ ಅವರೊಂದಿಗೆ ಮಾತನಾಡಿರುವ ದೂರವಾಣಿ ಸಂಭಾಷಣೆಯ ಆಡಿಯೋ ಕ್ಲಿಪ್ ಇದು. ಪಾಟೀಲ್ ತಮ್ಮ ಕ್ಷೇತ್ರದೊಳಗಿನ ಹಳ್ಳಿಗಳಲ್ಲಿ ಮನೆ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಲಂಚದ ಬಗ್ಗೆ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದು ವಸತಿ ಸಚಿವರ ಆಪ್ತ ಕಾರ್ಯದರ್ಶಿಯನ್ನು ಪ್ರಶ್ನಿಸಿದ್ದಾರೆ.

ಲಂಚ ನೀಡಿದವರಿಗೆ ಮಾತ್ರ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ. ನನ್ನ ಸ್ವಂತ ಸರ್ಕಾರದ ವಿರುದ್ಧ ಈ ದೂರು ನೀಡಲು ನನಗೆ ಬೇಸರವಾಗಿದೆ. ವಿವಿಧ ಗ್ರಾಮಗಳಲ್ಲಿ ಒಟ್ಟು 950 ಮನೆಗಳನ್ನು ಫಲಾನುಭವಿಗಳಿಂದ ಹಣ ಪಡೆದು ಹಂಚಿಕೆ ಮಾಡಲಾಗಿದೆ. ನನ್ನ ಶಿಫಾರಸು ಪತ್ರಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಬದಲಾಗಿ, ಗ್ರಾಮ ಪಂಚಾಯತ್ ಅಧ್ಯಕ್ಷರು ಸಲ್ಲಿಸಿದ ಪಟ್ಟಿಗೆ ಆದ್ಯತೆ ನೀಡಲಾಗಿದೆ ಎಂದು ಶಾಸಕ ಪಾಟೀಲ್ ಹೇಳಿದ್ದಾರೆ.

ಆಡಿಯೋದಲ್ಲಿ ಕಾರ್ಯದರ್ಶಿ ಸರ್ಫರಾಜ್ ಖಾನ್, ಪಾಟೀಲ್ ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿರುವುದು ಸ್ಪಷ್ಟವಾಗಿದೆ. ತಮ್ಮ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸುವಂತೆ ಕೇಳುತ್ತಿದ್ದಾರೆ ಮತ್ತು ಅವರಿಗೂ ಮನೆಗಳನ್ನು ಹಂಚಿಕೆ ಮಾಡಲಾಗುವುದು ಎಂದು ಭರವಸೆ ನೀಡುತ್ತಿದ್ದಾರೆ. ಆಡಿಯೋ ಕ್ಲಿಪ್ ಬಿಡುಗಡೆಯಾದ ನಂತರ, ಶಾಸಕ ಪಾಟೀಲ್ ಯಾವುದೇ ಸಾರ್ವಜನಿಕ ಪ್ರತಿಕ್ರಿಯೆಯನ್ನು ನೀಡಿಲ್ಲ. ಕಾಂಗ್ರೆಸ್ ಪಕ್ಷದಿಂದಲೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಏತನ್ಮಧ್ಯೆ, ಕರ್ನಾಟಕ ಬಿಜೆಪಿ ಘಟಕ ಆಡಿಯೋ ಕ್ಲಿಪ್ ಬಗ್ಗೆ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದು, ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರವನ್ನು ಬೆಂಬಲಿಸುತ್ತದೆ ಎಂದು ಹೇಳಿದೆ.

ಕಾಂಗ್ರೆಸ್ ಶಾಸಕ ಮತ್ತು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರು ಈ ಹಿಂದೆ ಕರ್ನಾಟಕ ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ಭ್ರಷ್ಟಾಚಾರದಲ್ಲಿ ನಂಬರ್ 1 ಸ್ಥಾನದಲ್ಲಿದೆ ಎಂದು ಹೇಳಿದ್ದರು. ಈಗ ಆ ಹೇಳಿಕೆಯನ್ನು ಬಲಪಡಿಸುತ್ತಾ, ಕಾಂಗ್ರೆಸ್ ಶಾಸಕ ಬಿ.ಆರ್.ಪಾಟೀಲ್ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಗಂಭೀರ ಆರೋಪಗಳನ್ನು ಹೊರಿಸಿದ್ದಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ವಿಜಯೇಂದ್ರ ಕಾರ್ಯ ವೈಖರಿಗೆ ಅಮಿತ್ ಷಾ ಅಸಮಾಧಾನದ ಬೆನ್ನಲ್ಲೇ ಭಿನ್ನರ ಸಭೆ; ಅಧ್ಯಕ್ಷರ ಬದಲಾವಣೆಗೆ ಹೈಕಮಾಂಡ್ ಮೇಲೆ ಒತ್ತಡ

ಕೇಂದ್ರ ಸಚಿವ ಸೋಮಣ್ಣರ ಮೂಲಕ ಸಂದೇಶ



ಬೆಂಗಳೂರಿಗೆ ಭೇಟಿ ನೀಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಭಿನಂದಿಸಿದರು.

ಬೆಂಗಳೂರು, ಜೂ.20– ಪಕ್ಷದ ಎಲ್ಲಾ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿಫಲರಾಗಿದ್ದಾರೆ ಎಂದು ಕೇಂದ್ರ ಗೃಹ ಮಂತ್ರಿ ಅಮಿತ್ ಷಾ ಅಸಮಾಧಾನ ವ್ಯಕ್ತಪಡಿಸಿರುವ ಬೆನ್ನಲ್ಲೇ ವಿಜಯೇಂದ್ರ ಬದಲಾವಣೆಗೆ ಭಿನ್ನಮತೀಯರು ಪಟ್ಟು ಹಿಡಿದಿದ್ದಾರೆ.

ಮಾಜಿ ಸಂಸದ ಜಿಎಂ ಸಿದ್ದೇಶ್ವರ್ ಅವರ ಬೆಂಗಳೂರಿನ ನಿವಾಸದಲ್ಲಿ ಮಾಜಿ ಮಂತ್ರಿ ಹಾಗೂ ಶಾಸಕ ರಮೇಶ ಜಾರಕಿಹೊಳಿ ನೇತೃತ್ವದಲ್ಲಿ ಸಭೆ ಸೇರಿದ ಭಿನ್ನಮತೀಯರು ನಾಯಕರು ವಿಜಯೇಂದ್ರ ಬದಲಾವಣೆಗೆ ಒತ್ತಡ ತೀವ್ರ ಗೊಳಿಸಲು ನಿರ್ಧರಿಸಿದ್ದಾರೆ.

ಮಾಜಿ ಸಚಿವರಾದ ಅರವಿಂದ ಲಿಂಬಾವಳಿ ಕುಮಾರ್ ಬಂಗಾರಪ್ಪ ಸೇರಿದಂತೆ ಹಲವರು ಪಾಲ್ಗೊಂಡಿದ್ದ ಈ ಸಭೆಗೆ ಕೇಂದ್ರ ರೈಲ್ವೆ ಮಂತ್ರಿ ಸೋಮಣ್ಣ ಅವರು ಆಗಮಿಸಿ ಕೆಲ ಹೊತ್ತು ಮಾತುಕತೆ ನಡೆಸುವ ಮೂಲಕ ಅಚ್ಚರಿ ಮೂಡಿಸಿದರು.


ಹೈಕಮಾಂಡ್ ಸೂಚನೆಯ ಮೇರೆಗೆ ಸೋಮಣ್ಣ ಅವರು ಈ ಸಭೆಗೆ ಹಾಜರಾಗಿದ್ದರು ಎಂದು ಉನ್ನತ ಮೂಲಗಳು ತಿಳಿಸಿವೆ. ಇದೇ ವೇಳೆ ಭಿನ್ನಮತೀಯರು ತಮ್ಮ ನಿಲುವನ್ನು ಸೋಮಣ್ಣ ಅವರಿಗೆ ತಿಳಿಸಿದ್ದು ಅದನ್ನು ವರಿಷ್ಠರಿಗೆ ರವಾನಿಸುವಂತೆ ಮನವಿ ಮಾಡಿರುವುದಾಗಿ ಗೊತ್ತಾಗಿದೆ.

ವಿಜಯೇಂದ್ರ ಅವರಿಗೆ ಪಕ್ಷವನ್ನು ಮುನ್ನಡೆಸಲು ಹೈಕಮಾಂಡ್ ಅವಕಾಶ ನೀಡಿದೆ. ಆದರೆ ಅವರು ಇದನ್ನು ಸದುಪಯೋಗಪಡಿಸಿಕೊಳ್ಳಲು ವಿಫಲವಾಗಿದ್ದಾರೆ ಯಾವುದೇ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಮಿತ್ರ ಪಕ್ಷ ಜೆಡಿಎಸ್ ಜೊತೆಗೂ ಅವರು ಉತ್ತಮ ಬಾಂಧವ್ಯ ಹೊಂದಿಲ್ಲ. ಇಂಥವರು ಅಧ್ಯಕ್ಷರಾಗಿ ಮುಂದುವರೆದರೆ ಪಕ್ಷ ನೆಲಕಚ್ಚುವುದು ನಿಶ್ಚಿತ ಎಂದು ಹೇಳಿರುವ ಈ ನಾಯಕರು ಆದಷ್ಟು ಶೀಘ್ರ ವಿಜಯೇಂದ್ರ ಬದಲಾವಣೆಯಾಗಬೇಕು ಎಂದು ಸೋಮಣ್ಣ ಅವರಲ್ಲಿ ವಿವರಿಸಿದ್ದಾರೆ. ಈ ಬಣದ ನಾಯಕರು ಈಗಾಗಲೇ ತಮ್ಮ ನಿಲುವನ್ನು ಕೇಂದ್ರ ಮಂತ್ರಿಗಳಾದ ಪ್ರಹ್ಲಾದ ಜೋಶಿ ಮತ್ತು ಶೋಭಾ ಕರಂದ್ಲಾಜೆ ಅವರಿಗೂ ತಿಳಿಸಿದ್ದಾರೆ ಅವರೆಲ್ಲರೂ ಕೂಡ ಇವರಿಗೆ ಸಹ ಮತ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದ್ದು ತಮ್ಮ ಬೇಡಿಕೆಯ ಬಗ್ಗೆ ಹೈಕಮಾಂಡ್ ಗಮನ ಸೆಳೆಯಲು ಜೂನ್ 23ರಂದು ದೆಹಲಿಗೆ ತೆರಳಲು ತೀರ್ಮಾನಿಸಿದ್ದಾರೆ ಎಂದು ಗೊತ್ತಾಗಿದೆ.

ವಸತಿಯಲ್ಲಿ ಅಲ್ಪಸಂಖ್ಯಾತರಿಗೆ ಶೇ.15 ಮೀಸಲು; ಬಿಎಸ್‌ವೈ ಖಂಡನೆ

ಭ್ರಷ್ಟ ಕಾಂಗ್ರೆಸ್ ಸರ್ಕಾರ ಕಿತ್ತೊಗೆದು ಬಿಜೆಪಿ–ಜೆಡಿಎಸ್ ಆಡಳಿತ ತರಬೇಕಿದೆ

ಬೆಂಗಳೂರು, ಜೂ.20(ಕೆಎಂಶಿ)– ಸರ್ಕಾರಿ ವಸತಿ ಯೋಜನೆಗಳಲ್ಲಿ ಮುಸ್ಲೀಂ ಸಮುದಾಯಕ್ಕೆ ಶೇಕಡ 15ರಷ್ಟು ಮೀಸಲಾತಿ ನೀಡಿರುವುದನ್ನು ಖಂಡಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಹೇಗಾದರೂ ಸರಿ, ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ಕಿತ್ತೊಗೆದು ಬಿಜೆಪಿ–ಜೆಡಿಎಸ್ ಮೈತ್ರಿ ಆಡಳಿತ ತರಬೇಕಿದೆ ಎಂದಿದ್ದಾರೆ.



ರೇಸ್ ಕೋರ್ಸ್ ರಸ್ತೆಯ ಪಂಚತಾರಾ ಹೋಟೆಲ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಬ್ಯಾಂಕ್‌ಗಾಗಿ ಮುಸ್ಲಿಂ ಸಮುದಾಯಕ್ಕೆ ಮಿತಿ ಮೀರಿ ನೆರವು ನೀಡುತ್ತಿದೆ ಎಂದು ಕಿಡಿಕಾರಿದರು. ಪರಿಶಿಷ್ಟ ಜಾತಿ–ವರ್ಗದವರಿಗೆ ಯೋಜನೆಗಳನ್ನು ನೀಡುವ ಬದಲು ಬರೀ ಮುಸ್ಲೀಮರ ಓಲೈಕೆ ಮಾಡುವುದೇ ಈ ಸರ್ಕಾರದ ಧ್ಯೇಯೋದ್ದೇಶವಾಗಿದೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅಭಿವೃದ್ಧಿ ಸ್ಥಗಿತಗೊಂಡು ಜನರ ಸಂಕಷ್ಟ ಕೇಳುವವರು ಇಲ್ಲವಾಗಿದೆ. ಆಡಳಿತ ನಡೆಸುವ ಬದಲು ಬರೀ ಪ್ರಚಾರದಲ್ಲಿ ತಲ್ಲೀನರಾಗಿದ್ದಾರೆ. ನೀರಾವರಿ ಯೋಜನೆಗಳು ಸಂಪೂರ್ಣ ಸ್ಥಗಿತಗೊಂಡಿವೆ. ಇಡೀ ರಾಜ್ಯದಲ್ಲಿ ಒಂದು ಕಿಲೋಮೀಟರ್ ರಸ್ತೆ ಮಾಡಿಲ್ಲ, ಇಂತಹ ಸರ್ಕಾರ ನಮಗೆ ಬೇಕೇ ಎಂದು ಪ್ರಶ್ನಿಸಿದರು. ಇಂತಹ ಭ್ರಷ್ಟ ಸರ್ಕಾರವನ್ನು ಹೇಗಾದರೂ ಮಾಡಿ ಕಿತ್ತಾಕಿ, ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬರಬೇಕು ಎಂದರು.

ಬಿಜೆಪಿ–ಜೆಡಿಎಸ್ ಮೈತ್ರಿಯಲ್ಲಿ ಯಾವುದೇ ಗೊಂದಲ ಇಲ್ಲ. ಜೆಡಿಎಸ್ ಪಕ್ಷ ಸಂಘಟನೆಗಾಗಿ ಪ್ರವಾಸ ಕೈಗೊಂಡಿರುವುದನ್ನು ನಾನು ಸ್ವಾಗತಿಸುತ್ತೇನೆ.

ಜೆಡಿಎಸ್ ಜೊತೆಗಿನ ಮೈತ್ರಿ ಮುಂದುವರೆಯಲಿದೆ. ಇದರಲ್ಲಿ ಯಾರಿಗೂ ಸಂಶಯ ಬೇಡ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವೆ ನಂಬಿಕೆ ಮತ್ತು ವಿಶ್ವಾಸವಿದೆ. ಅದನ್ನು ಇಬ್ಬರೂ ಹಲವು ಬಾರಿ ಬಹಿರಂಗವಾಗಿ ತೋರ್ಪಡಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಅಪನಂಬಿಕೆಗಳು ಏಕೆ? ನಮ್ಮ ಮುಂದಿರುವ ಗುರಿ ಈ ಸರ್ಕಾರವನ್ನು ತೆಗೆದು ಮತ್ತೆ ನಮ್ಮ ಆಡಳಿತ ತರುವುದು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.06.2025 ಶನಿವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

● **ಮೈಸೂರು ವಿಶ್ವವಿದ್ಯಾನಿಲಯ, ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ (ಎಂಎಂಟಿಟಿಸಿ), ಆಂತರಿಕ ಗುಣಮಟ್ಟ ಖಾತರಿ ಘಟಕ (ಐಕ್ಯೂಎಸಿ), ಶೈಕ್ಷಣಿಕ ಬಹು ಮಾಧ್ಯಮ ಸಂಶೋಧನಾ ಕೇಂದ್ರ (ಇಎಂಆರ್‌ಸಿ), ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ (ಡಿಎಸ್‌ಡಬ್ಲ್ಯೂ), ಕಾಲೇಜು ಅಭಿವೃದ್ಧಿ ಮಂಡಳಿ (ಸಿಡಿಸಿ), ಮೈಸೂರು ವಿವಿ ಅಧ್ಯಾಪಕರ ಸಂಘ (ಎಂಯುಟಿಎ):** ಅಂತಾರಾಷ್ಟ್ರೀಯ ಯೋಗ ದಿನಾಚರಣೆ–2025, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ: ಯೋಗ ಗುರು ಡಿ. ಶ್ರೀಹರಿ, ಸ್ಥಳ: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಕ್ರೀಡಾಂಗಣ (ಗಂಗೋತ್ರಿ ಗ್ಲೇಡ್ಸ್), ಬೆಳಗ್ಗೆ 6 ಗಂಟೆಗೆ.

● **ಜೆಎಸ್ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಮತ್ತು ಆಯುಷ್ ಸಚಿವಾಲಯ:** ಅಂತಾರಾಷ್ಟ್ರೀಯ ಯೋಗ ದಿನಾಚರಣೆ–2025 ಅಂಗವಾಗಿ ಸಾಮೂಹಿಕ ಯೋಗ ಕಾರ್ಯಕ್ರಮ–ಯೋಗ ಸಂಗಮ್, ಸ್ಥಳ: ಜೆಎಸ್ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮೈದಾನ, ಬೆಳಗ್ಗೆ 6ಕ್ಕೆ

● **ಪ್ರಾದೇಶಿಕ ಶಿಕ್ಷಣ ಸಂಸ್ಥೆ:** ಬೆಳಗ್ಗೆ 6.30ರಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ: ಸೋಮನಾಥಪುರ ದೇವಾಲಯದ ಆವರಣ, ಸೋಮನಾಥಪುರ.

● **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ:** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30ರಿಂದ.

● **ಕೆವಿಸಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ:** ಯೋಗ ದಿನಾಚರಣೆ ಯೋಗ ಫಾರ್ ಒನ್ ಅರ್ಥ್, ಒನ್ ಹೆಲ್ತ್, ಸ್ಥಳ: ಕೆವಿಸಿ ಆಸ್ಪತ್ರೆ ಆವರಣ, ಬೆಳಗ್ಗೆ 7 ಗಂಟೆಗೆ.

● **ಐಪಿಸಿಎ ಲ್ಯಾಬೋರೇಟರಿಸ್ ಲಿಮಿಟೆಡ್, ಛಿರೋಡಾಲ್:** ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ರಾಮಾನುಜ ರಸ್ತೆ, ಸಂಜೆ 4ರಿಂದ.

● **ಎಸ್‌ಪಿಎಂ ಟ್ರಸ್ಟ್, ಪರಮಹಂಸ ಯೋಗ ಮಹಾವಿದ್ಯಾಲಯ, ಇಂಟರ್ ನ್ಯಾಷನಲ್ ಯೋಗ ಸ್ಕೂಲ್, ಇಂಟರ್ ನ್ಯಾಷನಲ್ ಯೋಗ ಆರ್ಗನೈಜೇಷನ್ (ಐವೈಟಿ):** 11ನೇ ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ಇಂಟರ್‌ನ್ಯಾಷನಲ್ ಯೋಗ ಟೀಚರ್ (ಐವೈಟಿ) ಟ್ರೈನಿಂಗ್ ಕೋರ್ಸ್‌ನ 14ನೇ ತಂಡದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳ ವಿತರಣೆ ಮತ್ತು 15ನೇ ತಂಡದ ಉದ್ಘಾಟನಾ ಸಮಾರಂಭ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್, ರಾಮಕೃಷ್ಣನಗರ, ಸಂಜೆ 5 ಗಂಟೆಗೆ.

****

● **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ:** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

● **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡುಬರುವ ಹಸಿವಾಗದಿರುವುದು, ಅಜೀರ್ಣ, ಹೊಟ್ಟೆ ನೋವು, ಜಂತು ಹುಳುವಿನ ಬಾಧೆ, ರುಮಟ್ರಿಡ್ ಆರ್ಥ್ರೈಟಿಸ್, ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

● **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಷರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಪಿಶೀಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್ ರೋಟರಿ ಭವನ, ವಿಜಯನಗರ, ರೈಲ್ವೇ ಬಡಾವಣೆ, ಬೆಳಗ್ಗೆ 10.30ರಿಂದ.

● **ಜೆಎಸ್ಎಸ್ ಮಹಾವಿದ್ಯಾಪೀಠ, ಜೆಎಸ್ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2025, ಸ್ಥಳ: ಜೆಎಸ್ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 "ತತ್ವ ದರ್ಪಣ": ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ– ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಸದಾಶಿವ ಪಾಟಿಲ್, ವ್ಯಾಖ್ಯಾನ– ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ: ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು– ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಯೋಗ ಕುರಿತ ವಿಶೇಷ ಸರಣಿ: "ಮಹಾಯೋಗ", 8.35 ವಿಶ್ವ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ 'ಯೋಗ ಲಯ ಸಂಭ್ರಮ', ಭಾಗವಹಿಸಿರುವವರು– ನಾಟ್ಯ ವಿದುಷಿ ಹಾಗೂ ಯೋಗ ಚಿಂತಕರಾದ ಡಾ. ಹೆಚ್.ಕೆ. ಶೀಲಾಶ್ರೀಧರ್, ಪ್ರಸ್ತುತಿ– ಹೆಚ್.ಎಲ್. ಶಿವಶಂಕರಸ್ವಾಮಿ, 9.05 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಕೆ. ರಾಘವನ್– ವೀಣಾವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ? "ನಮ್ಮೂರ್ ಹೆಸರು" ಪ್ರಸ್ತುತಿ– ಡಾ. ಮೈಸೂರು ಉಮೇಶ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಗೀತೆಗಳು, 3.30 ಮಕ್ಕಳ ಮಂಟಪ: 'ಹಕ್ಕಿಗೂಡು' ಮಕ್ಕಳಿಗಾಗಿ ಕಾರ್ಯಕ್ರಮ, ಪ್ರಸ್ತುತಿ– ಎಂ.ಎಸ್. ಭಾರತಿ, 4.00 ನಾಟಕ: 'ಪ್ರಳಯ' ನಿರ್ಮಾಣ– ಉಮೇಶ್ ಎಸ್.ಎಸ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ).

ಸಂಜೆ: 6.50 ಕೃಷಿರಂಗ: ಕಿಸಾನ್ ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ: ಭಾಗವಹಿಸುತ್ತಾರೆ– ಮದ್ದೂರು ತಾಲೂಕು, ಕೊಪ್ಪ ಹೋಬಳಿ, ಕೋಣಸಾಲೆ ಗ್ರಾಮದ ಕೃಷಿಕ ದಂಪತಿ ಹೆಚ್.ಕೆ. ರವಿಕುಮಾರ್ ಮತ್ತು ಎಂ.ಸಿ. ಮಮತಾ, ಪ್ರಸ್ತುತಿ–ಎನ್. ಕೇಶವಮೂರ್ತಿ.

ರಾತ್ರಿ: 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ವಿಶೇಷ ಕಾರ್ಯಕ್ರಮ: ವಿಕಸಿತ ಭಾರತದ ಅಮೃತಕಾಲ– ಸೇವೆ, ಉತ್ತಮ ಆಡಳಿತ ಹಾಗೂ ಗರೀಬ್ ಕಲ್ಯಾಣದ ಹನ್ನೊಂದು ವರ್ಷಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ಪಂಡಿತ್ ಸೌಮೇನ್ ಭಟ್ಟಚಾರ್ಯ– ಸಿತಾರ್ ವಾದನ.

● **ಶ್ರೀ ದುರ್ಗಾ ಫೌಂಡೇಷನ್:** ಸಂಗೀತ ದಿನಾಚರಣೆ ಅಂಗವಾಗಿ ಮಕ್ಕಳಿಗೆ ಸಂಗೀತ ಸ್ಪರ್ಧೆ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಹಿರಿಯ ಸಮಾಜ ಸೇವಕ ಕೆ. ರಘುರಾಮ್ ವಾಜಪೇಯಿ, ವಕೀಲರಾದ ಜಯಶ್ರೀ, ಸತ್ಯಸಾಯಿ ಸುರಕ್ಷಾ ಕೇಂದ್ರ ವೃದ್ಧಾಶ್ರಮದ ಅಧ್ಯಕ್ಷರಾದ ಸರಸ್ವತಿ ಹಲಸಗಿ, ಸಂಗೀತ ವಿದುಷಿ ಮೇಘನಾರಾವ್, ಅಕ್ಕನ ಬಳಗ ಶಾಲೆಯ ಮುಖ್ಯೋಪಾಧ್ಯಾಯರಾದ ಸುಗುಣಾವತಿ, ಸ್ಥಳ: ಅಕ್ಕನ ಬಳಗ ಶಾಲೆ, ತ್ಯಾಗರಾಜ ರಸ್ತೆ, ಬೆಳಗ್ಗೆ 10 ಗಂಟೆಗೆ.

● **ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ:** ಜನಿಸುವ–ಅರಳುವ–ಉಳಿಯುವ ಹಕ್ಕಿಗಾಗಿ, ಸ್ತ್ರೀ ಭ್ರೂಣಹತ್ಯೆ, ಬಾಲ್ಯ ವಿವಾಹ–ಗರ್ಭಪಾತಕ್ಕೆ ಅಂತ್ಯ ಹಾಡುವ ಸಲುವಾಗಿ ರಾಜ್ಯ ಮಟ್ಟದ ಕಾರ್ಯಕರ್ತರ ಶಿಬಿರ, ಸ್ಥಳ: ನಂಜರಾಜ ಬಹದ್ದೂರ್ ಛತ್ರದ ಸಭಾಂಗಣ, ಬೆಳಗ್ಗೆ 10.15ಕ್ಕೆ

● **ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ (ಮೈಸೂರು), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ (ಬೆಂಗಳೂರು):** ವಿಶ್ವ ರಂಗಭೂಮಿ, ನೃತ್ಯ ಮತ್ತು ಸಂಗೀತ ದಿನದ ಪ್ರಯುಕ್ತ ರಾಷ್ಟ್ರೀಯ ವಿಚಾರ ಸಂಕಿರಣ, ವಿಷಯ: 'ಧ್ವನಿಯಿಂದ ಲಿಪಿಗೆ, ಲಯದಿಂದ ರಸಕ್ಕೆ ಸಾಂಸ್ಕೃತಿಕ ಅಸ್ಮಿತೆ ಮತ್ತು ಶಿಕ್ಷಣದಲ್ಲಿ ದೇಶಿ ಸಂಗೀತ, ಪ್ರದರ್ಶನ ಕಲೆಗಳು ಹಾಗೂ ಸಂಸ್ಕೃತ ಪರಂಪರೆಗಳು' ಉದ್ಘಾಟನೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್. ಅಹಲ್ಯ, ಅಧ್ಯಕ್ಷತೆ: ಕೆಎಸ್‌ಜಿಹೆಚ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ನಾಗೇಶ್ ವಿ. ಬೆಟ್ಟಕೋಟೆ, ದಿಕ್ಸೂಚಿ ಭಾಷಣ: ಇತಿಹಾಸಕಾರ ಪ್ರೊ. ಚೂಡಾಮಣಿ ನಂದಗೋಪಾಲ್, ಗೋಷ್ಠಿಗಳು, ಸ್ಥಳ: ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಸಭಾಂಗಣ, ಬೆಳಗ್ಗೆ 11 ಗಂಟೆಗೆ.

● **ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು):** ಜುಲೈ 9ರಂದು ಜೆಸಿಟಿಯುವ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿರುವ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರದ ಬಗ್ಗೆ ಚರ್ಚಿಸಲು ಸಮಾಲೋಚನಾ ಸಭೆ, ಸ್ಥಳ: ನಂ. 2, ಕೆ.ವಿ. ಭವನ, ಸರಸ್ವತಿಪುರಂ, ಬೆಳಗ್ಗೆ 11.30ಕ್ಕೆ.

● **ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಯುವ ಬಳಗ:** ದಿವಂಗತ ಆರ್. ಧೃವನಾರಾಯಣ್ ಅವರ ನೆನಪಿನೋತ್ಸವದ ಅಂಗವಾಗಿ ಪ್ರತಿಭಾ ಪುರಸ್ಕಾರ, ಉಚಿತ ನೋಟ್ ಬುಕ್ ವಿತರಣಾ ಕಾರ್ಯಕ್ರಮ, ಉದ್ಘಾಟನೆ: ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಅಧ್ಯಕ್ಷತೆ: ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಬಿ.ಜೆ. ವಿಜಯಕುಮಾರ್, ವಿಶೇಷ ಆಹ್ವಾನಿತರು: ಶಾಸಕರಾದ ತನ್ವೀರ್ ಸೇಠ್, ಯತೀಂದ್ರ ಸಿದ್ದರಾಮಯ್ಯ, ದರ್ಶನ್ ಧೃವನಾರಾಯಣ, ಡಿ.ಟಿ. ಶ್ರೀನಿವಾಸ್, ಸ್ಥಳ: ಇಂದಿರಾ ಕಾಂಗ್ರೆಸ್ ಭವನ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3 ಗಂಟೆಗೆ.


● **ಶ್ರೀ ರಾಮಕೃಷ್ಣ ಆಶ್ರಮ:** ಜೂನ್ ತಿಂಗಳ ಪ್ರವಚನ ಕಾರ್ಯಕ್ರಮ, ಸ್ವಾಮಿ ಮಹೀಪಾಲಾನಂದ ಅವರಿಂದ ಇಂಗ್ಲಿಷ್‌ನಲ್ಲಿ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾ ನಂದಜೀ ಸ್ಮಾರಕ ಸಭಾಂಗಣ, ಸಂಜೆ 6 ಗಂಟೆಗೆ.

ಶ್ರೀರಂಗಪಟ್ಟಣ ಬಳಿ ಕಾವೇರಿ ಸ್ವಚ್ಛತಾ ಯೋಜನೆ

ಮೈಸೂರು, ಜೂ.20(ಆರ್‌ಕೆ)–ಶ್ರೀರಂಗಪಟ್ಟಣ ಸಂಗಮ ಸೇರಿ 4 ಕಡೆ ಅಸ್ಥಿ ವಿಸರ್ಜನೆ ವಿಧಿ–ವಿಧಾನ ಮಾಡಲು ಮೂಲ ಸೌಕರ್ಯ ಅಭಿವೃದ್ಧಿಗೆ ಶ್ರೀರಂಗ ಪಟ್ಟಣ ಟೌನ್ ಮುನಿಸಿಪಲ್ ಕಾರ್ಪೊರೇಷನ್ (ಟಿಎಂಸಿ) ಮುಂದಾಗಿದೆ.

ಅಂತ್ಯಕ್ರಿಯೆ ನಡೆಸಿದ ನಂತರ ಅಸ್ಥಿ ಮತ್ತು ಬೂದಿಯನ್ನು ಶ್ರೀರಂಗಪಟ್ಟಣದ ಸಂಗಮ, ಪಶ್ಚಿಮ ವಾಹಿನಿ, ಗೋಸಾಯ್ ಘಾಟ್ ಮತ್ತು ಸ್ನಾನಘಟ್ಟದಲ್ಲಿ ಧಾರ್ಮಿಕ ವಿಧಿ–ವಿಧಾನದಂತೆ ವಿಸರ್ಜಿಸುವುದು ಸಂಪ್ರದಾಯ. ಮೃತರ ಚಿತಾಭಸ್ಮವನ್ನು ನೀರಿಗೆ ವಿಸರ್ಜಿಸುವ ಈ ಧಾರ್ಮಿಕ ಆಚರಣೆ ಯಿಂದ ಕಾವೇರಿ ನದಿ ಮಲಿನಗೊಳ್ಳುತ್ತಿದೆ.

ದೇಶದಾದ್ಯಂತ ಸಾವಿರಾರು ಮಂದಿ ಶ್ರೀರಂಗಪಟ್ಟಣದ ಪವಿತ್ರ ಸ್ಥಳಗಳಾದ ಪಶ್ಚಿಮ ವಾಹಿನಿ, ಗೋಸಾಯ್ ಘಾಟ್ ಮತ್ತು ಸ್ನಾನಘಟ್ಟಗಳಿಗೆ ಭೇಟಿ ನೀಡಿ ಮೃತರ ಅಂತಿಮ ವಿಧಿ–ವಿಧಾನಗಳನ್ನು ಮಾಡುತ್ತಾರೆ. ಏಕೆಂದರೆ, ಕಾವೇರಿ ನದಿಯನ್ನು ಪವಿತ್ರ ಎಂದು ಪರಿಗಣಿಸಲಾಗಿದೆ. ಅದು ಸಂಗಮವಾಗಿರುವುದರಿಂದ ಅಲ್ಲಿ ಅಸ್ಥಿ ವಿಸರ್ಜಿಸಿದರೆ ಅಗಲಿದ ಆತ್ಮಗಳಿಗೆ ಮೋಕ್ಷ (ವಿಮೋಚನೆ) ಪಡೆಯಲು ಸಹಾಯವಾಗುತ್ತದೆ ಎಂದು ನಂಬಲಾಗಿದೆ. ರಾಷ್ಟ್ರಪಿತ ಮಹಾತ್ಮಗಾಂಧಿ ಸೇರಿದಂತೆ ಹಲವು ನಾಯಕರ ಚಿತಾಭಸ್ಮವನ್ನು ಪಶ್ಚಿಮ ವಾಹಿನಿಯಲ್ಲೇ ವಿಸರ್ಜನೆ ಮಾಡಿರು ವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.



ಈ ಆಚರಣೆ ಮಾಡುವಾಗ ಜನರು, ಹೂ, ಮಣ್ಣಿನ ಮಡಿಕೆ ಪೂಜಾ ಸಾಮಗ್ರಿಗಳನ್ನು ನದಿಗೆ ಬಿಡುತ್ತಾರೆ. ಇದರಿಂದ ನದಿ ನೀರು ಕಲುಷಿತಗೊಳ್ಳುತ್ತದೆ ಎಂದು ಸಾರ್ವಜನಿಕರು ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಇತ್ತೀಚೆಗಷ್ಟೇ ಉಪ ಲೋಕಾಯುಕ್ತ ನ್ಯಾಯಾಧೀಶ ಬಿ.ವೀರಪ್ಪ ಅವರು ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿ ಸೇರಿ ಅಸ್ಥಿ ಬಿಡುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದರು.

ಕಾವೇರಿ ನದಿ ನೀರು ಕಲುಷಿತಗೊಳ್ಳುತ್ತಿರುವುದನ್ನು ಮನಗಂಡ ಅವರು, ಜುಲೈ 1ರಿಂದ ಆ ಸ್ಥಳಗಳ ನಿರ್ದಿಷ್ಟ ಸ್ಥಳದಲ್ಲಿ ಅಸ್ಥಿ ವಿಸರ್ಜಿಸಲು ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ್ದರು. ಅವರ ನಿರ್ದೇಶನದಂತೆ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಕಮಿಷ್ನರ್, ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ತಾಪಂ ಎಕ್ಸಿಕ್ಯೂಟಿವ್ ಆಫೀಸರ್, ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ, ಪರಿಸರ ಅಧಿಕಾರಿ ಹಾಗೂ ಕಾವೇರಿ ನೀರಾವರಿ ನಿಗಮ ನಿಯಮಿತ (CNNL)ದ ಅಧಿಕಾರಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ಶ್ರೀರಂಗಪಟ್ಟಣ ಪಟ್ಟಣ ಮುನಿಸಿಪಲ್ ಕಾರ್ಪೊರೇಷನ್ ಮುಖ್ಯಾಧಿಕಾರಿ ರಾಜಣ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸಮಿತಿ ಸದಸ್ಯರ ಸಲಹೆ, ಮಾರ್ಗ ಸೂಚಿಯನ್ವಯ ಅಸ್ಥಿ ವಿಸರ್ಜನೆಗೆ ಸರಿಯಾದ ಮೂಲ ಸೌಲಭ್ಯ ಕಲ್ಪಿಸಲು ಯೋಜನಾ ವರದಿ (ಡಿಪಿಆರ್) ತಯಾರಿಸಲು ಟೆಂಡರ್ ಕರೆಯಲಾಗಿದೆ. ಪಶ್ಚಿಮ ವಾಹಿನಿ, ಸಂಗಮ, ಗೋಸಾಯಿ ಘಾಟ್ ಮತ್ತು ಸ್ನಾನಘಟ್ಟಗಳಲ್ಲಿ ಅಸ್ಥಿ ವಿಸರ್ಜನೆಗೆ ಅಗತ್ಯ ಮೂಲ ಸೌಕರ್ಯ ಅಭಿವೃದ್ಧಿಯಾದಲ್ಲಿ ಪ್ರತ್ಯೇಕ ಒಳ ಚರಂಡಿ ಮಾರ್ಗ ನಿರ್ಮಿಸುವುದರಿಂದ ಕಾವೇರಿ ನದಿಗೆ ತ್ಯಾಜ್ಯ ನೀರು ತಲುಪುವುದಿಲ್ಲ ಎಂದು ಅವರು ತಿಳಿಸಿದರು.

ಈ ಯೋಜನೆಯನ್ವಯ ಈ ನಾಲ್ಕು ಪ್ರಮುಖ ಸ್ಥಳಗಳಲ್ಲಿ ನೇರವಾಗಿ ಬೂದಿ ಮಿಶ್ರಣವಾಗುವುದನ್ನು ತಪ್ಪಿಸಬಹುದಲ್ಲದೆ, ಹೂಳು ತೆಗೆಯುವ ವ್ಯವಸ್ಥೆಯೂ ಇರುತ್ತದೆ.

ಮನುಷ್ಯ ಸಾಯುವ ಮುನ್ನವೇ ಅಸ್ಥಿ ವಿಸರ್ಜನೆಗೆ ಸಮಯ ಪೂರ್ವ ನಿಗಧಿ!

ಮೈಸೂರು, ಜೂ.20(ಆರ್‌ಕೆ)–ಮೃತಪಟ್ಟ ವ್ಯಕ್ತಿಯ ಅಂತ್ಯಕ್ರಿಯೆ ನಂತರ ಅಸ್ಥಿ ವಿಸರ್ಜನೆ ಮಾಡುವುದು ಸಾಮಾನ್ಯ. ಆದರೆ, ಮನುಷ್ಯ ಸಾಯುವ ಮುನ್ನವೇ ಅಸ್ಥಿ ವಿಸರ್ಜನೆಗೆ ಧಾರ್ಮಿಕ ವಿಧಿ–ವಿಧಾನ ಪ್ರಕ್ರಿಯೆಗೆ ಮುಂಗಡವಾಗಿ ಬುಕ್ ಮಾಡುವುದನ್ನು ಕಂಡಿದ್ದೀರಾ...?

ಆದರೆ ನಿಜ. ಮನುಷ್ಯ ಬದುಕಿರುವಾಗಲೇ ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿ, ಸಂಗಮ, ಗೋಸಾಯ್ ಘಾಟ್ ಮತ್ತು ಸ್ನಾನ ಘಟ್ಟದಲ್ಲಿ ಅಸ್ಥಿ ವಿಸರ್ಜನೆ, ಕರ್ಮಾಧಿ ಕ್ರಿಯೆ ಮಾಡಿಸಲು ಜನರು ಸ್ಥಳ ನಿಗಧಿ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಿದೆ.

ಇತ್ತೀಚೆಗಷ್ಟೇ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಶ್ರೀರಂಗಪಟ್ಟಣದ ಕಾವೇರಿ ನದಿ ತೀರದ ಪವಿತ್ರ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ ಅಸ್ಥಿ ವಿಸರ್ಜನೆ ಪ್ರಕ್ರಿಯೆಗೆ ಭಾರೀ ಬೇಡಿಕೆ ಇದ್ದು, ದುಬಾರಿ ಹಣ ತೆರಬೇಕು. ಜಾಗವೂ ಸಿಗುವುದಿಲ್ಲ. ವಿಧಿ–ವಿಧಾನ ನಡೆಸುವವರೂ ಸಿಗುವುದಿಲ್ಲವಾದ್ದರಿಂದ ಮನುಷ್ಯ ಬದುಕಿದ್ದಾಗಲೇ ಅಸ್ಥಿ ವಿಸರ್ಜನೆಗೆ ಮುಂಗಡವಾಗಿ ಬುಕ್ಕಿಂಗ್ ಮಾಡಲಾಗುತ್ತಿದೆ ಎಂದು ಸಾರ್ವಜನಿಕರು ತಿಳಿಸಿದರು.

ಜನರು, ಅದರಲ್ಲೂ ವಿದೇಶದಲ್ಲಿರುವ ಕುಟುಂಬದವರು ಮನುಷ್ಯ ಸಾಯುವ ಮುಂಚೆಯೇ ಅಸ್ಥಿ ವಿಸರ್ಜನೆಗೆ ಮುಂಗಡ ಬುಕ್ಕಿಂಗ್ ಮಾಡುತ್ತಿದ್ದಾರೆ ಎಂಬ ದೂರುಗಳು ಕೇಳಿ ಬಂದ ಕಾರಣ, ಇಂತಹ ವ್ಯವಸ್ಥೆಗೆ ಅವಕಾಶ ನೀಡಬೇಡಿ. ಬೂದಿ, ಅಸ್ಥಿ, ಪೂಜಾ ಸಾಮಗ್ರಿಗಳನ್ನು ನದಿಗೆ ಬಿಡದಂತೆ ತಡೆದು ಅವರಿಗೆ ಪ್ರತ್ಯೇಕ ಸೌಲಭ್ಯ ಕಲ್ಪಿಸಿ ಎಂದು ನ್ಯಾಯಮೂರ್ತಿಗಳು ಶ್ರೀರಂಗಪಟ್ಟಣದ ಸ್ಥಳೀಯಾಧಿಕಾರಿಗಳಿಗೆ ಸೂಚನೆ ನೀಡಿದರು. ನೇತ್ರ ದಾನ, ದೇಹ ದಾನ, ಅಂಗಾಂಗ ದಾನ ನೋಡಿದ್ದೇನೆ. ಇದೇನ್ರೀ... ಮನುಷ್ಯ ಸಾಯುವ ಮುನ್ನವೇ ಅವರ ಅಸ್ಥಿ ವಿಸರ್ಜನೆ ಪ್ರಕ್ರಿಯೆಗೆ ಮುಂಗಡ ಬುಕ್ಕಿಂಗ್ ಮಾಡುವುದು ಎಂದು ಅಚ್ಚರಿ ವ್ಯಕ್ತಪಡಿಸಿದರು.

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಗೆ ಅಂತಿಮ ಕಣದಲ್ಲಿ 29 ಅಭ್ಯರ್ಥಿಗಳು

ಮೈಸೂರು, ಜೂ.20(ಎಸ್‌ಬಿಡಿ)–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆಗೆ ವಿವಿಧ ಕ್ಷೇತ್ರಗಳಿಂದ ನಾಮಪತ್ರ ಸಲ್ಲಿಸಿದ್ದ ಆರು ಅಭ್ಯರ್ಥಿಗಳು ಶುಕ್ರವಾರ ತಮ್ಮ ಉಮೇದುವಾರಿಕೆ ಹಿಂಪಡೆದಿದ್ದು, ಅಂತಿಮವಾಗಿ 29 ಮಂದಿ ಕಣದಲ್ಲಿ ಉಳಿದಿದ್ದಾರೆ.

ತಿ.ನರಸೀಪುರ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದ ಜೆ.ಸುನಿತಾ ವೀರಪ್ಪಗೌಡ, ಹುಣಸೂರು ತಾಲೂಕು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಹೆಚ್.ಪಿ.ಅಮರ್‌ನಾಥ್, ಕೊಳ್ಳೆಗಾಲ ಮತ್ತು ಹನೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಸಿ.ನಾಗರಾಜು, ತಾಲೂಕು ಜಿಲ್ಲೆ ಹಾಗೂ ಜಿಲ್ಲಾ ಮೇಲ್ಪಟ್ಟು ಕಾರ್ಯ ವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದ ವಿಜಯಗಣಪತಿ ಅಭಿವೃದ್ಧಿ ಸಹಕಾರ ಸಂಘದ ಎನ್.ಮಂಜುನಾಥ್, ಪಿರಿಯಾಪಟ್ಟಣ ನೆಲಜಲ ಗ್ರಾಮೀಣ ಅಭಿವೃದ್ಧಿ ಸಹಕಾರ ಸಂಘದ ಹೆಚ್.ಜಿ.ಶಿವಶಂಕರ್ ಮತ್ತು ಕೆ.ಆರ್.ನಗರ ತಾಲೂಕು ತೋಟದ ಬೆಳೆಗಾರರ ಸಂಸ್ಕರಣಾ ಘಟಕ ಮತ್ತು ತೋಟದ ಸಹಕಾರ ಸಂಘದ ಹೆಚ್. ಎಸ್.ಚಂದ್ರೇಗೌಡ ತಮ್ಮ ಉಮೇದುವಾರಿಕೆ ವಾಪಸ್ ಪಡೆದಿದ್ದಾರೆ.

ಆರು ಮಂದಿ ನಾಮಪತ್ರ ವಾಪಸ್



ಹರೀಶ್‌ಗೌಡ, ಅನಿಲ್, ಗಣೇಶ್ ಪ್ರಸಾದ್, ಪುಟ್ಟರಂಗಶೆಟ್ಟಿ, ಆರ್.ನರೇಂದ್ರ, ದೊಡ್ಡಸ್ವಾಮೇಗೌಡ, ರಾಜೀವ್, ಬಸವೇಗೌಡ, ಚಂದ್ರಶೇಖರ್, ಅಮಿತ್

ಚಿಹ್ನೆ ಹಂಚಿಕೆ: ತಾಲೂಕು ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಆಯ್ಕೆಯಾಗಬೇಕಾದ ಪ್ರತಿನಿಧಿ ಕ್ಷೇತ್ರಗಳಿಂದ ಸ್ಪರ್ಧಿಸಿರುವ ಮೈಸೂರು ತಾಲೂಕಿನ ಎಂ.ಕೆಂಚಪ್ಪ ಹಾಗೂ ಎಂ.ಜಿ.ಸಿದ್ದರಾಜು, ನಂಜನಗೂಡು ತಾಲೂಕಿನ ಕೆ.ರಾಜು ಹಾಗೂ ಬಿ.ಎನ್.ಸದಾನಂದ, ತಿ.ನರಸೀಪುರ ತಾಲೂಕಿನ ಸಿ.ಬಸವೇಗೌಡ ಹಾಗೂ ಟಿ.ಪಿ.ಬೋರೇಗೌಡ, ಹೆಚ್.ಡಿ.ಕೋಟೆ ತಾಲೂಕಿನ ಸಿ.ಅನಿಲ್‌ಕುಮಾರ್(ಶಾಸಕ), ಮಾದಪ್ಪ, ಜಿ.ಕೆ.ಲಕ್ಷ್ಮೀಪ್ರಸಾದ್ ಹಾಗೂ ಶಿವನಂಜೇಗೌಡ, ಹುಣಸೂರು ತಾಲೂಕಿನ ಗೋವಿಂದೇಗೌಡ, ಜೆ.ಶಿವಣ್ಣ ಹಾಗೂ ಜಿ.ಡಿ.ಹರೀಶ್(ಶಾಸಕ), ಪಿರಿಯಾಪಟ್ಟಣ ತಾಲೂಕಿನ ಸಿ.ಎನ್.ರವಿ ಹಾಗೂ ಈ.ಪಿ.ಲೋಕೇಶ, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳ ಅಮಿತ್ ವಿ.ದೇವರಹಟ್ಟಿ, ದೊಡ್ಡಸ್ವಾಮೇಗೌಡ ಹಾಗೂ ಎಸ್.ಸಿದ್ದೇಗೌಡ, ಚಾಮರಾಜನಗರ ತಾಲೂಕಿನ ಸಿ.ಪುಟ್ಟರಂಗಶೆಟ್ಟಿ (ಶಾಸಕ) ಹಾಗೂ ಪಿ.ವೃಷಭೇಂದ್ರಪ್ಪ, ಗುಂಡ್ಲುಪೇಟೆ ತಾಲೂಕಿನ ಹೆಚ್.ಎಂ.ಗಣೇಶ್ ಪ್ರಸಾದ್(ಶಾಸಕ) ಹಾಗೂ ಎಸ್.ಎಂ.ವೀರಪ್ಪ, ಕೊಳ್ಳೆಗಾಲ ಮತ್ತು ಹನೂರು ತಾಲೂಕಿನ ಆರ್.ನರೇಂದ್ರ (ಶಾಸಕ) ಹಾಗೂ ಬಿ.ಎಸ್.ಮಲ್ಲೇಶ್.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳಿಂದ ಆಯ್ಕೆಯಾಗಬೇಕಾದ ಪ್ರತಿನಿಧಿಯ ಕ್ಷೇತ್ರದ ಎಸ್‌ಬಿಎಂ ಮಂಜು, ಜಿ.ಎನ್.ಮಂಜುನಾಥ್ ಹಾಗೂ ಹೆಚ್.ವಿ.ರಾಜೀವ್, ತಾಲೂಕು ಜಿಲ್ಲೆ ಹಾಗೂ ಜಿಲ್ಲಾ ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಕ್ಷೇತ್ರದಿಂದ ಆಯ್ಕೆಯಾಗಬೇಕಾದ ಪ್ರತಿನಿಧಿಯ ಕ್ಷೇತ್ರದ ಎಸ್.ಚಂದ್ರಶೇಖರ್ ಮತ್ತು ಟಿ.ರಾಮೇಗೌಡ ಸೇರಿದಂತೆ ಒಟ್ಟು 29 ಅಭ್ಯರ್ಥಿಗಳಿಗೆ ಚುನಾವಣಾಧಿಕಾರಿ ಆಶಪ್ಪ, ಚಿಹ್ನೆ ಹಂಚಿಕೆ ಮಾಡಿದ್ದಾರೆ.

ಜೂ.26ಕ್ಕೆ ಮತದಾನ: ಆಡಳಿತ ಮಂಡಳಿಯ 13 ನಿರ್ದೇಶಕ ಸ್ಥಾನಗಳಿಗೆ ಜೂ.26ರಂದು ಮತದಾನ ನಡೆಯಲಿದ್ದು, ಶಾಸಕರಾದ ಜಿ.ಡಿ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಹೆಚ್.ಎಂ.ಗಣೇಶ್ ಪ್ರಸಾದ್, ಪುಟ್ಟರಂಗಶೆಟ್ಟಿ, ಆರ್.ನರೇಂದ್ರ, ಕೆ.ಆರ್.ನಗರ ಶಾಸಕ ಡಿ.ರವಿಶಂಕರ್ ತಂದೆ ದೊಡ್ಡಸ್ವಾಮೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಸಿ.ಬಸವೇಗೌಡ, ಎಸ್.ಚಂದ್ರಶೇಖರ್, ಮಾಜಿ ನಿರ್ದೇಶಕರಾದ ಅಮಿತ್ ವಿ.ದೇವರಹಟ್ಟಿ ಬಿ.ಎನ್.ಸದಾನಂದ ಸೇರಿದಂತೆ ಅನೇಕ ಘಟಾನುಘಟಿಗಳು ಅಖಾಡದಲ್ಲಿರುವುದರಿಂದ ಚುನಾವಣಾ ಕಣ ರಂಗೇರಿದೆ.

ಉದಯಗಿರಿ ಪೊಲೀಸ್ ಠಾಣೆ ವಿಭಾಗ

ಉದಯಗಿರಿ ಉತ್ತರ; ಉದಯಗಿರಿ ದಕ್ಷಿಣ ಪೊಲೀಸ್ ಠಾಣೆ ಅಸ್ತಿತ್ವಕ್ಕೆ

ಅಪರಾಧ ತಡೆ; ಸಮರ್ಪಕ ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳುವ ಬೇಡಿಕೆಗೆ ಅಂತೂ ಸರ್ಕಾರ ಅಸ್ತು



ಉದಯಗಿರಿ ಪೊಲೀಸ್ ಠಾಣೆ

ಮೈಸೂರು, ಜೂ.20(ಎಸ್‌ಬಿಡಿ)–ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯನ್ನು ವಿಭಾಗಿಸಿ 'ಉದಯಗಿರಿ ಉತ್ತರ ಪೊಲೀಸ್ ಠಾಣೆ' ಮತ್ತು 'ಉದಯಗಿರಿ ದಕ್ಷಿಣ ಪೊಲೀಸ್ ಠಾಣೆ'ಯನ್ನಾಗಿ ಸೃಜಿಸಲು ರಾಜ್ಯ ಸರ್ಕಾರ ಶುಕ್ರವಾರ ಆದೇಶಿಸಿದೆ.

ಈ ಸಂಬಂಧ ಪೊಲೀಸ್ ಮಹಾನಿರ್ದೇಶಕರು ಹಾಗೂ ಆರಕ್ಷಕ ಮಹಾ ನಿರೀಕ್ಷಕರು ಸಲ್ಲಿಸಿದ್ದ ಪ್ರಸ್ತಾವನೆಗೆ ಸಹಮತಿಸಿ, ಆದೇಶಿಸಿರುವುದಾಗಿ ಒಳಾಡಳಿತ ಇಲಾಖೆ(ಸಮನ್ವಯ) ಸರ್ಕಾರದ ಅಧೀನ ಕಾರ್ಯದರ್ಶಿ ಡಿ.ಎಸ್.ನಳಿನ ತಿಳಿಸಿದ್ದಾರೆ. ಇದರೊಂದಿಗೆ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಬಹು ವರ್ಷಗಳ ಬೇಡಿಕೆ ಈಡೇರಿದಂತಾಗಿದೆ.

ಅತೀಸೂಕ್ಷ್ಮ ಪ್ರದೇಶ: ನಜರ್‌ಬಾದ್ ಪೊಲೀಸ್ ಠಾಣಾ ವ್ಯಾಪ್ತಿಯಿಂದ ಬೇರ್ಪಟ್ಟು 1994ರಿಂದ ಉದಯಗಿರಿ ಪೊಲೀಸ್ ಠಾಣೆ ಕಾರ್ಯಾರಂಭ ಮಾಡಿದ್ದು, ಠಾಣೆಯ ವ್ಯಾಪ್ತಿಯು ಕೋಮು ಸೂಕ್ಷ್ಮ ಪ್ರದೇಶವಾಗಿರುತ್ತದೆ. ಕಳೆದ 26 ವರ್ಷಗಳಿಂದ ಉದಯಗಿರಿ ಪೊಲೀಸ್ ಠಾಣಾ ಸರಹದ್ದಿನಲ್ಲಿ ಘಟಿಸುತ್ತಿರುವ ಅಪರಾಧ ಕೃತ್ಯಗಳು, ಕೋಮು ಗಲಭೆಗಳು, ಜಾತಿ–ಧರ್ಮಗಳ ನಡುವಿನ ವಿವಾದಗಳು, ಕೊಲೆ ಹಾಗೂ ಕೊಲೆ ಪ್ರಯತ್ನದಂತಹ ಘಟನೆಗಳು, ಸ್ವತ್ತು ಕಳವು ಪ್ರಕರಣಗಳು ಹೆಚ್ಚಿರುವುದರ ಜೊತೆಗೆ ಬದಲಾಗುತ್ತಿರುವ ಚುನಾವಣಾ ವ್ಯವಸ್ಥೆಯಿಂದಾಗಿ ಉದಯಗಿರಿ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಮೇಲೆ ಹಿಂದಿಗಿಂತಲೂ ಹೆಚ್ಚು ಒತ್ತಡ ಉಂಟಾಗಿದೆ.

ಉದಯಗಿರಿ ಪೊಲೀಸ್ ಠಾಣೆಯಲ್ಲಿ 2022ರಲ್ಲಿ 215, 2023ರಲ್ಲಿ 213 ಹಾಗೂ 2014ರಲ್ಲಿ 209 ಅಪರಾಧ ಪ್ರಕರಣಗಳು ದಾಖಲಾಗಿವೆ. ಕಳೆದ ಐದು ವರ್ಷಗಳಲ್ಲಿ ಒಟ್ಟು 624 ರೌಡಿಶೀಟ್, 1872 ಎಂಓಬಿ ಹಾಗೂ 31 ಹಿಸ್ಟರಿಶೀಟ್ ತೆರೆಯಲಾಗಿದೆ. ಠಾಣಾ ವ್ಯಾಪ್ತಿಯಲ್ಲಿ ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಧರ್ಮೀಯರು ಹೆಚ್ಚಿನ ಸಂಖ್ಯೆಯಲ್ಲಿದ್ದು 78 ಮಸೀದಿ, 59 ದೇವಸ್ಥಾನಗಳು ಹಾಗೂ 9 ಚರ್ಚ್‌ಗಳು ಇವೆ. ಪೂರ್ವ–ಪಶ್ಚಿಮವಾಗಿ ಹಾದು ಹೋಗಿರುವ ಮಹದೇವಪುರ ಮುಖ್ಯ ರಸ್ತೆ ಸೇರಿದಂತೆ ಬಹುತೇಕ ಭಾಗಗಳಲ್ಲಿ ಅತೀ ಹೆಚ್ಚು ಜನ ಹಾಗೂ ವಾಹನ ದಟ್ಟಣೆ ಹಾಗೂ ವ್ಯಾಪಕ ವಹಿವಾಟು ಇದೆ. ರಿಂಗ್ ರಸ್ತೆ 5 ಕಿ.ಮೀ. ಠಾಣಾ ವ್ಯಾಪ್ತಿಯಲ್ಲಿ ಹಾದು ಹೋಗಿದೆ ಎಂದು 2025ರ ಏಪ್ರಿಲ್ 9ರಂದು ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯಲ್ಲಿ ವಿವರಿಸಲಾಗಿತ್ತು.

ದೇವನೂರಲ್ಲಿ ಹೊಸ ಕಟ್ಟಡ: ಉದಯಗಿರಿ ಠಾಣೆ ವ್ಯಾಪ್ತಿಯಲ್ಲಿ ಪ್ರಸ್ತುತ 3,11,436 ಜನಸಂಖ್ಯೆ ಇದೆ. ಎರಡು ಠಾಣೆಗಳಾದರೆ ಉದಯಗಿರಿ ಉತ್ತರ ಪೊಲೀಸ್ ಠಾಣೆ ವ್ಯಾಪ್ತಿಗೆ 1,48,964 ಹಾಗೂ ಉದಯಗಿರಿ ದಕ್ಷಿಣ ಪೊಲೀಸ್ ಠಾಣೆ ವ್ಯಾಪ್ತಿಗೆ 1,62,472 ಜನಸಂಖ್ಯೆ ವಿಭಜನೆಯಾಗುತ್ತದೆ. ಪ್ರಸ್ತುತ ಉದಯಗಿರಿ ಠಾಣೆ ಕಾರ್ಯ ನಿರ್ವಹಿಸುತ್ತಿರುವ ಕಟ್ಟಡವನ್ನು ಉದಯಗಿರಿ ದಕ್ಷಿಣ ಪೊಲೀಸ್ ಠಾಣೆಯಾಗಿ ಮಾರ್ಪಡಿಸಿ, ದೇವನೂರು ಒಂದನೇ ಹಂತ ಸಿಎ ನಿವೇಶನ(ಸಂಖ್ಯೆ–ಸಿಎ–07)ದಲ್ಲಿ ಉದಯಗಿರಿ ಉತ್ತರ ಪೊಲೀಸ್ ಠಾಣೆಗೆ ಕಟ್ಟಡ ನಿರ್ಮಿಸಬಹುದು.

ಅಗತ್ಯ ಅಧಿಕಾರಿ, ಸಿಬ್ಬಂದಿ ಬಲ: ಪ್ರಸ್ತುತ ಉದಯಗಿರಿ ಠಾಣೆಯಲ್ಲಿ ಒಬ್ಬರು ಇನ್ಸ್‌ಪೆಕ್ಟರ್, ನಾಲ್ವರು ಸಬ್‌ಇನ್ಸ್‌ಪೆಕ್ಟರ್, 8 ಎಎಸ್‌ಐ, 24 ಹೆಡ್ ಕಾನ್ಸ್‌ಟೆಬಲ್ ಹಾಗೂ 48 ಕಾನ್ಸ್‌ಟೆಬಲ್‌ಗಳಿದ್ದಾರೆ. ಇಷ್ಟೇ ಸಂಖ್ಯೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತೊಂದು ಠಾಣೆಗೆ ಅಗತ್ಯವಿದೆ. ಜೊತೆಗೆ ಠಾಣೆಗೆ ಒಬ್ಬರಂತೆ ಇಬ್ಬರು ಸಶಸ್ತ್ರ ಪೊಲೀಸ್ ಕಾನ್ಸ್‌ಟೆಬಲ್ (ಎಪಿಸಿ) ಅಗತ್ಯವಿದೆ. ಮಹದೇವಪುರ ಮುಖ್ಯ ರಸ್ತೆಯನ್ನು ಗಡಿಯಾಗಿ ನಿಗದಿಪಡಿಸಿ ದೈನಂದಿನ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಈ ಅಗತ್ಯ ಸಿಬ್ಬಂದಿ ಬಲವನ್ನು ಮಂಜೂರು ಮಾಡಬೇಕು. ಇದಕ್ಕೆ ವಾರ್ಷಿಕ 6,11,79,500 ರೂ. ಆವರ್ತಕ ವೆಚ್ಚ ಹಾಗೂ 3,39,15,000 ರೂ. ಅನಾವರ್ತಕ ವೆಚ್ಚವಾಗುತ್ತದೆ ಎಂದು ತಿಳಿಸಿ, ಪ್ರಸ್ತಾವನೆಗೆ ಮಂಜೂರಾತಿ ಕೋರಲಾಗಿತ್ತು.

ನಿರಂತರ ಒತ್ತಾಯ: ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮತ್ತೊಂದು ಪೊಲೀಸ್ ಠಾಣೆ ಅಗತ್ಯವಿದೆ ಎಂದು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ನಿರಂತರವಾಗಿ ಆಗ್ರಹಿಸುತ್ತಿದ್ದರು. ಮಾಜಿ ಮೇಯರ್ ಸಂದೇಶ್ ಸ್ವಾಮಿ ಸೇರಿದಂತೆ ಹಲವು ಜನಪ್ರತಿನಿಧಿಗಳು, ಸ್ಥಳೀಯ ಮುಖಂಡರು ತಕ್ಷಣಕ್ಕೆ ಉಪಠಾಣೆಯನ್ನಾದರೂ ಸ್ಥಾಪಿಸಬೇಕೆಂದು ಒತ್ತಾಯಿಸುತ್ತಿದ್ದರು. ಸದ್ಯ ಎರಡು ಪೊಲೀಸ್ ಠಾಣೆಗಳಾಗಿ ಸೃಜಿಸಲು ಸರ್ಕಾರ ಆದೇಶಿಸಿದ್ದು, ಈ ಸಂಬಂಧ ಪ್ರಕ್ರಿಯೆಗಳು ಆರಂಭವಾಗಲಿವೆ.

ಯಾವ ಠಾಣೆಗೆ ಯಾವೆಲ್ಲಾ ಪ್ರದೇಶಗಳು ಸೇರಲಿವೆ?

ಉದಯಗಿರಿ ಉತ್ತರ ಠಾಣೆ ವ್ಯಾಪ್ತಿಗೆ ಇಂದಿರಾಗಾಂಧಿ ಕಾಲೋನಿ, ಉದಯಗಿರಿ 1 ಮತ್ತು 2ನೇ ಹಂತ, ಶನೇಶ್ವರ ಲೇಔಟ್, ಎ.ಜೆ.ಬ್ಲಾಕ್, ಸೀಮೆಎಣ್ಣೆ ಕಾಲೋನಿ, ಸತ್ಯನಗರ, ಛಾಯಾದೇವಿನಗರ, ಶಬ್ನಮ್ ಬ್ರಿಗೇಡ್ ಕಾಲೋನಿ, ಮುನೇಶ್ವರನಗರ, ಕ್ರಿಶ್ಚಿಯನ್ ಕಾಲೋನಿ, ರಾಜೀವ್‌ನಗರ 1 ಮತ್ತು 3ನೇ ಹಂತ, ಲಿಡ್ಕರ್ ಕಾಲೋನಿ, ಶಾಂತಿನಗರ ನಾರ್ತ್ ಬ್ಲಾಕ್, ಎನ್.ಜೆ.ಕರೀಮ್ ಬ್ಲಾಕ್, ಗಣೇಶನಗರ ಎ ಮತ್ತು ಬಿ ಬ್ಲಾಕ್, ಕೆಇಬಿ ಕಾಲೋನಿ, ಚಾಮುಂಡೇಶ್ವರಿ ಬ್ಲಾಕ್, ಸಿಐಟಿಬಿ ಕಾಲೋನಿ, ಕೆಹೆಚ್‌ಬಿ ಕಾಲೋನಿ, ಡಾಲರ್ಸ್ ಕಾಲೋನಿ, ಶ್ರೀನಿಧಿ ಲೇಔಟ್, ನಾಗರಾಜಪ್ಪ ಎನ್‌ಕ್ಲೇವ್, ಈಡನ್ ಗಾರ್ಡನ್ ರಾಜೀವ್‌ನಗರ 2ನೇ ಹಂತ.

ಉದಯಗಿರಿ ದಕ್ಷಿಣ ಠಾಣೆ ವ್ಯಾಪ್ತಿಗೆ ಕ್ಯಾತಮಾರನಹಳ್ಳಿ, ಸೋಲಿಗರ ಕಾಲೋನಿ, ಗೌಸಿಯಾನಗರ ಫಾರ್ಮ್ ಕಾಲೋನಿ, ಕೆ.ಎನ್.ಪುರ, ಎಸ್‌ಬಿಎಂ ಕಾಲೋನಿ, ಗಾಯತ್ರಿಪುರಂ 2ನೇ ಹಂತ, ರೇಣುಕಾದೇವಿ ಬ್ಲಾಕ್, ಗೌಸಿಯಾನಗರ, ದೇವನೂರು ಬ್ಲಾಕ್, ಗೌಸಿಯಾನಗರ ಎ,ಬಿ,ಸಿ ಬ್ಲಾಕ್, ಕಲ್ಯಾಣಗಿರಿನಗರ 1ರಿಂದ 5ನೇ ಹಂತ, ಬೀಡಿ ಕಾಲೋನಿ, ಕೆಎಸ್‌ಸಿಬಿ ಸ್ಲಮ್ ಕ್ವಾಟ್ರರ್ಸ್, ಶಾಂತಿನಗರ ಜೆಎಸ್‌ಎಸ್ ಲೇಔಟ್, ವಿದ್ಯಾಶಂಕರ ಲೇಔಟ್, ಸಾತಗಳ್ಳಿ ಎ ಜೋನ್, ಹೆಚ್‌ಪಿಓ ಅಂಡ್ ಆರ್‌ಎಂಎಸ್ ಲೇಔಟ್, ಉಸ್ಮಾನಿಯಾ ಬ್ಲಾಕ್, ಶ್ರೀನಗರ, ನೆಹರೂನಗರ, ಶಾಂತಿನಗರ ಸೌತ್ ಬ್ಲಾಕ್, ಹೈದರಾಲಿ ಬ್ಲಾಕ್, ರಾಘವೇಂದ್ರ ಲೇಔಟ್ ಸುಭಾಷ್‌ನಗರ ಹಾಗೂ ಅಜೀಜ್ ಸೇಠ್ ನಗರ.

ಬಾಕ್ಸ್...

ಪತ್ರಕರ್ತರು ಸಾಮಾಜಿಕ ಜಾಲ ಪರಿಣಾಮಕಾರಿ ಬಳಕೆಗೆ ಕರೆ


ಹೋಬಳಿ ಪತ್ರಕರ್ತರ ಸಂಘದ ಬೆಳ್ಳಿಹಬ್ಬ ಸ್ಮರಣ ಸಂಚಿಕೆ 'ಬೆಳ್ಳಿಪಯಣ' ಬಿಡುಗಡೆ ಮಾಡಿದರು

ಕುಶಾಲನಗರ, ಜೂ.20– ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ಅನುಗುಣವಾಗಿ ಪತ್ರಕರ್ತರು ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತಾಗಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಹೇಳಿದ್ದಾರೆ.

ತಾಲೂಕು ಪತ್ರಕರ್ತರ ಸಂಘವು ಏರ್ಪಡಿಸಿದ್ದ ವಾರ್ಷಿಕ ದತ್ತಿನಿಧಿ ಪ್ರಶಸ್ತಿ ಪ್ರದಾನ ಮತ್ತು ಹೋಬಳಿ ಪತ್ರಕರ್ತರ ಸಂಘದ ಬೆಳ್ಳಿಹಬ್ಬ ಸ್ಮರಣ ಸಂಚಿಕೆ 'ಬೆಳ್ಳಿಪಯಣ' ಬಿಡುಗಡೆ ಮಾಡಿ ಮಾತನಾಡಿದ ಅವರು, ಮಾಧ್ಯಮಗಳು ಸಮಾಜದ ಪ್ರತಿಬಿಂಬ ಆಗಿರುವುದರಿಂದ ತಪ್ಪುಗಳಿದ್ದರೆ ಪ್ರಶ್ನೆ ಮಾಡಬೇಕು. ಪ್ರಚಾರ ಬಯಸುವವರ ಬೆನ್ನು ಹತ್ತುವ ಬದಲು ಸಮಾಜಕ್ಕೆ ಉಪಯೋಗ ಆಗುವ ವರದಿ ಮಾಡಬೇಕೆಂದು ಕಿವಿಮಾತು ಹೇಳಿದರು.

ಬೆಳ್ಳಿಪಯಣ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಹಿರಿಯ ಪತ್ರಕರ್ತ ಜಿ.ಚಿದ್ವಿಲಾಸ್ ಮಾತನಾಡಿ, ಮನುಷ್ಯನಿಗೆ ವಯಸ್ಸಾದಂತೆ ಮಾಗುತ್ತಾ ಹೋಗುತ್ತಾನೆ. ಆದರೆ ಸಂಘಟನೆಗಳು ಹಳೆಯದಾದಷ್ಟು ಗಟ್ಟಿಗೊಳ್ಳುತ್ತವೆ. ಪತ್ರಕರ್ತ ಸಂಘಟನೆಗಳು ಹೆಚ್ಚು ಶಕ್ತಿಯುತವಾಗಬೇಕು. ಸದಸ್ಯತ್ವ ಕೊಡುವಾಗ ನೈಜ ಪತ್ರಕರ್ತರಿಗೆ ಮಾತ್ರ ಅವಕಾಶ ಕೊಡಬೇಕು ಎಂದರಲ್ಲದೆ, ಮಡಿಕೇರಿ ಮಾದರಿಯಲ್ಲಿ ಪುರಸಭೆ ವ್ಯಾಪ್ತಿಯಲ್ಲೂ ಪ್ಲಾಸ್ಟಿಕ್ ಬಾಟಲಿಗಳ ನಿಷೇಧಕ್ಕೆ ಸಂಬಂಧಿಸಿದವರ ಜತೆ ವ್ಯವಹರಿಸಿ ಕಾರ್ಯರೂಪಕ್ಕೆ ತರುವಂತಾಗಬೇಕು ಎಂದು ತಿಳಿಸಿದರು.

ದತ್ತಿನಿಧಿ ಪ್ರಶಸ್ತಿ ಪ್ರದಾನ ಮಾಡಿದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷೆ ಬಿ.ಆರ್. ಸವಿತಾ ರೈ ಮಾತನಾಡಿ, ಪತ್ರಿಕೋದ್ಯಮದ ಬದುಕು ಕಬ್ಬಿಣದ ಕಡಲೆ ಇದ್ದಂತೆ. ಈಗಿನ ಪತ್ರಕರ್ತರಲ್ಲಿ ವರದಿಗಾರಿಕೆಯ ಆಸಕ್ತಿ ಕಡಿಮೆ ಆಗುತ್ತಿದೆ. ಸುದ್ದಿ ಮಾಡಿದ ನಂತರ ಫಾಲೋ ಅಪ್ ಇರಬೇಕು. ತನಿಖಾ ವರದಿಗಳು ತಾರ್ಕಿಕ ಅಂತ್ಯಕ್ಕೆ ತಲುಪಿಸುವ ಬದ್ಧತೆ ಇರಬೇಕು ಎಂದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಎನ್. ಚಂದ್ರಮೋಹನ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ವನಿತಾ ಚಂದ್ರಮೋಹನ್, ಜಿಲ್ಲಾ ಸಂಘದ ಖಜಾಂಚಿ ಆನಂದ್ ಪತ್ರಕರ್ತರ ರಾಷ್ಟ್ರೀಯ ಮಂಡಳಿ ಸದಸ್ಯ ಸುನಿಲ್ ಪೊನ್ನೇಟಿ, ವೇದಿಕೆಯಲ್ಲಿದ್ದರು. ಖಜಾಂಚಿ ಕುಡೆಕಲ್ಲು ಗಣೇಶ್ ಪ್ರಾರ್ಥಿಸಿದರು. ಕಾರ್ಯದರ್ಶಿ ನಾಗರಾಜ ಶೆಟ್ಟಿ ಸ್ವಾಗತಿಸಿದರು. ಜಿಲ್ಲಾ ಸಂಘದ ನಿರ್ದೇಶಕ ಟಿ.ಆರ್. ಪ್ರಭುದೇವ್ ಕಾರ್ಯಕ್ರಮ ನಿರೂಪಿಸಿ, ರಘು ಹೆಬ್ಬಾಲೆ ವಂದಿಸಿದರು.

ಎಂ.ಎನ್. ಚಂದ್ರಮೋಹನ್ ಅಧ್ಯಕ್ಷತೆಯಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಮಹಾಸಭೆ ನಡೆಯಿತು. ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷೆ ಬಿ.ಆರ್. ಸವಿತಾ ರೈ, ರಾಷ್ಟ್ರೀಯ ಮಂಡಳಿ ಸದಸ್ಯ ಸುನಿಲ್ ಪೊನ್ನೇಟಿ, ಜಿಲ್ಲಾ ಸಂಘದ ವೀಕ್ಷಕ ಆನಂದ್ ಕೊಡಗು, ಕುಶಾಲನಗರ ಸಂಘದ ಪ್ರಧಾನ ಕಾರ್ಯದರ್ಶಿ ವನಿತಾ ಚಂದ್ರಮೋಹನ್ ಇದ್ದರು.

ಸಹೋದರರಿಗೆ ಚಾಕು ಇರಿತ: ಒಬ್ಬ ಶರಣಾಗತಿ ಮತ್ತೊಬ್ಬ ನಾಪತ್ತೆ

ಯಳಂದೂರು, ಜೂ.20(ವಿ.ನಾಗರಾಜು)– ಪಟ್ಟಣದ ಬಳೇಪೇಟೆಯ ಹಳ್ಳದಬೀದಿಯಲ್ಲಿ ಗುರುವಾರ ರಾತ್ರಿ ಅಣ್ಣ, ತಮ್ಮಂದಿರಿಗೆ ಚಾಕು ಇರಿದು ಗಾಯಗೊಳಿಸಿ ಆರೋಪಿಯೊಬ್ಬ ಪೊಲೀಸರಿಗೆ ಶರಣಾದರೆ, ಮತ್ತೊಬ್ಬ ನಾಪತ್ತೆಯಾಗಿರುವ ಘಟನೆ ನಡೆದಿದೆ.

ಇಲ್ಲಿನ ಜಯವುಲ್ಲಾ ಎಂಬುವವರ ಮಕ್ಕಳಾದ ಮಹಮ್ಮದ್ ತೌಸಿಫ್ ಹಾಗೂ ಮಹಮ್ಮದ್ ಕಾಶಿಫ್ ಎಂಬುವರೇ ಗಾಯಗೊಂಡ ವ್ಯಕ್ತಿಗಳಾಗಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ನಂತರ ಚಾಮರಾಜನಗರದ ಸಿಮ್ಸ್‌ನಲ್ಲಿ ದಾಖಲು ಮಾಡಲಾಗಿದ್ದು, ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆರೋಪಿ ಪಟ್ಟಣದ ಸೈಯದ್ ಶಾಹೀದ್ ಎಂಬಾತ ಠಾಣೆಗೆ ಶರಣಾಗಿದ್ದರೆ, ಈತನ ಸ್ನೇಹಿತ ಚಾಟೀಪುರ ಗ್ರಾಮದ ಕಾಶಿಫ್ ಷರೀಫ್ ನಾಪತ್ತೆಯಾಗಿದ್ದಾನೆ.


ಮಹಮ್ಮದ್ ತೌಸಿಫ್ ಹಾಗೂ ಮಹಮ್ಮದ್ ಕಾಶಿಫ್ ಹಲ್ಲೆಯಲ್ಲಿ ಗಾಯಗೊಂಡಿರುವುದು.

ಘಟನೆಗೆ ಕಾರಣ: ಮಹಮ್ಮದ್ ತೌಸಿಫ್ ಸಾಮವುಲ್ಲಾ ಎಂಬುವರ ಮಗಳು ಹೀನಾ ಬೇಗಂ ಎಂಬವಳೊಂದಿಗೆ ವಿವಾಹವಾಗಿದ್ದರು. ಕೆಲಸಕ್ಕೆ ಹೋಗುವುದಾಗಿ ಹೀನಾ ಬೇಗಂ ತನ್ನ 9 ತಿಂಗಳ ಮಗುವಿರುವುದರಿಂದ ಬೇಡ ಎಂದು ಹೇಳಿದ್ದಕ್ಕೆ ಕೋಪಗೊಂಡು ಮನೆ ಬಿಟ್ಟು ಹೋಗಿದ್ದಾಳೆ. ಹೀನಾಳ ತಮ್ಮ ಸೈಯದ್ ಶಾಹೀದ್ ನಿನ್ನೆ ರಾತ್ರಿ ತನ್ನ ಸ್ನೇಹಿತ ಕಾಶಿಫ್ ಷರೀಫ್ ಜೊತೆ ಸೇರಿಕೊಂಡು ಮಹಮ್ಮದ್ ತೌಸಿಫ್‌ಗೆ ಚಾಕುವಿನಿಂದ ಹೊಟ್ಟೆ ನಡುವಿನ ಮಧ್ಯೆ ಭಾಗಕ್ಕೆ ಚುಚ್ಚುತ್ತಿದ್ದಾಗ ಬಿಡಿಸಲು ಬಂದ ತೌಸಿಫ್ ತಮ್ಮ ಮಹಮ್ಮದ್ ಕಾಶಿಫ್ ಮೇಲೂ ಹಲ್ಲೆ ನಡೆಸಿ ಕೈಗೆ ಗಾಯಗೊಳಿಸಿದ್ದಾನೆ ಎಂದು ಗಾಯಾಳು ಮಹಮ್ಮದ್ ತೌಸಿಫ್ ತನ್ನ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಹಲ್ಲೆ ಮಾಡಿದ ಇಬ್ಬರು ವ್ಯಕ್ತಿಗಳೂ ಸೇರಿದಂತೆ ಈ ಮೂವರ ವಿರುದ್ಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ಶರಣಾದ ಶಾಹೀದ್‌ನನ್ನು ಬಂಧಿಸಿ ಮುಂದಿನ ಕ್ರಮ ವಹಿಸಿದ್ದಾರೆ.

ಮರದಿಂದ ಬಿದ್ದು ವ್ಯಕ್ತಿ ಸಾವು



ಸಿದ್ದಾಪುರ: ಮರ ಕಪಾತ್ ಮಾಡುವ ವೇಳೆಯಲ್ಲಿ ಮರದಿಂದ ಬಿದ್ದು ವ್ಯಕ್ತಿ ಸಾವನ್ನಪ್ಪಿರುವ ಘಟನೆ ನೆಲ್ಯಹುದಿಕೇರಿ ಗ್ರಾಮದ ಬೆಟ್ಟದ ಕಾಡುವಿನಲ್ಲಿ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ಮರಳಗಟ್ಟೆ ಹಾಡಿ ಮೂತ್ತೂರು ಕಾಲೋನಿಯ ನಿವಾಸಿ ದಿನೇಶ್(59) ಮರದಿಂದ ಬಿದ್ದು ಸಾವನ್ನಪ್ಪಿರುವ ದುರ್ದೈವಿಯಾಗಿದ್ದಾರೆ. ಬೆಟ್ಟದಕಾಡುವಿನ ಎಂ.ಎಂ. ಮಹೇಶ್ ಎಂಬವರ ತೋಟದಲ್ಲಿ ಮರ ಕಪಾತ್ ಮಾಡುತ್ತಿದ್ದ ಆಯ ತಪ್ಪಿ ಮರದಿಂದ ಬಿದ್ದ ಸಂದರ್ಭ ದಿನೇಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದ ಶವಾಗಾರಕ್ಕೆ ದಿನೇಶ್ ಮೃತದೇಹವನ್ನು ಮರಣೋತ್ತರ ಪರೀಕ್ಷೆ ರವಾನಿಸಲಾಗಿದೆ. ಸಿದ್ದಾಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ರಕ್ಷಣಾ ತಂಡಕ್ಕೆ ಅಪರಿಚಿತ ಮೃತದೇಹ ಪತ್ತೆ

ಮಡಿಕೇರಿ: ಮೈದುಂಬಿ ಹರಿಯುತ್ತಿರುವ ಕಾವೇರಿ ನದಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿಂದ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ರಕ್ಷಣಾ ತಂಡಕ್ಕೆ ಮತ್ತೊಂದು ಅಪರಿಚಿತ ಮೃತದೇಹ ಪತ್ತೆಯಾದ ಘಟನೆ ಕಣಿವೆ ಬಳಿ ನಡೆದಿದೆ.

ಚೆಟ್ಟಳ್ಳಿ ಕಂಡಕೆರೆ ನಿವಾಸಿ ಮಾಜಿ ಸೈನಿಕ ಗಿರೀಶ್(46) ಎಂಬವರು ನಾಪತ್ತೆಯಾಗಿದ್ದು, ಗುಡ್ಡೆಹೊಸೂರು ಬಳಿಯ ತೆಪ್ಪದ ಕಂಡಿ ಕಾವೇರಿ ನದಿಗೆ ಧುಮುಕಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯ ಹಿನ್ನೆಲೆಯಲ್ಲಿ ಎರಡನೇ ದಿನವೂ ಶೋಧ ಕಾರ್ಯಾಚರಣೆ ನಡೆಸಲಾಯಿತು. ಕುಶಾಲನಗರ ಪೊಲೀಸರು, ಅಗ್ನಿ ಶಾಮಕ ದಳದ ಸಿಬ್ಬಂದಿ ಹಾಗೂ ದುಬಾರೆಯ ರಿವರ್ ರ್‍ಯಾಫ್ಟರ್ ಸಿಬ್ಬಂದಿ 2 ರ್‍ಯಾಫ್ಟ್‌ಗಳನ್ನು ಬಳಸಿ ತೆಪ್ಪದ ಕಂಡಿ ತೂಗು ಸೇತುವೆಯ ಕೆಳಭಾಗದಿಂದ ಕಣಿವೆವರೆಗೆ ಕಾವೇರಿ ನದಿಯಲ್ಲಿ ಅಂದಾಜು 5 ಕಿಮೀ ದೂರದವರೆಗೆ ಶೋಧ ಕಾರ್ಯ ನಡೆಸಿದರು. ಕಾವೇರಿ ನದಿ ಮೈದುಂಬಿಕೊಂಡು ಹರಿಯುತ್ತಿದ್ದು, ಶೋಧ ಕಾರ್ಯಾಚರಣೆ ರಕ್ಷಣಾ ತಂಡಗಳಿಗೆ ಸವಾಲಾಗಿ ಪರಿಣಮಿಸಿದೆ. ಮಳೆ ಬಿಡುವು ನೀಡಿದ್ದ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆವರೆಗೂ ಎಡೆಬಿಡದೆ ಶೋಧ ಕಾರ್ಯಾಚರಣೆ ನಡೆಸಿದರೂ ನಾಪತ್ತೆಯಾಗಿರುವ ಗಿರೀಶ್ ಕುರಿತು ಯಾವುದೇ ಸುಳಿವು ಲಭ್ಯವಾಗಿಲ್ಲ.

ಅಪರಿಚಿತ ಮೃತದೇಹ ಪತ್ತೆ: ರಕ್ಷಣಾ ತಂಡಗಳು ಸುದೀರ್ಘವಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭ ಕಣಿವೆ ಬಳಿಯ ಕಾವೇರಿ ನದಿಯಲ್ಲಿ ಮೃತ ದೇಹವೊಂದು ತೇಲಿ ಬರುತ್ತಿರುವ ಬಗ್ಗೆ ರಕ್ಷಣಾ ತಂಡಕ್ಕೆ ಅಲ್ಲಿನ ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ನಾಪತ್ತೆಯಾಗಿದ್ದ ಗಿರೀಶ್ ಅವರ ಮೃತ ದೇಹ ಇದಾಗಿರಬಹುದೆಂದು ಭಾವಿಸಿ ರ್‍ಯಾಫ್ಟರ್ ಮೂಲಕ ಕಾವೇರಿ ನದಿಯಲ್ಲೇ ರಕ್ಷಣಾ ತಂಡಗಳು ಘಟನಾ ಸ್ಥಳಕ್ಕೆ ತೆರಳಿದ್ದವು. ಆದರೆ ಮೃತ ದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿರುವುದು ರಕ್ಷಣಾ ತಂಡ ಹಾಗೂ ಪೊಲೀಸರಿಗೆ ತಲೆ ನೋವಾಗಿ ಪರಿಣಮಿಸಿದೆ. ಅಪರಿಚಿತ ಪುರುಷನ ಮೃತದೇಹ ಇದಾಗಿದ್ದು, ಗ್ರಾಮಾಂತರ ಪೊಲೀಸರು ಸ್ಥಳಕ್ಕಾಗಮಿಸಿ ಮಹಜರು ನಡೆಸಿದರು. ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಿದರು. ಇದೀಗ ದೊರೆತ್ತಿರುವ ಅಪರಿಚಿತ ಪುರುಷನ ಮೃತದೇಹದ ಮಾಹಿತಿ ಕಲೆ ಹಾಕಲು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಾಗರಿಕರಾಗಲು ಕಾನೂನಿನ ಅರಿವು ಅಗತ್ಯ

ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ್


ಸಾಧನೆಗೈದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ರತ್ನ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಚಾಮರಾಜನಗರ, ಜೂ.20 – ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬದುಕು ಕಟ್ಟಿಕೊಳ್ಳಲು ಸಾಕಷ್ಟು ಕಾನೂನು ಅರಿವು ಅವಶ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಈಶ್ವರ್ ತಿಳಿಸಿದ್ದಾರೆ.

ನಗರದ ಹೊರವಲಯದಲ್ಲಿರುವ ವಿಶ್ವವಿದ್ಯಾಲಯದ ಸಭಾಂಗಣದಲ್ಲಿಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿಶ್ವವಿದ್ಯಾನಿಲಯ ಹಾಗೂ ಜಿಲ್ಲಾ ಪತ್ರಕರ್ತರ ಸಂಘ ಸಂಯುಕ್ತವಾಗಿ ಏರ್ಪಡಿಸಿದ್ದ 'ವಿದ್ಯಾರ್ಥಿಗಳಿಗೆ ಕಾನೂನು ಅರಿವು ಹಾಗೂ ರಾಜ್ಯ ಮಟ್ಟದ ವಿದ್ಯಾರ್ಥಿ ರತ್ನ ಪ್ರಶಸ್ತಿ ಪ್ರದಾನ' ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಕಾನೂನಿನ ಅರಿವು ಪಡೆದು ಅದನ್ನು ಗೌರವಿಸಬೇಕು. ಮೂಲಭೂತ ಹಕ್ಕುಗಳನ್ನು ಅರಿತು ಕರ್ತವ್ಯಗಳನ್ನು ಪಾಲಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಉಪಕುಲಪತಿ ಪ್ರೊ ಎಂ.ಆರ್. ಗಂಗಾಧರ್ ಮಾತನಾಡಿ, ದೇಶ ಸ್ವತಂತ್ರಗೊಂಡು 75 ವರ್ಷಗಳೇ ಆಗಿದ್ದರೂ ಕಾನೂನು ಅರಿವು ಬಗ್ಗೆಯೇ ಸಾಕಷ್ಟು ಚರ್ಚೆಗಳಾಗುತ್ತಿವೆ. ಮಹಿಳೆಯರ ಹಾಗೂ ಮಕ್ಕಳ ಮೇಲೆ ದೌರ್ಜನ್ಯಗಳು ಆಗಾಗ್ಗೆ ನಡೆಯುತ್ತಲೇ ಇವೆ. ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಕಾನೂನು ಅರಿವು ಎಲ್ಲರಿಗೂ ಅವಶ್ಯವಾಗಿದೆ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ರತ್ನ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು. ಗೌರವ ಸ್ವೀಕರಿಸಿದ ವಿದ್ಯಾರ್ಥಿಗಳಾದ ಸುಲೋಚನಾ ಹಾಗೂ ಪ್ರಧಾನಮಂತ್ರಿಯವರ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹೊಂಡರಬಾಳು ಜವಾಹರ್ ನವೋದಯ ಶಾಲೆಯ ಸಿಂಚನಾ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಕುಲಸಚಿವರಾದ ಆರ್.ಲೋಕನಾಥ್, ಡಾ.ಜಿ.ವಿ. ವೆಂಕಟ ರಮಣ, ನಗರದ ಬಿ.ಎಸ್.ವಿ ಪ್ರತಿಷ್ಠಾನ ಅಧ್ಯಕ್ಷ ಬಿ.ವಿ.ವೆಂಕಟನಾಗಪ್ಪ ಶೆಟ್ಟಿ, ಜಿಲ್ಲಾ ಪರ್ತಕರ್ತರ ಸಂಘದ ಅಧ್ಯಕ್ಷ ಜಿ.ಬಂಗಾರು, ಕಾಲೇಜು ಕಾರ್ಯಕ್ರಮದಲ್ಲಿ ಇದ್ದರು.

ಕಬ್ಬಳ್ಳಿ ಸಾಹುಕಾರ್ ಸುಬ್ಬಣ್ಣ ನಿಧನ




ಗುಂಡ್ಲುಪೇಟೆ: ತಾಲೂಕಿನ ಕಬ್ಬಳ್ಳಿ ಮಂಡಲ ಪಂಚಾಯಿತಿಯ ಪ್ರಧಾನರಾಗಿದ್ದ ಸಾಹುಕಾರ್ ಸುಬ್ಬಣ್ಣ (78) ಅನಾರೋಗ್ಯದಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತರಾದರು.

ಮೃತರಿಗೆ ಪತ್ನಿ ಮೈಸೂರು ಜಿಲ್ಲಾ ಪರಿಷತ್ ಮಾಜಿ ಸದಸ್ಯೆ, ಚಾ.ನಗರ ಜಿಪಂ ಮಾಜಿ ಅಧ್ಯಕ್ಷೆ ದೇವಮ್ಮಣ್ಣಿ, ಪುತ್ರರಾದ ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಕಬ್ಬಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಸಿರಿಯಪ್ಪ ಹಾಗೂ ಒಬ್ಬರು ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರ ತಂದೆ ಸಿರಿಯಪ್ಪ ಕಬ್ಬಳ್ಳಿ ಸಾಹುಕಾರ್ ಮನೆತನದವರಾಗಿದ್ದು ನಂಜನಗೂಡಿನಲ್ಲಿ ಕಬ್ಬಳ್ಳಿ ಶಾಲೆ, ಹಾಸ್ಟೆಲ್ ಉಚಿತ ವಸತಿ, ಶಾಲೆ ನಡೆಸುತ್ತಿದ್ದರು, ಕಬ್ಬಳ್ಳಿಯಲ್ಲಿ ಹಾಸ್ಟಲ್, ಪ್ರಾಥಮಿಕ ಮತ್ತು ಪ್ರೌಢಶಾಲೆ, ಪದವಿಪೂರ್ವ ಕಾಲೇಜು ನಿರ್ಮಾಣಕ್ಕೆ ಉಚಿತವಾಗಿ ನಿವೇಶನ ನೀಡಿ ಕಟ್ಟಡಗಳನ್ನೂ ಕಟ್ಟಿಸಿಕೊಟ್ಟಿದ್ದು ತಾಲೂಕಿನ ಪ್ರಮುಖ ದಾನಿಯಾಗಿದ್ದರು. ಮೃತರ ನಿಧನಕ್ಕೆ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ ಕುಮಾರ್, ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡ ಪ್ರಸಾದ್ ಸಂತಾಪ ವ್ಯಕ್ತಪಡಿಸಿದ್ದಾರೆ.

ಯಾವುದೇ ಕ್ಷಣದಲ್ಲಿ ಕೆಆರ್‌ಎಸ್‌ನಿಂದ ನೀರು ಬಿಡುಗಡೆ

ಸುರಕ್ಷಿತ ಸ್ಥಳಕ್ಕೆ ತೆರಳಲು ಜನರಿಗೆ ಸೂಚನೆ



ಶ್ರೀರಂಗಪಟ್ಟಣ, ಜೂ.20– ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಾವೇರಿ ಮೈದುಂಬಿ ಹರಿಯುತ್ತಿದ್ದು, ಯಾವುದೇ ಕ್ಷಣದಲ್ಲಿ ಕೆಆರ್‌ಎಸ್ ಡ್ಯಾಂನಿಂದ ನೀರು ಬಿಡುಗಡೆ ಮಾಡುವ ಸಾಧ್ಯತೆ ಇದೆ. ನದಿ ಪಾತ್ರದ ಜನರು ಸುರಕ್ಷಿತ ಸ್ಥಳಕ್ಕೆ ತೆರಳಬೇಕು ಎಂದು ಶ್ರೀರಂಗಪಟ್ಟಣ ತಹಶೀಲ್ದಾರ್ ಮನವಿ ಮಾಡಿದ್ದಾರೆ.

ಸದ್ಯ ಕೆಆರ್‌ಎಸ್ ಡ್ಯಾಂ 118.40 ಅಡಿ ಭರ್ತಿಯಾಗಿದೆ. ಡ್ಯಾಂ ಸಂಪೂರ್ಣ ಭರ್ತಿಯಾಗಲು ಇನ್ನು 6 ಅಡಿ ಮಾತ್ರ ಬಾಕಿ ಇದೆ. ಜಲಾಶಯಕ್ಕೆ 23,473 ಕ್ಯೂಸೆಕ್ ನೀರು ಒಳಹರಿವು ಇದ್ದು, ಯಾವುದೇ ಕ್ಷಣದಲ್ಲಿ ಕಾವೇರಿ ನದಿಗೆ ನೀರು ಬಿಡುಗಡೆ ಮಾಡಬೇಕಾಗಿ ಬರಬಹುದು. ಹೀಗಾಗಿ ತಹಶೀಲ್ದಾರ್ ಪತ್ರದ ಮೂಲಕ ಎಚ್ಚರಿಕೆ ಸಂದೇಶ ಬಿಡುಗಡೆ ಮಾಡಿದ್ದಾರೆ.

2025–26ನೇ ಸಾಲಿನಲ್ಲಿ ಮುಂಗಾರು ಮಳೆಯಿಂದ ಕೃಷ್ಣರಾಜಸಾಗರ ಡ್ಯಾಂನಲ್ಲಿ ನೀರು ಹೆಚ್ಚಾಗುತ್ತಿರುವ ಕಾರಣ ಕಾವೇರಿ ನದಿಯ ಜಲಾನಯನ ಪ್ರದೇಶದಲ್ಲಿನ ಜನರಿಗೆ ಮುನ್ನೆಚ್ಚರಿಕೆ ಕ್ರಮವಹಿಸುವ ಬಗ್ಗೆ ಮಂಡ್ಯ ಜಿಲ್ಲಾಧಿಕಾರಿಗಳ ದೂರವಾಣಿ ಸಂದೇಶದ ಮೇರೆಗೆ ಈ ಪತ್ರ ಬರೆಯಲಾಗಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

ಎಚ್ಚರಿಕೆ ಸಂದೇಶದಲ್ಲೇನಿದೆ: ಕೊಡಗಿನಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದ ಕೃಷ್ಣರಾಜಸಾಗರ ಡ್ಯಾಂನ ಒಳಹರಿವು ಸತತ ಹೆಚ್ಚಾಗಿದೆ. ಹಾಗಾಗಿ ಕೆಆರ್‌ಎಸ್ ಡ್ಯಾಂನಲ್ಲಿ ನೀರಿನ ಮಟ್ಟ ಗಣನೀಯ ಏರಿಕೆ ಆಗುತ್ತದೆ. ಹೆಚ್ಚುವರಿ ನೀರನ್ನು ಯಾವುದೇ ಸಂದರ್ಭದಲ್ಲಾದರೂ ಹೊರಬಿಡುವ ಸಾಧ್ಯತೆ ಇರುವುದರಿಂದ ಕಾವೇರಿ ನದಿ ಪಾತ್ರ ಅಚ್ಚುಕಟ್ಟು ಪ್ರದೇಶದಲ್ಲಿ ವಾಸವಿರುವ ಜನ–ಜಾನುವಾರು ಹಾಗೂ ಇತರೆ ಬೆಲೆ ಬಾಳುವ ವಸ್ತುಗಳಿಗೆ ಹಾನಿಯಾಗುವ ಸಂಭವವಿರುವುದರಿಂದ ಮುನ್ನೆಚ್ಚರಿಕೆ ಕ್ರಮ ವಹಿಸಲು ಈ ಮೂಲಕ ತಿಳಿಯಪಡಿಸಲಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಪುರಸಭೆ ನೂತನ ನಾಮನಿರ್ದೇಶಿತ ಸದಸ್ಯರಿಗೆ ಅಭಿನಂದನೆ

ಪಟ್ಟಣದ ಅಭಿವೃದ್ಧಿಗೆ ಶ್ರಮಿಸುತ್ತೇವೆ: ಸಬೀಲ್ ಖಾನ್, ನಾಗರಾಜು


ಪುರಸಭೆ ನೂತನ ನಾಮ ನಿರ್ದೇಶಿತ ಸದಸ್ಯರಾದ ಸಬೀಲ್ ಖಾನ್ ಹಾಗೂ ನಾಗರಾಜು ಅವರನ್ನು ಅಭಿನಂದಿಸಲಾಯಿತು.

ತಿ.ನರಸೀಪುರ, ಜೂ.20– ಪಟ್ಟಣದ ಪುರಸಭೆಗೆ ನೂತನ ನಾಮ ನಿರ್ದೇಶಿತ ಸದಸ್ಯರಾಗಿ ಆಯ್ಕೆಯಾದ ಮುಸಲ್ಮಾನ್ ಸಮುದಾಯದ ಸಬೀಲ್ ಖಾನ್ ಹಾಗೂ ಸವಿತಾ ಸಮಾಜದ ಖಜಾಂಚಿ ನಾಗರಾಜು ಅವರನ್ನು ಶುಕ್ರವಾರ ಪುರಸಭೆಗೆ ಸ್ವಾಗತಿಸಿ ಅಭಿನಂದಿಸಲಾಯಿತು.

ಇಬ್ಬರು ಸದಸ್ಯರು ಅಧಿಕೃತವಾಗಿ ಪುರಸಭೆ ಪ್ರವೇಶಿಸಿದ ಹಿನ್ನೆಲೆಯಲ್ಲಿ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಪುರಸಭೆ ಮಾಜಿ ಸದಸ್ಯ ಎಂ.ರಾಘವೇಂದ್ರ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ. ಯತೀಂದ್ರ ಅವರು ಸಾಮಾಜಿಕ ನ್ಯಾಯದಡಿ ಇಬ್ಬರನ್ನು ಪುರಸಭೆಗೆ ನಾಮನಿರ್ದೇಶನ ಮಾಡಿದ್ದಾರೆ. ನೂತನ ಸದಸ್ಯರು 23 ವಾರ್ಡ್‌ಗಳ ಜನರ ಸಮಸ್ಯೆಗಳ ಬಗ್ಗೆ ಪುರಸಭೆ ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳ ಗಮನಕ್ಕೆ ತರಬೇಕು ಎಂದು ಕಿವಿಮಾತು ಹೇಳಿದರು.

ನೂತನ ಸದಸ್ಯ ಸಬೀಲ್ ಖಾನ್ ಮಾತನಾಡಿ, ಪಟ್ಟಣದ ಪುರಸಭೆಗೆ ಸರ್ಕಾರದಿಂದ ನಾಮ ನಿರ್ದೇಶಿತ ಸದಸ್ಯರಾಗಿ ನಮ್ಮ ನೇಮಕವಾಗಿದೆ. ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ನಾವಿಬ್ಬರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ. ಚುನಾಯಿತ ಸದಸ್ಯರು ಹಾಗೂ ಪುರಸಭೆ ಅಧಿಕಾರಿ ವರ್ಗದವರ ಸಹಕಾರ ಬಹುಮುಖ್ಯ. ಪಟ್ಟಣದ ಅಭಿವೃದ್ಧಿ ಹಿತದೃಷ್ಟಿಯಿಂದ ನಮ್ಮ ಸಲಹೆಗಳನ್ನು ಪರಿಗಣಿಸುವಂತಾಗಬೇಕು. ನಮಗೆ ದೊರಕಿರುವ ಅಧಿಕಾರದಲ್ಲಿ ಇತಿಮಿತಿಯೊಳಗೆ ಪುರಸಭೆ ಅಭಿವೃದ್ಧಿಗೆ ಹಾಗೂ ಸಾರ್ವಜನಿಕರಿಗೆ ಆಗಬಹುದಾದ ಯಾವುದೇ ಕೆಲಸ ಕಾರ್ಯ ಮಾಡಲು ನಾವು ಬದ್ಧರಾಗಿದ್ದೇವೆ ಎಂದರು. ನಮ್ಮ ನೇಮಕಕ್ಕೆ ಕಾರಣ ರಾದ ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಕೃತಜ್ಞರಾಗಿದ್ದೇವೆ ಎಂದರು.

> ಪುರಸಭೆ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಕೋಟ್ಯಾಂತರ ರೂ. ಅನುದಾನ ನೀಡಿದ್ದು, ಶೇ.60ರಷ್ಟು ಅಭಿವೃದ್ಧಿ ಕಂಡಿದೆ. ಇನ್ನೂ ಪಟ್ಟಣದ ಅಭಿವೃದ್ಧಿ ಆಗಬೇಕಿದೆ. ನಾಮ ನಿರ್ದೇಶಿತ ಸದಸ್ಯರು ಸರ್ಕಾರದಿಂದ ಬರುವ ಅನುದಾನವನ್ನು ಸಮರ್ಪಕವಾಗಿ ಬಳಸಲು ಸಲಹೆ ಸೂಚನೆಗಳನ್ನು ನೀಡುವ ಜೊತೆಗೆ ಸಚಿವರು, ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಹೆಚ್ಚಿನ ಅನುದಾನ ತರಲು ಸಹಕರಿಸಬೇಕು.
>
> – ಸೈಯದ್ ಅಹ್ಮದ್, ಪುರಸಭೆ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ.

ಮತ್ತೋರ್ವ ನೂತನ ಸದಸ್ಯ ಎಂ.ನಾಗರಾಜು(ಜೋಗಿ) ಮಾತನಾಡಿ, ಹಿಂದುಳಿದ ವರ್ಗಗಳಿಗೆ ಅಧಿಕಾರ ಸಿಗುವುದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ. ಹೀಗಾಗಿ ನನ್ನನ್ನು ಗುರುತಿಸಿ ಅಧಿಕಾರ ನೀಡಿದ ಕಾಂಗ್ರೆಸ್ ವರಿಷ್ಠರಿಗೆ ಅಭಿನಂದನೆ ತಿಳಿಸುತ್ತೇನೆ. ಅಲ್ಲದೇ ಸರ್ಕಾರದಿಂದ ಬರುವ ಅನುದಾನವನ್ನು ತಳಮಟ್ಟದ ಸಮುದಾಯಗಳಿಗೆ ಕೊಡಿಸುವ ಮೂಲಕ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತೇನೆ ಎಂದರು.

ಈ ವೇಳೆ ಪುರಸಭೆ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ, ಸದಸ್ಯ ಮುದ್ದಬೀರನಹುಂಡಿ ಶ್ರೀಕಂಠ, ಸುನೀಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡ, ಅಹಿಂದ ಒಕ್ಕೂಟದ ಅಧ್ಯಕ್ಷ ದೇವರಾಜ್, ಗ್ರಾಪಂ ಮಾಜಿ ಸದಸ್ಯ ಪರಶಿವ, ಕೆಪಿಸಿಸಿ ಸದಸ್ಯ ಸುಂದರ ನಾಯಕ, ನಾದಸ್ವರ ಸಂಘದ ಅಧ್ಯಕ್ಷ ಲೋಕೇಶ್, ಅನ್ವರ್ ಪಾಷ, ನೂರ್ ಪಾಷ, ಅಬ್ದುಲ್ ಅತೀಕ್, ಅಮ್ಜದ್ ಪಾಷ, ಆಸೀಫ್, ಇಮ್ರಾನ್, ಸೈಫ್ ಅಲಿ, ಅಬ್ದುಲ್ ಮುನಬ್, ಜಾವೀದ್, ರಸೀದ್ ಅಹಮದ್, ಸಿದ್ದರಾಜು, ಅಣ್ಣಪ್ಪ, ವಿಜಯಕುಮಾರ್, ಲಕ್ಷ್ಮಣ್ ಕುಮಾರ್, ಶೇಖರ್, ಚಂದ್ರು, ಮಹೇಶ್, ಪ್ರಶಾಂತ್ ಈಡಿಗರ್, ಕಾಂತರಾಜ್ ಅರಸ್, ನಾಗರತ್ನಮ್ಮ, ಸ್ವಾಮಿ, ಆನಂದ್, ಸಿದ್ದರಾಜು, ಬಸವಣ್ಣ, ರವಿ, ತಿರುಮಕೊಡಲು ಲಕ್ಷ್ಮಣ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

ನಾಳೆ ಮಂಡ್ಯದ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ: ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಜೂನ್ 22 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ನಲ್ಲಿ ವ್ಯತ್ಯಯ ಉಂಟಾಗಲಿದೆ.

ಮಂಡ್ಯ ವಿದ್ಯುತ್ ವಿತರಣಾ ಕೇಂದ್ರ : ನಗರ ಪ್ರದೇಶಗಳಾದ ಸುಭಾಷ್‌ನಗರ, ಅಶೋಕನಗರ, ವಿ.ವಿ. ರೋಡ್, ಹೊಸಹಳ್ಳಿ, ವಿನಾಯಕ ಬಡಾವಣೆ, ನೂರು ಅಡಿ ರೋಡ್, ನೆಹರು ನಗರ, ಹೊಸಹಳ್ಳಿ, ದ್ವಾರಕನಗರ, ಗಾಂಧಿನಗರ, NGO'S layout, ಶ್ರೀ ರಾಮ ನಗರ, ಕಾವೇರಿ ನಗರ 1 ಮತ್ತು 2ನೇ ಹಂತ, ಚಂದ್ರ ದರ್ಶನ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ, ಶಂಕರನಗರ, ಇಂಡುವಾಳು, ಕಿರಗಂದೂರು, ಕಲ್ಲಹಳ್ಳಿ, ಕ್ಯಾತುಂಗೆರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯತ್ ವ್ಯತ್ಯಯ ಉಂಟಾಗಲಿದೆ.

ಗ್ರಾಮಾಂತರ ಪ್ರದೇಶಗಳಾದ ಕಾರಸವಾಡಿ, ಮಂಗಲ, ಹನಿಯಂಬಾಡಿ, ಚೀರನಹಳ್ಳಿ, ಹೆಬ್ಬಕವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಬೇವಿನಹಳ್ಳಿ, ಹಲ್ಲುಕೆರೆ, ಎ. ಹುಲಿಕೆರೆ, ಬಿ.ಹುಲಿಕೆರೆ. ಮತ್ತು ಐ.ಪಿ ಮಾರ್ಗಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಎಸ್‌ಆರ್ ಅನುದಾನದ ಮೂಲಕ ಸರ್ಕಾರಿ ಶಾಲೆಗಳ ಅಭಿವೃದ್ಧಿ


ಸಿಎಸ್‌ಆರ್ ಶಾಲೆಗಳ ಮುಖ್ಯ ಶಿಕ್ಷಕರ ಹಾಗೂ ಕಂಪನಿ ಮುಖ್ಯಸ್ಥರೊಂದಿಗೆ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ

ಮಂಡ್ಯ: ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸಬೇಕಿರುವ 16 ಸರ್ಕಾರಿ ಶಾಲೆಗಳನ್ನು ಗುರುತಿಸಲಾಗಿದೆ, ಖಾಸಗಿ ಸಂಸ್ಥೆಗಳು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಅನುದಾನದಡಿ ಈ 16 ಶಾಲೆಗಳನ್ನು ಅಥವಾ ಖಾಸಗಿ ಸಂಸ್ಥೆಗಳು ಇಚ್ಛಿಸುವ ಯಾವುದಾದರು ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸಬಹುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಿಎಸ್‌ಆರ್ ಶಾಲೆಗಳ ಮುಖ್ಯ ಶಿಕ್ಷಕರ ಹಾಗೂ ಕಂಪನಿ ಮುಖ್ಯಸ್ಥರೊಂದಿಗೆ ಏರ್ಪಡಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಖಾಸಗಿ ಸಂಸ್ಥೆಗಳು ಸಿಎಸ್‌ಆರ್ ಅಭಿವೃದ್ಧಿ ಪಡಿಸುವ ಶಾಲಾ ಕೊಠಡಿಗಳ ನಾಮಫಲಕದಲ್ಲಿ ಸಂಸ್ಥೆಯ ಹೆಸರು ಹಾಕಲಾಗುತ್ತದೆ ಎಂದು ತಿಳಿಸಿದರು.

ಈಗಾಗಲೇ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಗುರುತಿಸಲಾಗಿರುವ 16 ಶಾಲೆಗಳನ್ನು ಯಾವ ಸಂಸ್ಥೆಯವರು ಯಾವ ಶಾಲೆಗಳನ್ನು ವಹಿಸಿಕೊಳ್ಳುತ್ತಿದ್ದಾರೆ ಎಂಬುದರ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಖಾಸಗಿ ಸಂಸ್ಥೆಗಳು ಶಾಲೆಗಳ ಅಭಿವೃದ್ಧಿ ಕಾಮಗಾರಿಯನ್ನು ವಹಿಸಿಕೊಂಡ ನಂತರ ಯಾವುದೇ ವಿಳಂಬ ಮಾಡದೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕು, ಅಧಿಕಾರಿಗಳು ವಿಶೇಷ ಮುತುವರ್ಜಿ ವಹಿಸಿ ಖಾಸಗಿ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಸಂಪರ್ಕದಲ್ಲಿದ್ದು ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಜಿಲ್ಲೆಯ ಮಾರಗೌಡನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಸೂಕ್ತವಾಗಿ ಊಟ ಮಾಡಲು ಚಾವಣಿ ನಿರ್ಮಿಸಲಾಗಿದೆ ಆದರೆ ಕುಳಿತುಕೊಂಡು ಊಟ ಮಾಡಲು ಸರಿಯಾದ ಫ್ಲೋರ್ ವ್ಯವಸ್ಥೆ ಇಲ್ಲ, ಅಲ್ಲಿ ವಿದ್ಯಾರ್ಥಿಗಳು ಕುಳಿತುಕೊಂಡು ಊಟ ಮಾಡಲು ಸರಿಯಾದ ಫ್ಲೋರ್ ವ್ಯವಸ್ಥೆ ಕಲ್ಪಿಸ ಎಂದು ಹೇಳಿದರು.

ಜಿಪಂ ಸಿಇಓ ಕೆ ಆರ್ ನಂದಿನಿ ಅವರು ಮಾತನಾಡಿ ಸಿ.ಎಸ್.ಆರ್ ಅನುದಾನದ ಮೂಲಕ ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್, ಸ್ಮಾರ್ಟ್ ಕ್ಲಾಸ್, ತಂತ್ರಜ್ಞಾನದ ಉಪಕರಣಗಳು, ನೋಟ್ ಬುಕ್ಸ್ ನೀಡಬೇಡಿ, ಅವೆಲ್ಲವನ್ನು ಸರ್ಕಾರವೇ ನೀಡಲಿದೆ ಎಂದು ಹೇಳಿದರು.

ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇಲ್ಲದ ಶಾಲೆಗಳು, ದುರಸ್ಥಿಗೊಳಿಸಬೇಕಾಗಿರುವ ಶಾಲೆಗಳು, ಕಾಂಪೌಂಡ್ ಇಲ್ಲದ ಶಾಲೆಗಳನ್ನು ಗುರುತಿಸಿ ಪಟ್ಟಿ ಮಾಡಿ ಕೊಡಿ, ಸಿ.ಎಸ್.ಆರ್ ಅನುದಾನದಡಿ ಅವುಗಳನ್ನು ಅಭಿವೃದ್ಧಿ ಪಡಿಸಲಾಗುವುದು, ಕಾಂಪೌಂಡ್ ನಿರ್ಮಿಸಿದ ನಂತರ ಸಾಹಿತ್ಯಕ್ಕೆ ಸಂಬಂಧಿಸಿದ ಚಿತ್ರಗಳು ಹಾಗೂ ಅಭಿವೃದ್ಧಿ ಪಡಿಸಿದ ಸಂಸ್ಥೆ ಹೆಸರನ್ನು ಕಾಂಪೌಂಡ್ ನಲ್ಲಿ ಬರೆಸಿ ಎಂದು ಹೇಳಿದರು.

ನೂತನ ಬಸ್ ಮಾರ್ಗಕ್ಕೆ ಚಾಲನೆ



ನಂಜನಗೂಡು, ಜೂ.20– ನಂಜನಗೂಡಿನಿಂದ ವರುಣ ಕ್ಷೇತ್ರದ ಸಿದ್ದರಾಮನ ಹುಂಡಿ ಗ್ರಾಮದ ನೂತನ ಬಸ್ ಮಾರ್ಗಕ್ಕೆ ಚಾಲನೆ ನೀಡಲಾಯಿತು.

ಮೋಹನ್ ನಾಯಕ್ ಮಾತನಾಡಿ, ಸಾರ್ವಜನಿಕರ ಒತ್ತಾಯದ ಮೇರೆಗೆ ನಂಜನಗೂಡು ಘಟಕದಿಂದ ಬಿಳಿಗೆರೆ, ಬೆಳಗಲಿ, ನಂದಗುಂದ ಮಾರ್ಗವಾಗಿ ಸಿದ್ದರಾಮನ ಹುಂಡಿಗೆ ಸಂಪರ್ಕ ಕಲ್ಪಿಸುವ ನೂತನ ಬಸ್ ಮಾರ್ಗಕ್ಕೆ ಚಾಲನೆ ನೀಡಲಾಗಿದೆ ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದರು. ಇದೇ ವೇಳೆ ಪ್ರಮೋದ್, ಅರಸು, ಚಾಲಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ಜೂ.20– ತಾಲೂಕಿನ ಹೆಚ್.ಡಿ.ಕೋಟೆ ಟೌನ್, ಮೇಟಿಕುಪ್ಪೆ, ಚಕ್ಕೋಡನಹಳ್ಳಿ, ಭೀಮನಹಳ್ಳಿ, ಹಿರೇಹಳ್ಳಿ, ಅಣ್ಣೂರು, ಪಡುವಕೋಟೆ, ಸವ್ವೆ, ನಾಗನಹಳ್ಳಿ ಮತ್ತು ಚಿಕ್ಕಕೆರೆಯೂರು, ಯರಹಳ್ಳಿ ಹ್ಯಾಂಡ್‌ಪೋಸ್ಟ್ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರ ಹ್ಯಾಂಡ್ ಪೋಸ್ಟ್, ಹೈರಿಗೆ, ಹೆಬ್ಬಲಗುಪ್ಪೆ ಮತ್ತು ನೂರಲಕುಪ್ಪೆ ಗ್ರಾಪಂ, ಹಂಪಾಪುರ 66/11ಕೆವಿ ವಿದ್ಯುತ್ ವಿತರಣಾ ಕೇಂದ್ರ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಕೆ.ಬೆಳ್ತೂರು, ಮನುಗನಹಳ್ಳಿ ಮತ್ತು ಬಾಚೇಗೌಡನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಜೂ.21 ರಂದು ಬೆಳಗ್ಗೆ 10 ರಿಂದ ಸಂಜೆ 6 ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ದೇಶನಾಯಕ ನಿಧನ



ಮೂಗೂರು, ಜೂ.20– ಗ್ರಾಮದ ಪಡುವಲ ನಾಯಕರ ಬೀದಿ ನಿವಾಸಿ ದೇಶನಾಯಕ (68) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ನಾಯಕ ಸಮುದಾಯದ ರುದ್ರಭೂಮಿಯಲ್ಲಿ ಶನಿವಾರ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಕಾಫಿ ತೋಟ ಮಾರಾಟಕ್ಕಿದೆ

ವಿರಾಜಪೇಟೆಯಿಂದ 12 ಕಿ.ಮೀ ಕ್ಲಬ್ ಮಹೀಂದ್ರ ರೆಸಾರ್ಟ್ ಹತ್ತಿರ ರೆಸಾರ್ಟ್‌ಗೆ ಯೋಗ್ಯವಾದ ಉತ್ತಮ ಸ್ಥಿತಿಯಲ್ಲಿರುವ ಕಾಫಿ ತೋಟ +ಮನೆ, ಕೆರೆ. 5 ಎಕರೆ 55 ಸೆಂಟು ಮಾರಾಟಕ್ಕಿದೆ.

ಸಂಪರ್ಕಿಸಿ: 9108946647

SITES FOR SALE

MUDA APPROVED Srirampura Ring Road Opposite to University Layout) 30 x 40, 30 x 50

8296832513

FOR SALE

15x30, South Facing 2 Floors EWS House Near 'M' Block, Kuvempunagar 40 Lakhs

7899214181

ಸೈಟು ಮಾರಾಟಕ್ಕಿದೆ

30x50 DTCP 11'A' ಖಾತೆ ರೇರಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ. 25 ಲಕ್ಷಗಳು. ಶ್ರೀಧರ ಬಡಾವಣೆ (ಬಸ್ ರಸ್ತೆಗೆ ಹತ್ತಿರದಲ್ಲಿದೆ). ತಳೂರು ಟಿವಿಎಸ್ ಫ್ಯಾಕ್ಟರಿ ಹತ್ತಿರ, ಮೈಸೂರು.

Mob: 9742198093

ಬೇಕಾಗಿದ್ದಾರೆ

ಹೌಸ್ ಕೀಪಿಂಗ್ ಅಸಿಸ್ಟೆಂಟ್‌ಗಳು ಕೂರ್ಗಳ್ಳಿ (NIE) ಯಲ್ಲಿ ಹುಡುಗರು ಬೇಕಾಗಿದ್ದಾರೆ. ESI ಮತ್ತು PF ಸೌಲಭ್ಯವಿರುತ್ತದೆ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.

9901607889 / 8710040058

SITES FOR SALE

30 x 50 40 x 60 Srirampura Ring Road, Mysuru

8050345574

CONSTRUCTION

SKANDA

* ಉತ್ತಮ ಗುಣಮಟ್ಟ ಮತ್ತು ಆಕರ್ಷಕ ದರದಲ್ಲಿ ಮನೆ ನಿರ್ಮಾಣ
* ನಿಗದಿತ ಸಮಯದಲ್ಲಿ ಮನೆ ಹಸ್ತಾಂತರ
* ಉಚಿತ Plan ಮತ್ತು Bank Loan ಮಾಡಿಕೊಡಲಾಗುವುದು



8310008208

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

6361056646, 7676844160

ಪ್ರವಾಸ

7 ದಿನಗಳ ಕಾಶಿ ಪ್ರವಾಸ 15/7/25,
3 ದಿನಗಳ ಶಿರಡಿ ಪ್ರವಾಸ 18/7/25,
4 ದಿನಗಳ ಪುರಿ ಜಗನ್ನಾಥ ಪ್ರವಾಸ 10/7/25,
5 ದಿನಗಳ ದೆಹಲಿ ಪ್ರವಾಸ 24/7/25

ಸುವರ್ಣ ಯಾತ್ರಾ

6360146483 / 9019462508

Nypunya School of Excellence MYSURU

ಬೇಕಾಗಿದ್ದಾರೆ

ಶಾಲೆಗೆ ಮಕ್ಕಳನ್ನು ಕರೆತರಲು ಮತ್ತು ಶಾಲೆಯಿಂದ ಮಕ್ಕಳನ್ನು ಮನೆಗೆ ಕರೆದೊಯ್ಯಲು ಇಕೋ ವಾಹನ ಬಾಡಿಗೆಗೆ ಬೇಕಾಗಿದೆ. (ಮೈಸೂರು ನಗರ ವ್ಯಾಪ್ತಿಯವರಿಗೆ ಆದ್ಯತೆ) ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಸಂಖ್ಯೆಯನ್ನು ಸಂಪರ್ಕಿಸಬಹುದು.

70228 49856

Solar Water Heaters



SUNZONE SOLAR SYSTEM
VM Double Road, Kuvempunagar, Mysuru

9845175443

SRV Educational Institution

Hosa Anandur, Next to J.K. Tyre

REQUIRED TEACHERS for High School.

Qualification: B.Ed. (English medium)

9902323740, 9008900883

COMMERCIAL COMPLEX FOR SALE

at Vivekananda Circle, 3 floor building with Cellar Total built-up area 10,800 sq.ft., Site Dimension 45x60 Sale Price: 5.5 Crore.

WANTED MUDA SITE/HOUSE

Contact: 94489 38989 / 78920 35789

30X40 | 30X50 SITES

ತಕ್ಷಣ ಮನೆ ಕಟ್ಟಲು ಲಭ್ಯ

ಅರಮನೆಯಿಂದ 7 Km ಇರುವ ನಮ್ಮ ಬಡಾವಣೆಗಳಲ್ಲಿ ಲಭ್ಯ

- T.N ಪುರ ಮುಖ್ಯ ರಸ್ತೆಗೆ 400 Mtrs ಬೆಲೆ 55–64 ಲಕ್ಷ (ಆಲನಹಳ್ಳಿ)
- J.P ನಗರ – ಶ್ರೀರಾಂಪುರ ರಿಂಗ್ ರಸ್ತೆ 300 Mtrs ಬೆಲೆ 54 ಲಕ್ಷ
- ಬನ್ನೂರು ರಸ್ತೆ–ಬೆಲೆ 45 ಲಕ್ಷ (ವಿದ್ಯಾವಿಕಾಸ್)

Brokers Excuse - No Commission

81230 75038

NORTH EAST CONSTRUCTIONS

We undertake all types of Civil Works, Including:-

- Residential Construction
- Commercial Construction
- Industrial Construction
- Repair Works
- Renovation
- Architecture
- Structural Design
- Interior Design
- Material Supply

Call: 76193 99919

ನಿರ್ಮಲ ಸರ್ವೀಸ್

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

63640 79244

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 7204494854

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ

94499 90513, 99647 33988

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 86183 73596

SBIT TRAVELS

Group Tours

Amarnath Yatra 4 Days
7, 16, 21, 27 July | 2, 12, 25, 29 Aug

Odisha-5 Days
8, 18, 23, 29 July | 3, 12, 24, 30 Aug

9343524127 (Saraswathipuram, Mysuru)

SITES FOR SALE

ಪೋಲೀಸ್ ಲೇಔಟ್ – ರಿಂಗ್ ರಸ್ತೆ ಹತ್ತಿರ 30X40 – 66 ಲಕ್ಷ 40X45 – 96 ಲಕ್ಷ

- J.P ನಗರ – 11 ಬಿ ಕಮರ್ಷಿಯಲ್ 30X40 ಕಾರ್ನರ್ ಸೈಟ್ – 42 ಲಕ್ಷ
- ಶ್ರೀನಗರ – ರಾಷ್ಟ್ರೋತ್ಥಾನ ಬಸ್ ರೂಟ್ 30X40 | 30X50 32 ಲಕ್ಷ ನಂತರ
- ಬೋಗಾದಿ – ಇಲವಾಲದಲ್ಲೂ ಲಭ್ಯ

Brokers Excuse

97428 78878

ವಧು–ವರಾನ್ವೇಷಣೆ

ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:

(2nd Marriages also)

Mob: 9343175000

BECOME A TEACHER

NURSERY TEACHERS TRAINING
PRIMARY TEACHERS TRAINING
(Recognised by N H R D New Delhi)
S S L C PASS, PUC FAIL/PASS, ANY DEGREE, GET CERTIFIED DIPLOMA HOLDER.
Start earning from next year

Jnana gangothri Convent
WatsApp/call 9113980741

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

FOR SALE

40x60, S/F
Site No. 12365, Opp. Park, near Ring Road, Vijayanagar 4th Stage, 2nd Phase.
Price: 1.65 Crore

8884133677

FOR RENT SHOP / OFFICE

210 Square Feet Ground Floor Thyagaraj Main Road, Nearby 101 Ganapati Temple

8453459670

HOUSE / APARTMENT FOR SALE

3 BHK Duplex House 20x30 at Lalithadrinagar, MUDA, Clear Title Deed, Architect Building Price: 78 Lakhs. 3 BHK Apartment at Bogadi Road, 15 sqares, G/F, Price: 60 Lakhs

WANTED MUDA SITE / HOUSE

94489 38989 / 78920 35789

IMKTA - PRE-SCHOOL TEACHER TRAINING

Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in

ALPHA INTERNATIONAL SCHOOL @ Srirampura

Call: 7829937469

ONLINE TRAINING AVAILABLE

CONTACT TO BUY OR SELL PROPERTIES

in or around Mysore with Fair price & Transparency Deal.

Sree Rajeshwari Associates (Regd)

9342123373

ಮೈಸೂರಿನ ಸುತ್ತ ಮುತ್ತ

30ರಿಂದ 35 ಕಿ.ಮಿ ವ್ಯಾಪ್ತಿ ಒಳಗೆ 2ರಿಂದ 3 ಎಕರೆ ಕೃಷಿ ಭೂಮಿ ಬೇಕಾಗಿದೆ,

8217864635

SITES FOR SALE

40x60 W/F, Kuberananda Sagara Phase 1, very near to NH 275 Bangalore to Kushal Nagara highway.
30x30 E/F, HNR Avenue, Yelwala, Mysore

Ph No - 9632030718

ಸೈಟ್ ಮಾರಾಟಕ್ಕಿದೆ

22 X 50 ಒಟ್ಟು ವಿಸ್ತೀರ್ಣ 1433.00 ಚದರಡಿ (Heart Dimensions) ನಿವೇಶನ ಮೈಸೂರು ವಿಶ್ವ ವಿದ್ಯಾಲಯ ಲೇಔಟ್, ದಟ್ಟಗಳ್ಳಿ

ಮೊಬೈಲ್ ನಂಬರ್: 9845322895

ಮನೆ ಬಾಡಿಗೆಗೆ 25x30 ಅಳತೆ

ವಿಜಯನಗರ 2ನೇ ಹಂತ. (ಅಂಚೆ ಕಚೇರಿ ಹತ್ತಿರ) ... ಹತ್ತಿರ. ಮೈಸೂರು ಅಡ್ವಾನ್ಸ್ 85000/- ಬಾಡಿಗೆ 8500/- ಹಾಲ್, 2 ರೂಮ್, ಅಡಿಗೆಮನೆ, ಬಾತ್ ...

9880359541 / 9449782376

2 SITES FOR SALE

Vijayanagar 4th Stage attached Belawadi Road Bairava Badavane 40x60 South, MUDA APPROVED

Rate: Rs. 2750/- per Sqft.,

Contact: 7619512167

ಮನೆ ಬಾಡಿಗೆ / ಭೋಗ್ಯಕ್ಕೆ

ಶ್ರೀರಾಮಪುರ 2ನೇ ಹಂತ. BENL ಆರ್ಚ್ ಗೇಟ್ ಹತ್ತಿರ, ಎಲ್ಲಾ ಸೌಲಭ್ಯವಿರುವ 2 BHK ನೆಲ ಅಂತಸ್ತು ಹಾಗೂ ಮೊದಲನೆ ಮಹಡಿ ಮನೆ ಬಾಡಿಗೆಗೆ / ಭೋಗ್ಯಕ್ಕೆ ಲಭ್ಯವಿರುತ್ತದೆ.

ಸಂಪರ್ಕಿಸಿ: 7760968422

HOUSE FOR RENT

3 BHK
Belawatha Village, Near Pushpa Ashramam, Kesare, Mysuru

90359 76228, 73536 02406

ತಕ್ಷಣ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ ... 17,000ರಿಂದ 21,000 ... 11,000ರಿಂದ 17,000 ... ವಿದ್ಯಾರ್ಹತೆ: 9th SSLC, PUC, ESI, PF ...

9880116412 / 9060106867

AQUA GUARD WATER PURIFIER

REQUIRED Installation Technician

Salary: 15,000/- to 28,000/- All over Mysore. Contact:

9481134541 Purushotham

SITES FOR SALE

Near Udbur DHATRI MEADOWS

1) Site No. 4, S/F -1768 Sqft
2) Site No. 48, W/F -1605 Sqft
3) Site No. 52, SW/F -1968 Sqft

Price: Rs. 900/- per Sqft., Final

Contact No.: 7899871415

MUDA & RERA APPROVED SITES FOR SALE

30x40 40x60
Near SAHA MEADOWS @ Sapthamathruka Layout
E Khata & Bank Loan Available
Ready to Register, Price starts @ 2000/- Sqft., onwards

Contact: 7795609173

ಬೇಕಾಗಿದ್ದಾರೆ

ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.

Mob: 6364748485

ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ಸೆಮಿನಾರ್

ದಿನಾಂಕ:23–06–2025 11 ಗಂಟೆ ... PF, ESI ...

Lunch Arranged.

9845458130, 9380307633

WANTED TEACHERS

JNANAJYOTHI VIDYALAYA (English medium) WANTED

Mathematics-1 Social science-1, Hindi-1 D.ed B.A B.Sc B.ed.P.T teachers academic coordinator, office assistants wanted immediately.

9845390377, 8197057626

JOB OPPORTUNITY SEMINAR

For Retired Officials, VRS, Interested Housewives, Education: SSLC and Above, Any Degree
Place: Sharada Plantina, 1st Stage, Near Big Clock Tower, Mysuru-570001
Date: 23-06-2025, at 11 AM
Followed by Lunch

94490 68132, 70220 34200

MYSURU RETINA CARE STAFF REQUIRED

1. O.T. TECHNICIAN
2. OPTOMETRIST
3. RECEPTIONIST ANY DEGREE

#22A, SRI GURU KRUPAM, 1ST FLOOR, NEW KANTHARAJ URS ROAD, NIVEDITHA NAGAR, MYSORE, ABOVE SRI VEG HOTEL

7338369364

ತಕ್ಷಣ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ 50–55 ... SSLC ...

99642 63516, 81235 63128

SITE FOR SALE

Dimensions 50 x 72
RT Nagar Just next to Ring Road, Opp. to University Layout
Rs.3500/- Per Sq.Ft. (Slightly Negotiable)
Anybody interested please contact

Mamatha Sunil

96861 30350

ತಕ್ಷಣ ಬೇಕಾಗಿದ್ದಾರೆ

... ITI ... SSLC Pass only ...

63624 91336, 81056 51601

Automotive Axel Ltd. ... Kirloskar Company (SSLC ... ITI Pass Only) ... Age limit: 18-30 ... ESI, PF, Canteen, Rooms ...

70193 80847, 91483 35918

WANTED

Accountant and Office Work
Qualification : B.Com., BBM
Skills : M.S. Office and Tally
WhatsApp Your Resume :

72049 59799, 70903 99319

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್

ಸಂಪರ್ಕಿಸಿ:

8197383645
9008711654

ಸೈಟ್‌ಗಳು ಮಾರಾಟಕ್ಕಿವೆ

SKL ಪ್ರಾಪರ್ಟೀಸ್

ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ 30×40-30×50-40×60 ಮತ್ತು ಜೆಪಿ ನಗರ ರಿಂಗ್ ರಸ್ತೆ ಹತ್ತಿರ ಮತ್ತು 40×60. ಕುವೆಂಪು ನಗರದಲ್ಲಿ

9341624462

WANTED SALES BOYS

To work in a Sports Shop
Full Time: 10am to 7pm
Contact: 7760109047 / 8105368325
Addres: Mysore Sports Dewan's Road, Devaraja Mohalla, Mysore-570001

10000 ಅಡಿ ಖಾಲಿ ಜಾಗ ಬಾಡಿಗೆಗೆ ದೊರೆಯುತ್ತದೆ

ವಿಜಯನಗರ 2ನೇ ಹಂತ, ವಾಟರ್ ಟ್ಯಾಂಕ್ ಪಕ್ಕ ಬ್ರೋಕರ್ ಕ್ಷಮಿಸಿ.

94489 78383

ಬಾಡಿಗೆಗೆ ಬೇಕಾಗಿದೆ

YELLOW BOARD CAR (DIESEL OR CNG) ಬಾಡಿಗೆಗೆ ಬೇಕಾಗಿದೆ.
ತಿಂಗಳಿಗೆ ರೂ.10,000/– ಬಾಡಿಗೆ ನೀಡಲಾಗುವುದು ಮತ್ತು ಮೂರು ವರ್ಷ ಅಗ್ರಿಮೆಂಟ್ ಸಂಪರ್ಕಿಸಿ

99017 50264

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ

1. ... 2. ... Diploma In Mechanical Engineer ... 7795317178 ...

89512 41381

CHANGE OF NAME

I Asha Vinod w/o Vinod M Chacko residing at No.400 J, Siddique Nagar, Bannimantap B layout, Mysuru-570015 have changed my name from Asha Jose to Asha Vinod on my free will in front of Notary C.R. Seetharam on 19/6/2025 at Mysuru.

Sd/-Asha Vinod

ಹೊಸ ಮನೆ ಮಾರಾಟಕ್ಕಿದೆ

30 X 35 4 BHK
3 ಫ್ಲೋರ್ಸ್, ದಟ್ಟಗಳ್ಳಿ ಅವಿತ್ರ ಸರ್ಕಲ್ ಹತ್ತಿರ, ಮೈಸೂರು

7204401199
7795269272

ತಕ್ಷಣ ಬೇಕಾಗಿದ್ದಾರೆ

Highway Circle ಮತ್ತು ಬೋಗಾದಿಯ ಏರಿಯಾದಲ್ಲಿ ಕೆಲಸ ಮಾಡಲು Security Guard ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLCಮತ್ತು ಮೇಲ್ಪಟ್ಟು ಸಂಬಳ: 16500 + W/o

9880727819 / 9620667819

SITE FOR SALE

30x40, North Face, Site No. 86, Kuberanandasagar Phase 1, Direct Owner Rate Rs. 32 Lakhs

Contact: 9972399939

SITE FOR SALE

20x30 EAST FACE MUDA ALLOTTED Direct Owner Vijaynagar 4th stage 3rd phase.
Brokers Excuse

9972399939

ಬೇಕಾಗಿದ್ದಾರೆ

1.ಶಾಲಾ ಬಸ್ ಚಾಲಕರು. 2.ಕ್ಯಾಂಟೀನ್/ ಆಫೀಸ್ ಬಾಯ್ ಕೆಲಸಕ್ಕೆ ಹುಡುಗರು. 3. ಬಸ್ ಸಹಾಯಕ/ಮೇಡಂ ಕೆಲಸಕ್ಕೆ ಮಹಿಳೆಯರು. ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:

9964586817 / 9379399998

SITE FOR SALE

60x70 N/E Corner 4107 sqft., area, S/E corner 2200 sqft area Suvarna Nagar, Bogadi road

8050821108

ಬೇಕಾಗಿದ್ದಾರೆ

ಕಂಪ್ಯೂಟರ್ ಆಫೀಸ್‌ನಲ್ಲಿ ಕೆಲಸಕ್ಕೆ ITI/PUC/ SSLC ಮಾಡಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಕಡ್ಡಾಯ

ಸಂಪರ್ಕಿಸಿ: 8073393505

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

FOR SALE

1. 20x30 G+1, M Block, Kuvempunagar
2. 30x40 MUDA Approved Sites attached to KHB Kenchalgud, HD Kote Road
3. 27x60 & 30x45 Commercial present Old House @ Jayanagar
4. 30x40 Sites Near RT Nagar BSNL Layout @ Just 20 Lakhs
5. 80x78 Krishnamurthy Puram

PRAKRUTHI PROPERTIES
95386 90359, 90359 90359

BEAUTIFUL RIVERSIDE PLOTS AVAILABLE FOR SALE

on the banks of Kapila river. Serene Location. Just 28 Km from Mysore Ring Road. Minimum 10 Gunta Plots with Plantation. Clear Documentation. Ready for Registration.

9663761853 / 7353876555

SITE FOR SALE

30x40, 30x50 Available Ready for Registration

9663761853
7353876555

SK CONSTRUCTION

ಮನೆ ಕಟ್ಟಬೇಕೇ ಚಿಂತೆ ಬೇಡ
ನಿಮ್ಮ ಕನಸಿನ ಮನೆ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ
Plan-3-D-Elivation ಸಹಿತ ಕಟ್ಟಿಕೊಡುತ್ತೇವೆ.
All Engineering Service in one Roof

Mob: 9620528490

ಸೈಟು ಬೇಕಾಗಿದೆ

ಚಿಕ್ಕಹಳ್ಳಿ/ನಾಡನಹಳ್ಳಿ/ಮಹಾದೇವಪುರ/ಜೆಎಸ್‌ಎಸ್ 3ನೇ ಹಂತ, ಬಿಇಎಂಎಲ್ ಬಡಾವಣೆ/ನಿರ್ಮಾಣ್/ ಲಲಿತಾದ್ರಿನಗರ ಹಾಗೂ ನೋರೀನ್ ಲೇಔಟ್ ಅಕ್ಕಪಕ್ಕದ ಬಡಾವಣೆಗಳಲ್ಲಿ ... ರಸ್ತೆ/ಬನ್ನೂರು ರಸ್ತೆ

Mob: 9686071750

ತಕ್ಷಣ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ಸ್ 15000 12 ಘಂಟೆ ಪಾಳಿಗಾಗಿ
ಮೇಟಗಳ್ಳಿ, ಹಾಪ್‌ಕಾಮ್ಸ್, ಹೆಬ್ಬಾಳ್, ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ. ಸಂಪರ್ಕಿಸಿ:

9035367083 / 6361548626

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳು ರಿಂಗ್ ರೋಡ್ ನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಪುರುಷರು/ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 15,000/–

Mob: 9902754149

WANTED

1. Supervisor-DME 5yrs exp in Engineering Industries in production
2. VMC Operators
3. Accounts Assistant (Male)
4. Office Assistant (Male)

Phone/WhatsApp 9341620987

HOUSE FOR SALE

20/30 2BHK House For Sale Near Police Layout T Narsipura Road Mysore

SITE FOR SALE

30/40 MUDA Site For Sale Near Dattagali Christ Public School Mysore

PH: 9900464111

ಶುಂಠಿ ಕೃಷಿಕರೆ

ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.

ಶ್ರೀ ಕಾಮಾಕ್ಷಿ ಬಯೋ–ನೀಮ್
#203, ಬನ್ನಿಮಂಟಪ, ಮೈಸೂರು–570 015

Mob: 80888-87802

ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ಸೆಮಿನಾರ್

ದಿನಾಂಕ 23–06–2025, ಬೆಳಿಗ್ಗೆ 11 ಗಂಟೆಗೆ ... VRS ...

Lunch Arranged

73490 52084, 96328 73950

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಬಾಧ್ಯಸ್ಥರಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ

ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ನಗರಪಾಲಿಕೆಯ 219 ಪೌರಕಾರ್ಮಿಕರಿಗೆ ಖಾಯಂ ನೇಮಕಾತಿ ಆದೇಶ ಪತ್ರ ವಿತರಣೆ

● ಮೈಸೂರು ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿತರಣೆ ● ರಾಜ್ಯದಲ್ಲಿರುವ 32 ಸಾವಿರದಲ್ಲಿ 22 ಸಾವಿರ ಪೌರಕಾರ್ಮಿಕರು ಖಾಯಂ ● ದೇಶದಲ್ಲೇ ಪೌರಕಾರ್ಮಿಕರ ಖಾಯಂಗೊಳಿಸಿದ ಹೆಗ್ಗಳಿಕೆ ಕರ್ನಾಟಕದ್ದು


ಮೈಸೂರು, ಜೂ.20(ಎಂಕೆ)– ಮೈಸೂರು ಮಹಾನಗರಪಾಲಿಕೆಯ 219 ಮಂದಿ ಪೌರ ಕಾರ್ಮಿಕರಿಗೆ ಖಾಯಂ ನೇಮಕಾತಿ ಆದೇಶ ಪತ್ರವನ್ನು ಶುಕ್ರವಾರ ವಿತರಿಸಲಾಯಿತು.

ಕರ್ನಾಟಕ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಜಿಲ್ಲಾಡಳಿತ ಹಾಗೂ ಮೈಸೂರು ಮಹಾನಗರಪಾಲಿಕೆ ವತಿಯಿಂದ ಆಯೋಜಿಸಿದ್ದ ಖಾಯಂ ನೇಮಕಾತಿ ಆದೇಶ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪೌರಕಾರ್ಮಿಕರಿಗೆ ಖಾಯಂ ನೇಮಕಾತಿ ಆದೇಶ ಪತ್ರ ನೀಡಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಪ್ರತೀ ವರ್ಷ ದಸರಾ ಬಂದಾಗಲೆಲ್ಲಾ ಪೌರ ಕಾರ್ಮಿಕರು ನಮ್ಮ ಬೇಡಿಕೆ ಈಡೇರಲಿಲ್ಲ. ಖಾಯಂ ಆಗಲಿಲ್ಲ ಎಂದು ಧರಣಿ ಮಾಡುತ್ತೇವೆ ಎಂದೇಳಿ, ಕೊನೆಗೆ ಧರಣಿ ಮಾಡದೆ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಮೈಸೂರಿಗೆ ಸ್ವಚ್ಛ ನಗರಿ ಎಂದು ಹೆಸರು ಬರಲು ಪೌರ ಕಾರ್ಮಿಕರ ಕೊಡುಗೆ ಅಪಾರವಾಗಿದೆ. ಇಡೀ ದೇಶದಲ್ಲಿಯೇ ಪೌರಕಾರ್ಮಿಕರನ್ನು ಸರ್ಕಾರದ ಖಾಯಂ ನೌಕರರನ್ನಾಗಿ ಮಾಡಿದ ಏಕೈಕ ರಾಜ್ಯ ಕರ್ನಾಟಕವಾಗಿದ್ದು, ರಾಜ್ಯದಲ್ಲಿರುವ ಸುಮಾರು 32 ಸಾವಿರ ಪೌರ ಕಾರ್ಮಿಕರಲ್ಲಿ 10 ಸಾವಿರ ಬಿಟ್ಟು ಉಳಿದೆಲ್ಲಾ ಪೌರಕಾರ್ಮಿಕರು ಖಾಯಂ ನೌಕರರನ್ನಾಗಿ ಆದೇಶ ಮಾಡಲಾಗಿದೆ ಎಂದರು.

ಪೌರಕಾರ್ಮಿಕರು ಸರ್ಕಾರಿ ನೌಕರರಾಗಿರುವುದೇ ಸಂತೋಷ. ಯಾರದೋ ಕೈಕೆಳಗೆ ಕೆಲಸ ಮಾಡುವಾಗ ನಿಮಗೆ ಕಾಲುಭಾಗ, ಅವರು(ಗುತ್ತಿಗೆದಾರರು) ಮುಕ್ಕಾಲು ಭಾಗ ಹೊಡೆಯುತ್ತಿದ್ದರು. ಈ ಪದ್ಧತಿ(ಗುತ್ತಿಗೆ ಪದ್ಧತಿ) ನಿಲ್ಲಬೇಕು ಎಂದೇಳಿ 1994 ರಿಂದಲೂ ಹೋರಾಟ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ ಸುಮಾರು 32 ಸಾವಿರ ಪೌರಕಾರ್ಮಿಕರಿದ್ದಾರೆ. 7–8 ಸಾವಿರ ಸಫಾಯಿ ಕರ್ಮಚಾರಿ ಕಾರ್ಮಿಕರಿದ್ದಾರೆ. ಇವರೆಲ್ಲರಿಗೂ ಗುತ್ತಿಗೆ ಪದ್ಧತಿ ನಿಲ್ಲಬೇಕು. ನೇರವಾಗಿ ಚೆಕ್ ಮೂಲಕ ಹಣ ಸಂದಾಯ ಮಾಡಬೇಕು ಎಂಬ ಬೇಡಿಕೆಯನ್ನು ಸಿದ್ದರಾಮಯ್ಯ ಅವರು ಹಣಕಾಸು ಮಂತ್ರಿಯಾಗಿದ್ದಾಗ ಮಾಡಲಾಯಿತು. ಸರ್ಕಾರಿ ನೌಕರರಾದ ತಕ್ಷಣವೇ ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಬಗೆಯ ಸೌಲಭ್ಯಗಳು ಲಭ್ಯವಾಗಲಿವೆ ಎಂದು ತಿಳಿಸಿದರು.

ಅಂಬೇಡ್ಕರ್‌ಗೆ ಸಂತೋಷ: ಸರ್ಕಾರಿ ನೌಕರರಾಗಿರುವ ಪೌರಕಾರ್ಮಿಕರಿಗೆ 2.5 ಲಕ್ಷ ರೂ. ಆರೋಗ್ಯ ವಿಮೆ, 10 ಲಕ್ಷ ರೂ.ಅಪಘಾತ ವಿಮೆ ಜೊತೆಗೆ ಸುಮಾರು 28 ಕೋಟಿ ರೂ.ವೆಚ್ಚದಲ್ಲಿ 150 ಮನೆಗಳನ್ನು ಕಟ್ಟಿಕೊಡಲಾಗುತ್ತಿದೆ. ಪ್ರತೀ ಮನೆಯೂ 21 ಲಕ್ಷ ರೂ. ಬಾಳಲಿದ್ದು, 21 ಲಕ್ಷದ ಮನೆಗೆ ಪೌರಕಾರ್ಮಿಕರು ಮಾಲೀಕರಾಗಿದ್ದಾರೆ ಎಂದರೆ ಅಂಬೇಡ್ಕರ್ ಎಷ್ಟು ಸಂತೋಷ ಪಡುತ್ತಾರೆ. ಸರ್ಕಾರದ ನೌಕರರಾಗಿ ಆರ್ಡರ್ ತೆಗೆದುಕೊಂಡಿರುವ ನೀವೆಲ್ಲರೂ ಸರ್ಕಾರದ ಎಲ್ಲಾ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.



ಮೈಸೂರು ಮಹಾನಗರಪಾಲಿಕೆಯ 219 ಮಂದಿ ಪೌರಕಾರ್ಮಿಕರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಖಾಯಂ ನೇಮಕಾತಿ ಆದೇಶ ಪತ್ರ ವಿತರಿಸಿದರು. ಶಾಸಕ ತನ್ವೀರ್ ಸೇಠ್, ಮಾಜಿ ಮೇಯರ್ ನಾರಾಯಣ್, ಪ್ರಾದೇಶಿಕ ಆಯುಕ್ತ ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ್ ರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರಿದ್ದರು.

ಪೌರಕಾರ್ಮಿಕರು ತ್ಯಾಗಜೀವಿಗಳು... ನೀವು ಸದಾ ನಗ್ತಾ, ನೆಮ್ಮದಿಯಾಗಿರಬೇಕು...!

ಪೌರಕಾರ್ಮಿಕರು ಎಲ್ಲರ ಮನೆಯ ಗಲೀಜು ತೊಳೆದು, ಕಸವನೆಲ್ಲಾ ಕ್ಲೀನ್ ಮಾಡಿ, ತಾನು ಗಲೀಜಾಗಿದ್ದರೂ ಬೇರೆಯವರ ಸ್ಥಳವನ್ನು ಕ್ಲೀನ್ ಮಾಡುವ ತ್ಯಾಗಜೀವಿಗಳು. ಕಟ್ಟ ಕಡೆಯ ಮನುಷ್ಯನಿಗೆ ಮೊಟ್ಟಮೊದಲ ಆದ್ಯತೆ ನೀಡುವುದೇ ಸಂವಿಧಾನದ ಆಶಯವಾಗಿದ್ದು, ಪೌರಕಾರ್ಮಿಕರು ಸಣ್ಣ–ಪುಟ್ಟ ವಿಚಾರಗಳಿಗೆ ಗುಂಪು ಕಟ್ಟಿಕೊಂಡು ತಲೆ ಕೆಡಿಸಿಕೊಳ್ಳದೇ ಒಗ್ಗಟ್ಟಾಗಿ ಹೋಗಿ, ಒಗ್ಗಟ್ಟಾಗಿರಿ... ಚೆನ್ನಾಗಿರಿ... ಸರ್ಕಾರದಿಂದ ಏನು ಸವಲತ್ತು ಬೇಕೋ ಅದೆಲ್ಲವನ್ನೂ ಒದಗಿಸುತ್ತೇವೆ. ನೆಮ್ಮದಿ ಕೆಡಿಸಿಕೊಂಡು ಹಾಳಾಗಬೇಡಿ. ತಂತ್ರಜ್ಞಾನ ಬೆಳೆದಂತೆ ಯಂತ್ರಗಳೇ ಕ್ಲೀನ್ ಮಾಡುವ ದಿನಗಳು ಬರಲಿದ್ದು, ನಿಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ, ವಿದ್ಯಾವಂತರನ್ನಾಗಿಸಿ.

- **ಡಾ.ಹೆಚ್.ಸಿ.ಮಹದೇವಪ್ಪ,** ಜಿಲ್ಲಾ ಉಸ್ತುವಾರಿ ಸಚಿವ

ನಿಮ್ಮ ಕನಸನ್ನು ನನಸಾಗಿದೆ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್ ಅವರು ಮಾತನಾಡಿ, ನಿಮ್ಮ (ಪೌರಕಾರ್ಮಿಕರ) ಪ್ರಯತ್ನಕ್ಕೆ ಜಯ ಸಿಕ್ಕಿರುವುದಕ್ಕೆ ಅಭಿನಂದನೆಗಳು. ಇಡೀ ರಾಷ್ಟ್ರದಲ್ಲಿ ಲಕ್ಷಾಂತರ ಪೌರ ಕಾರ್ಮಿಕರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟು, ನಿಮ್ಮ ಕನಸನ್ನು ನನಸಾಗಿದೆ ಎಂದು ಹೇಳಿದರು.

ಸರ್ಕಾರಿ ಸಂಸ್ಥೆಗಳಲ್ಲಿ ಪೌರಕಾರ್ಮಿಕರ ಗುತ್ತಿಗೆ ಪದ್ಧತಿ ಇರಬಾರದು ಎಂದು ನಿರ್ಧರಿಸಿದ್ದರೂ ಸಾಕಾರವಾಗಿಲ್ಲ ನಂತರ ನಡೆದ ಹೋರಾಟವನ್ನು ಅರ್ಥ ಮಾಡಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಿಟ್ಟ ತೀರ್ಮಾನಕ್ಕೆ ಬಂದು ನಿಮ್ಮನ್ನು ಖಾಯಂ ಮಾಡಿದ್ದಾರೆ. ಖಾಯಂ ಮಾಡುವುದಷ್ಟೇ ಅಲ್ಲದೆ, ಇನ್ಸೂರೆನ್ಸ್ ಕೂಡ ಮಾಡಲಾಗಿದೆ. ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಜನಸಂಖ್ಯೆ ಒಳಗೊಂಡಿದ್ದು, ಸ್ವಚ್ಛತೆ ಕಾಪಾಡಿಕೊಳ್ಳಬೇಕಿದೆ. ಮೈಸೂರನ್ನು ಮೂರು ಬಾರೀ ಸ್ವಚ್ಛ ನಗರಿಯನ್ನಾಗಿಸಿದ ಶ್ರೇಯಸ್ಸು ಪೌರಕಾರ್ಮಿಕರಿಗೆ ಸಲ್ಲಬೇಕು ಎಂದು ತಿಳಿಸಿದರು.

ಚಕ್ಕರ್ ಹೊಡೆಯಬೇಡಿ... ಸ್ವಚ್ಛತೆಗೆ ಕೈ ಜೋಡಿಸಿ...!

ಸರ್ಕಾರಿ ನೌಕರರಾಗಿ ಖಾಯಂ ಆದ ಮೇಲೆ ನಿಮ್ಮ ಮೇಲಿನ ಜವಾಬ್ದಾರಿ ಇನ್ನೂ ಹೆಚ್ಚಾಗಿದೆ. ತಿಂಗಳಿಗೆ ಸರ್ಕಾರಿ ಸಂಬಳ ಬರುತ್ತೇ ಎಂದು ಚಕ್ಕರ್ ಹೊಡೆಯ ಬಾರದು. ಮೈಸೂರಿನ ಸ್ವಚ್ಛತೆಗೆ ಕೈ ಜೋಡಿಸಿ. ನಿಮ್ಮ ಹಿಂದೆ ಬರುವಂತಹ ಪೌರಕಾರ್ಮಿಕರಿಗೆ ಮಾರ್ಗದರ್ಶನ ನೀಡಿ.

- **ತನ್ವೀರ್ ಸೇಠ್,** ಶಾಸಕ

ಕರ್ನಾಟಕದಲ್ಲಿ ಮಾತ್ರವೇ ಖಾಯಂ: ಮಾಜಿ ಮೇಯರ್ ನಾರಾಯಣ್ ಮಾತನಾಡಿ, ದೇಶದ ಯಾವುದೇ ರಾಜ್ಯದಲ್ಲಿಯೂ ಪೌರಕಾರ್ಮಿಕರ ಖಾಯಂಗೊಳಿಸುವಿಕೆ ಆಗಿಲ್ಲ. ಎಷ್ಟೋ ಕಡೆಗಳಲ್ಲಿ ಗುತ್ತಿಗೆ ಪದ್ಧತಿಯಲ್ಲೇ ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ. ಆದರೆ, ಕರ್ನಾಟಕ ಸರ್ಕಾರ ಪೌರಕಾರ್ಮಿಕರನ್ನು ಖಾಯಂ ಮಾಡಿದೆ ಎಲ್ಲಾ ಪೌರ ಕಾರ್ಮಿಕರು ಇದನ್ನು ಸದುಪಯೋಗಪಡಿಸಿಕೊಂಡು ನಿಮ್ಮ ಮಕ್ಕಳಿಗೂ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ತಮ್ಮ ಜವಾಬ್ದಾರಿ ನಿರ್ವಹಿಸಿ ಎಂದು ಕಿವಿಮಾತು ಹೇಳಿದರು. ಇದೇ ಹೆಲ್ತ್ ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು. ಪ್ರಾದೇಶಿಕ ಆಯುಕ್ತ ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ್ ರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಪೌರ ಕಾರ್ಮಿಕ ಸಂಘಟನೆ ಮುಖಂಡರಾದ ಮಾರ, ಶಿವಣ್ಣ ಶ್ರೀನಿವಾಸ್ ಮತ್ತಿತರರಿದ್ದರು.

ಇಂದು ಮಾಜಿ ಸಂಸದ ಪ್ರತಾಪ್ ಸಿಂಹ ಹುಟ್ಟುಹಬ್ಬ; ವಿವಿಧ ಜನಪರ ಕಾರ್ಯಕ್ರಮ



ಮೈಸೂರು, ಜೂ.20– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗದ ವತಿಯಿಂದ ಜೂ.21 ರಂದು ವಿವಿಧ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 6:30ಕ್ಕೆ ಡಾ.ರಾಜ್ ಉದ್ಯಾನವನದ ಎದುರು ಸಾರ್ವಜನಿಕರಿಗೆ ಆಯುರ್ವೇದ ಗಿಡಗಳ ವಿತರಣೆ, ಬೆಳಗ್ಗೆ 9 ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರದ ಆವರಣದಲ್ಲಿ ರಕ್ತದಾನ ಶಿಬಿರ, ಬೆಳಗ್ಗೆ 11 ಗಂಟೆಗೆ ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬಿಟಿಎಲ್ ವಿದ್ಯಾವಾಹಿನಿ ಶಾಲೆ; ಪಿಯು ಕಾಲೇಜಿನ ಸಂಸ್ಥಾಪಕರ ದಿನಾಚರಣೆ



ಮೈಸೂರಿನ ಬಿಟಿಎಲ್ ವಿದ್ಯಾವಾಹಿನಿ ಶಾಲೆ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಂಸ್ಥಾಪಕರ ದಿನಾಚರಣೆಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95ರಷ್ಟು ಅಂಕ ಪಡೆದಿರುವ ಎಂ.ಕೆ.ಸಹನಾಳನ್ನು ಅಭಿನಂದಿಸಲಾಯಿತು. ದೈಹಿಕ ಶಿಕ್ಷಕ ಸನತ್‌ಕುಮಾರ್, ಹಣಕಾಸು ನಿರ್ವಾಹಕಿ ಪ್ರೊ.ಸಿ.ಬಿ.ರಾಜೇಶ್ವರಿ, ಸಂಸ್ಥೆಯ ಅಧ್ಯಕ್ಷೆ ಕುಮಾರಿ ಅಪೂರ್ವ ಲಕ್ಷ್ಮಣ್, ಮುಖ್ಯಶಿಕ್ಷಕರಾದ ಸುಬಹತ್ ಸುಲ್ತಾನಾ, ಚೇತನ ಕುಮಾರ್, ಪ್ರಾಂಶುಪಾಲ ಜಿ.ಗುರುಪ್ರಸಾದ್ ಚಿತ್ರದಲ್ಲಿದ್ದಾರೆ.

ಮೈಸೂರು, ಜೂ.20– ಮೈಸೂರಿನ ಕೆಸರೆಯಲ್ಲಿರುವ ಬಿಟಿಎಲ್ ವಿದ್ಯಾವಾಹಿನಿ ಶಾಲೆ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಸಂಸ್ಥಾಪಕರ ದಿನವನ್ನು ಇತ್ತೀಚೆಗೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಪೀಡಿಯಾಟ್ರಿಕ್ ಆಂಕಾಲಜಿಸ್ಟ್ ಡಾ.ಸೌಮ್ಯ ಯಶವಂತ್ ಮಾತನಾಡಿ, ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಬಂಧಗಳ ಮೌಲ್ಯ, ಸಾಮಾಜಿಕ ಕಾಳಜಿ, ಆರೋಗ್ಯ ಜಾಗ್ರತೆ ಬಗ್ಗೆ ತಿಳಿಸಿಕೊಟ್ಟರು.

ಇದೇ ವೇಳೆ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಸಂಸ್ಥಾಪಕರ ದಿನದ ಅಂಗವಾಗಿ ಪ್ರಬಂಧ ಸ್ಪರ್ಧೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷೆ ಕುಮಾರಿ ಅಪೂರ್ವ ಲಕ್ಷ್ಮಣ್, ಹಣಕಾಸು ನಿರ್ವಾಹಕಿ ಪ್ರೊ.ಸಿ.ಬಿ.ರಾಜೇಶ್ವರಿ, ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಜಿ.ಗುರುಪ್ರಸಾದ್, ಪ್ರೌಢಶಾಲೆ ಮುಖ್ಯಶಿಕ್ಷಕ ಎಂ.ಚೇತನ್‌ಕುಮಾರ್, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕಿ ಸುಬಹತ್ ಸುಲ್ತಾನಾ, ದೈಹಿಕ ಶಿಕ್ಷಕ ಸನತ್‌ಕುಮಾರ್ ಸೇರಿದಂತೆ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಿಟಿಎಲ್ ಎಜ್ಯುಕೇಶನಲ್ ಟ್ರಸ್ಟ್ ಫಾರ್ ರೂರಲ್ ಡೆವೆಲಪ್‌ಮೆಂಟ್(ಬೆಂಗಳೂರು) ಹಾಗೂ ಬಿಟಿಎಲ್ ಫೌಂಡೇಶನ್ ಫಾರ್ ಇಂಟರ್‌ನ್ಯಾಶನಲ್ ಸರ್ವೀಸ್(ಡೆಲವೆರ್, ಯುಎಸ್‌ಎ) ಸ್ಥಾಪನೆಯೊಂದಿಗೆ ಶಿಕ್ಷಣದ ಮೂಲಕ ಗ್ರಾಮೀಣ ಮತ್ತು ಹಿಂದುಳಿದ ಸಮುದಾಯಗಳ ಉನ್ನತಿಗಾಗಿ ತಮ್ಮ ಜೀವನದುದ್ದಕ್ಕೂ ಶ್ರಮಿಸಿದ ಬಿ.ಟಿ.ಲಕ್ಷ್ಮಣ್ ಅವರ ಜನ್ಮದಿನ(ಜೂ.8)ವನ್ನು ಪ್ರತಿ ವರ್ಷ ಸಂಸ್ಥಾಪಕರ ದಿನವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

ಸಚಿವ ರಾಜಣ್ಣರಿಗೆ ಅಭಿನಂದನೆ...



ತುಮಕೂರಿನಲ್ಲಿ ನಡೆಯುವ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ 75ನೇ ವರ್ಷದ ಅಮೃತ ಮಹೋತ್ಸವ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭದ ಮುನ್ನ ದಿನ ಕೆ.ಎನ್.ರಾಜಣ್ಣ ಅವರಿಗೆ ಶ್ರೀ ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್‌ನ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಶ್ರೀನಿವಾಸ, ಅಹಿಂದ ಒಕ್ಕೂಟಗಳ ರಾಜ್ಯ ಅಧ್ಯಕ್ಷ ದ್ಯಾವಪ್ಪ ನಾಯಕ, ಪ್ರಭಾಕರ್, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ರೈಲಿನಿಂದ ಆಯ ತಪ್ಪಿ ಬಿದ್ದು ವ್ಯಕ್ತಿ ಸಾವು

ಮೈಸೂರು, ಜೂ.20(ಆರ್‌ಕೆ)–ಚಲಿಸುತ್ತಿದ್ದ ರೈಲಿನಿಂದ ಆಯ ತಪ್ಪಿ ಬಿದ್ದು ವ್ಯಕ್ತಿ ಸಾವನ್ನಪ್ಪಿರುವ ಘಟನೆ ಗುರುವಾರ ಮುಂಜಾನೆ ಮೈಸೂರು ತಾಲೂಕು, ನಾಗನಹಳ್ಳಿ ಸಮೀಪ ಸಂಭವಿಸಿದೆ. ಬೆಂಗಳೂರಿನ ಬಸವನ ಗುಡಿ ನಿವಾಸಿ ಪ್ರಸನ್ನ (63) ಸಾವನ್ನಪ್ಪಿದವರು. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಕಾರ್ಯಕ್ರಮಗಳಿಗೆ ಸಮನ್ವಯ ಸಾಧಿಸುತ್ತಿದ್ದ ಅವರು, ಕುಕ್ಕೆ ಸುಬ್ರಹ್ಮಣ್ಯದಿಂದ ಮೈಸೂರು ಮಾರ್ಗವಾಗಿ ಬೆಂಗಳೂರಿಗೆ ತೆರಳುತ್ತಿದ್ದ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು.

ಗುರುವಾರ ಬೆಳಿಗ್ಗೆ 4.25 ಗಂಟೆಗೆ ಮೈಸೂರಿಗೆ ಬಂದು ನಿಲ್ದಾಣದಿಂದ ಹೊರಟು ನಾಗನಹಳ್ಳಿ ಸಮೀಪ ಚಲಿಸುತ್ತಿದ್ದಾಗ ಶೌಚಾಲಯದ ಬಳಿ ಮೂತ್ರ ವಿಸರ್ಜನೆಗೆಂದು ಬಂದ ಪ್ರಸನ್ನ, ತಿರುವಿನಲ್ಲಿ ಆಯತಪ್ಪಿ ಮುಂಜಾನೆ ಸುಮಾರು 4.30 ಗಂಟೆ ವೇಳೆ ಕೆಳಗೆ ಬಿದ್ದರು. ತಲೆಗೆ ತೀವ್ರ ಗಾಯಗಳಾಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದರು ಎಂದು ಪ್ರಕರಣ ದಾಖಲಿಸಿಕೊಂಡಿರುವ ಮೈಸೂರು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಮೈಸೂರಲ್ಲಿ ನಾಳೆಯಿಂದ 2 ದಿನ ನೀರು ಪೂರೈಕೆ ವ್ಯತ್ಯಯ

ಮೈಸೂರು, ಜೂ.20–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಂತದ ಬೂಸ್ಟರ್ ಯಂತ್ರಾಗಾರಕ್ಕೆ ಮತ್ತು ಬೆಳಗೊಳ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಮೇಟಗಳ್ಳಿ 66/11 ಕೆ.ವಿ. ಸಬ್ ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್‌ನಿಂದ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಕೈಗೊಂಡಿರುವ ಕಾರಣ ಜೂ.22 ಮತ್ತು 23ರಂದು ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ.

ಹೆಚ್‌ಎಲ್‌ಆರ್ ಆಶ್ರಿತ ಪ್ರದೇಶಗಳು: ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಪುಲಿಕೇಶಿ ರಸ್ತೆ, ಮಂಡಿ ಮೊಹಲ್ಲಾ, ವೀರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್ ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಲಷ್ಕರ್ ಮೊಹಲ್ಲಾ ಭಾಗಶಃ, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ಲೂರ್ದ್‌ನಗರ, ಮೀನಾಬಜಾರ್, ವಾರ್ಡ್ ಸಂಖ್ಯೆ: 8, 17, 18, 19, 23 ರಿಂದ 27ರವರೆಗೆ, 40, 41, 55, 60, 61, 62 ಹಾಗೂ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶಗಳಲ್ಲಿ ನೀರು ಪೂರೈಕೆ ವ್ಯತ್ಯಯವಾಗಲಿದೆ.

ಸಿ.ಎಂ.ಶಂಕರಪ್ಪ ನಿಧನ



ಮೈಸೂರು, ಜೂ.20– ಮೈಸೂರಿನ ಸಿದ್ಧಾರ್ಥನಗರ ಅಹಿಂಸಾ ಮಾರ್ಗದ ನಿವಾಸಿ, ಕೆಇಬಿ ನಿವೃತ್ತ ಅಧಿಕಾರಿ ಸಿ.ಎಂ.ಶಂಕರಪ್ಪ(82) ಶುಕ್ರವಾರ ಸಂಜೆ ನಿಧನರಾದರು. ಇವರು ಪತ್ನಿ ಕಾತ್ಯಾಯಿನಿ, ಪುತ್ರರಾದ ಹರ್ಷ, ಸಂತೋಷ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ ಸ್ವಗ್ರಾಮವಾದ ಕೆಆರ್.ನಗರ ತಾಲೂಕು ಚನ್ನಂಗೆರೆಯಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಬಿ. ಮಹಾದೇವಪ್ಪ



ಮೈಸೂರು, ಜೂ. 20– ಮೈಸೂರಿನ ಜೆಎಸ್‌ಎಸ್ ಪ್ರೌಢಶಾಲೆ ನಿವೃತ್ತ ಶಿಕ್ಷಕ, ವಿವೇಕಾನಂದನಗರ ನಿವಾಸಿ ಎಸ್.ಬಿ. ಮಹಾದೇವಪ್ಪ(88)ನವರು ಜೂನ್ 15ರಂದು ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಮತ್ತು ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೌಡಿ ಪಟ್ಟಿಯಿಂದ ಹೆಸರು ತೆಗೆಯದಂತೆ ಸಿದ್ದರಾಮಯ್ಯ ಮೌಖಿಕ ಆದೇಶ ಆರೋಪ

ಪೊಲೀಸ್ ದೂರು ಪ್ರಾಧಿಕಾರದ ಅಧ್ಯಕ್ಷರಿಗೆ ಸ್ನೇಹಮಯಿ ಕೃಷ್ಣ ದೂರು



ಮೈಸೂರು, ಜೂ.20(ಬಿಎಲ್‌ಯು)– ರೌಡಿ ಪಟ್ಟಿಯಿಂದ ನನ್ನ ಹೆಸರು ತೆಗೆಯುವಂತೆ ಕರ್ನಾಟಕ ರಾಜ್ಯ ಪೊಲೀಸ್ ದೂರು ಪ್ರಾಧಿಕಾರ ಆದೇಶ ನೀಡಿದ್ದರೂ ಅದನ್ನು ಪಾಲಿಸಿಲ್ಲ ಎಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೇರಿದಂತೆ ಇತರೆ ಅಧಿಕಾರಿಗಳ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ ದೂರು ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆದು ದೂರಿದ್ದಾರೆ.

ಮುಡಾ ಹಗರಣದ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ನಾನು ಲೋಕಾಯುಕ್ತದಲ್ಲಿ ಕಾನೂನು ಹೋರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ಮೌಖಿಕ ಆದೇಶದ ಮೇರೆಗೆ ನಿಮ್ಮ ಆದೇಶ ಪಾಲಿಸಿಲ್ಲ ಎಂದು ಆರೋಪಿಸಿದ್ದಾರೆ.

ಮೈಸೂರು ನಗರದ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಕಾನೂನು ಬಾಹಿರವಾಗಿ ನನ್ನ ಹೆಸರನ್ನು ರೌಡಿ ಪಟ್ಟಿಯಲ್ಲಿ ಸೇರಿಸಿದ್ದಾರೆ. ಈ ಬಗ್ಗೆ ನಾನು ನೀಡಿದ ದೂರಿನ ಬಗ್ಗೆ ವಿಚಾರಣೆ ನಡೆಸಿ ರೌಡಿ ಪಟ್ಟಿಯಲ್ಲಿರುವ ನನ್ನ ಹೆಸರು ತೆಗೆಯುವಂತೆ ಡಿಸೆಂಬರ್ 20, 2024 ರಂದು ಆದೇಶ ನೀಡಿದ್ದೀರಾ.

ಈ ಸಂಬಂಧ ಫೆಬ್ರವರಿ 4, 2025 ರಂದು ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ನಿಮ್ಮ ಕಚೇರಿಯವರು ಪತ್ರ ಕೂಡ ಬರೆದಿದ್ದಾರೆ. ಅಲ್ಲದೆ ಫೆಬ್ರವರಿ 6 ರಂದು ನಿಮ್ಮ ಆದೇಶದ ಬಗ್ಗೆ ತಿಳಿಸಿ ರೌಡಿ ಪಟ್ಟಿಯಿಂದ ನನ್ನ ಹೆಸರು ತೆಗೆಯುವಂತೆ ಸೀಮಾ ಲಾಟ್ಕರ್ ಅವರಿಗೆ ಮನವಿ ಪತ್ರ ಸಲ್ಲಿಸಿದ್ದೆ ಎಂದಿದ್ದಾರೆ.

ಆದರೆ ಸುಮಾರು ನಾಲ್ಕೂವರೆ ತಿಂಗಳಿನಿಂದ ರೌಡಿ ಪಟ್ಟಿಯಿಂದ ನನ್ನ ಹೆಸರು ತೆಗೆದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೌಖಿಕ ಆದೇಶದ ಮೇರೆಗೆ ಪೊಲೀಸ್ ರೌಡಿ ಪಟ್ಟಿಯಿಂದ ನನ್ನ ಹೆಸರು ತೆಗೆದಿಲ್ಲ. ಈ ಮೂಲಕ ನಿಮ್ಮ ಲಿಖಿತ ಆದೇಶ ಪಾಲನೆ ಮಾಡಿಲ್ಲ ಎಂದು ದೂರಿದ್ದಾರೆ.

ಈ ಹಿನ್ನೆಲೆ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಮುತ್ತುರಾಜ್, ಎಸಿಪಿ ರಮೇಶ್, ಇನ್ಸ್ ಪೆಕ್ಟರ್ ಧನರಾಜ್, ಸಬ್ ಇನ್ಸ್ ಪೆಕ್ಟರ್ ಹರೀಶ್ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸ್ನೇಹಮಯಿ ಕೃಷ್ಣ ಅವರು ಕರ್ನಾಟಕ ರಾಜ್ಯ ಪೊಲೀಸ್ ದೂರು ಪ್ರಾಧಿಕಾರದ ಅಧ್ಯಕ್ಷರಿಗೆ ಮನವಿ ಸಲ್ಲಿಸಿದ್ದಾರೆ.

ಅಪಾಯಕಾರಿ ಮರಗಳು, ಕೊಂಬೆಗಳ ತೆರವುಗೊಳಿಸಿ



ಬೆಂಗಳೂರು, ಜೂ.20– ಮಳೆಗಾಲದಲ್ಲಿ ಅಪಾಯಕಾರಿ ಮರಗಳು ಮತ್ತು ಕೊಂಬೆಗಳನ್ನು ಗುರುತಿಸಿ, ಅವುಗಳನ್ನು ತೆರವುಗೊಳಿಸಿ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಶುಕ್ರವಾರ ಅರಣ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಮರಗಳನ್ನು ರಕ್ಷಿಸುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಸಚಿವರು, ಇತ್ತೀಚೆಗೆ ಮರದ ಕೊಂಬೆ ಬಿದ್ದು 29 ವರ್ಷದ ಅಕ್ಷಯ್ ಸಾವಿಗೀಡಾಗಿದ್ದಕ್ಕೆ ದುಃಖ ವ್ಯಕ್ತಪಡಿಸಿದರು. ಮಳೆ ಮತ್ತು ಬಲವಾದ ಗಾಳಿ ಬೀಸುವ ಸಮಯದಲ್ಲಿ ಎತ್ತರದ ಅಥವಾ ಆಳವಾಗಿ ಬೇರೂರಿರದ ಮರಗಳು ಬೀಳುತ್ತವೆ. ಇದಕ್ಕೆ ಮುಖ್ಯ ಕಾರಣವೆಂದರೆ, ಕಾಂಕ್ರೀಟ್, ಕಲ್ಲಿನ ಚಪ್ಪಡಿಗಳು ಮತ್ತು ಬೇರುಗಳ ಸುತ್ತಲೂ ಹಾಕಲಾದ ಹೆಂಚುಗಳು, ನೀರು ನೆಲಕ್ಕೆ ಇಳಿಯುವುದನ್ನು ತಡೆಯುವುದು ಎಂದು ತಜ್ಞರನ್ನು ಉಲ್ಲೇಖಿಸಿ ಹೇಳಿದರು.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಕೂಡ ಈ ನಿಟ್ಟಿನಲ್ಲಿ ಆದೇಶ ಹೊರಡಿಸಿದೆ ಮತ್ತು ರಾಜ್ಯ ಸರ್ಕಾರ ಈಗಾಗಲೇ ಅಧಿಕೃತ ಆದೇಶವನ್ನು ಬಿಡುಗಡೆ ಮಾಡಿದೆ. ಗುರುವಾರ ಬಿಬಿಎಂಪಿ ವಿಶೇಷ ಆಯುಕ್ತರು ಮರಗಳ ಸುತ್ತಲಿನ ಕಾಂಕ್ರೀಟ್ ತೆಗೆಯಲು ಆದೇಶಿಸಿದ್ದಾರೆ. ಇನ್ನು ಮುಂದೆ ರಸ್ತೆಬದಿಗಳಲ್ಲಿ ಸಸಿಗಳನ್ನು ನೆಡುವಾಗ, ಅದರ ಸುತ್ತ ಒಂದು ಮೀಟರ್ ವ್ಯಾಪ್ತಿಯಲ್ಲಿ ಮಣ್ಣು ಇರುವಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಬಿಬಿಎಂಪಿ ಮತ್ತು ರಾಜ್ಯಾದ್ಯಂತ ಎಲ್ಲ ನಗರಗಳ ಸ್ಥಳೀಯ ಸಂಸ್ಥೆಗಳು, ಹೆದ್ದಾರಿ ಪ್ರಾಧಿಕಾರ, ತೋಟಗಾರಿಕೆ ಇಲಾಖೆ ಮತ್ತು ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ವಿಭಾಗವು ಅಸ್ತಿತ್ವದಲ್ಲಿರುವ ಮರಗಳ ಸುತ್ತಲೂ ಟಾರ್ ಅಥವಾ ಕಾಂಕ್ರೀಟ್ ತೆಗೆದು ಹಾಕಲು ಕ್ರಮ ಕೈಗೊಳ್ಳ ಬೇಕು ಎಂದು ಅವರು ಒತ್ತಿ ಹೇಳಿದರು. ಮರ ಪ್ರಾಧಿಕಾರವು ನಿಯಮಿತ ವಾಗಿ ಸಭೆಗಳನ್ನು ನಡೆಸಬೇಕು, ಅಪಾಯಕಾರಿ ಮರಗಳನ್ನು ಗುರುತಿಸ ಬೇಕು ಮತ್ತು ಅಪಾಯಕಾರಿ ಕೊಂಬೆಗಳನ್ನು ಕತ್ತರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಖಂಡ್ರೆ ಸೂಚನೆ ನೀಡಿದರು.

ಎಲ್ಲರಿಗೂ ಆಮ್ಲಜನಕ ಬೇಕು. ಆದರೆ, ಜನರು ತಮ್ಮ ಮನೆಗಳ ಮುಂದೆ ಮರಗಳು ಬೇಡ ಎಂದು ಹೇಳುತ್ತಾರೆ. ಏಕೆಂದರೆ, ಬಿದ್ದ ಎಲೆಗಳು ಕಸವನ್ನು ಉಂಟು ಮಾಡುತ್ತವೆ. ಕೆಲವರು ಮನೆಯ ಸೌಂದರ್ಯವನ್ನು ಅಥವಾ ಅಂಗಡಿ ಫಲಕಗಳನ್ನು ನಿರ್ಬಂಧಿಸುವ ಕಾರಣ ಮರಗಳನ್ನು ಕಡಿಯುತ್ತಾರೆ. ಮರಗಳ ಬುಡದ ಸುತ್ತಲೂ ಕಾಂಕ್ರೀಟ್ ಹಾಕಬೇಡಿ ಅಥವಾ ಅಕ್ರಮವಾಗಿ ಕಡಿಯಬೇಡಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ವ್ಯಕ್ತಿಯೊಬ್ಬ ಆರಾಮವಾಗಿ ಉಸಿರಾಡಲು 7 ಮರಗಳು ಇರಬೇಕು ಎಂದು ತಜ್ಞರು ಹೇಳುತ್ತಾರೆ. ಆದರೆ, ಇಂದು ಬೆಂಗಳೂರು ಕಾಂಕ್ರೀಟ್ ಕಾಡಾಗಿ ಮಾರ್ಪಟ್ಟಿದೆ ಮತ್ತು ಇಲ್ಲಿ ಏಳು ಜನರಿಗೆ ಒಂದು ಮರವೂ ಇಲ್ಲ. ಆದ್ದರಿಂದ, ಮರಗಳ ಸಂರಕ್ಷಣೆ ಮತ್ತು ಪ್ರಚಾರಕ್ಕಾಗಿ ಎಲ್ಲರೂ ಮುಂದೆ ಬರಬೇಕು ಎಂದು ಅವರು ಹೇಳಿದರು.

ಮೈಸೂರು ಯೋಗ ನಗರವಾಗುವ ಕಾಲ ಸನ್ನಿಹಿತವಾಗಿದೆ

ಸರ್ಕಾರಿ ಆಯುರ್ವೇದ ಆಸ್ಪತ್ರೆ ಹಿರಿಯ ವೈದ್ಯಕೀಯ ಅಧಿಕಾರಿ ಡಾ. ಸೀತಾಲಕ್ಷ್ಮಿ ಆಶಯ



ಮೈಸೂರಿನ ಮೇಟಗಳ್ಳಿಯಲ್ಲಿರುವ ಜೆಎಸ್‌ಎಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಮಹಿಳಾ ಮಹಾವಿದ್ಯಾಲಯದಲ್ಲಿ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣ ಯೋಗ ಪ್ರಾಣೋತ್ಸವ–2025 ಸಮಾರೋಪ ಸಮಾರಂಭದಲ್ಲಿ ವೈಜ್ಞಾನಿಕ ಪ್ರಾಣಾಯಾಮದ ವಿಚಾರ ಸಂಕಿರಣದಲ್ಲಿ ಬಹುಮಾನ ಪಡೆದವರಿಗೆ ಪ್ರಶಸ್ತಿ ವಿತರಿಸಲಾಯಿತು.

ಮೈಸೂರು,ಜೂ.20(ಎಂಟಿವೈ)– ಮೈಸೂರನ್ನು ಯೋಗ ನಗರವನ್ನಾಗಿಸುವ ಕಾಲ ಸಮೀಪಿಸುತ್ತಿದೆ ಎಂದು ಸರ್ಕಾರಿ ಆಯುರ್ವೇದ ಆಸ್ಪತ್ರೆ ಹಿರಿಯ ವೈದ್ಯಕೀಯ ಅಧಿಕಾರಿ ಡಾ.ಸೀತಾಲಕ್ಷ್ಮಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮೇಟಗಳ್ಳಿಯಲ್ಲಿರುವ ಜೆಎಸ್‌ಎಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಮಹಿಳಾ ಮಹಾವಿದ್ಯಾಲಯದಲ್ಲಿ ವೈಜ್ಞಾನಿಕ ಪ್ರಾಣಾಯಾಮ ಫೌಂಡೇಶನ್ ಟ್ರಸ್ಟ್, ಎಟಿಎಂಇ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು ಆರ್.ವಿ ಇಂಜಿನಿಯರಿಂಗ್ ಕಾಲೇಜು ಮತ್ತು ಭಾರತೀಯ ಯೋಗ ಸಂಘಟನೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣ ಯೋಗ ಪ್ರಾಣೋತ್ಸವ–2025 ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಯೋಗ ಜನರ ಬದುಕನ್ನು ಸದೃಢವಾಗಿಸುವಲ್ಲಿ ಅತ್ಯಂತ ಪರಿಣಾಮಾತ್ಮಕ ಪಾತ್ರ ವಹಿಸುತ್ತದೆ. ಎಲ್ಲರೂ ಯೋಗ ಹಾಗೂ ಪ್ರಾಣಾಯಾಮ ಮಾಡುವ ಮೂಲಕ ಆರೋಗ್ಯಕರ ಜೀವನ ನಡೆಸಬೇಕು. ಪ್ರಸ್ತುತ ಎಲ್ಲರೂ ಒತ್ತಡದ ಬದುಕಿನಲ್ಲಿ ಸಿಲುಕಿದ್ದಾರೆ. ನಮಗೆ ನಾವು ಸಮಯವನ್ನು ಮೀಸಲಿರಿಸದಿದ್ದರೆ, ಮುಂದೆ ಆಸ್ಪತ್ರೆಗಳಿಗೆ ಹಣ ವ್ಯಯ ಮಾಡುವ ಕೆಟ್ಟ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಜನ ಆರೋಗ್ಯದ ಕಾಳಜಿ ವಹಿಸುತ್ತಿಲ್ಲ. ಕಾಯಿಲೆ ಯಾವ ಕಾರಣದಿಂದ ಬಂದಿದೆ ಎಂಬುದನ್ನು ಕಂಡು ಹಿಡಿಯಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ದೇಹಕ್ಕೆ ಮಿತವಾದ ಆಹಾರ ಅಗತ್ಯ ಎಂದರು.

ಇದೇ ವೇಳೆ ವಿದುಷಿ ಡಾ. ತುಳಸಿ ರಾಮಚಂದ್ರ ಅವರ ನೇತೃತ್ವದಲ್ಲಿ ಪ್ರಾಣತತ್ತ್ವ ವಿಕಾಸ – ಯೋಗ ನೃತ್ಯವನ್ನು ನಡೆಸಿಕೊಟ್ಟರು. ವೈಜ್ಞಾನಿಕ ಪ್ರಾಣಾಯಾಮದ ಸೆಮಿನಾರ್‌ನಲ್ಲಿ ಆರೋಗ್ಯಕ್ಕಾಗಿ ಪ್ರಾಣಾಯಾಮ ಶೀರ್ಷಿಕೆಯಡಿ 42 ಮಂದಿ ವಿಚಾರ ಮಂಡಿಸಿದರು. ಅದರಲ್ಲಿ ಮೋನಿಶಾ ಪ್ರಥಮ, ಮಹಾರುದ್ರಸ್ವಾಮಿ ದ್ವಿತೀಯ, ಸೀಮಾ ತೃತೀಯ ಹಾಗೂ ಸಮಾಧಾನಕರ ಬಹುಮಾನವನ್ನು ಇಂದ್ರೇಶ್, ಸೀತಾ ರಮೇಶ್, ಮಂಜುನಾಥ್, ಮೈತ್ರಿಸಿಂಹ, ರಮಾದೇವಿ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕ್ಯಾನ್ಸರ್ ಕೇರ್ ಇಂಡಿಯಾ ನ್ಯೂರೋ ಸರ್ಜನ್ ಡಾ. ರಾಜಶೇಖರ್ ರೆಡ್ಡಿ ಪೊರೆಡ್ಡಿ, ಶ್ರೀ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಮಹಾಮೇಧಾನಂದಜಿ ಸ್ವಾಮೀಜಿ, ಎಟಿಎಂಇ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ.ಎಲ್.ಬಸವರಾಜ್, ವೈಜ್ಞಾನಿಕ ಪ್ರಾಣಾಯಾಮ ಫೌಂಡೇಶನ್ ಟ್ರಸ್ಟ್ ಸಂಸ್ಥಾಪಕಿ ಡಾ.ದೇವಕಿ ಮಾಧವ್ ಇದ್ದರು.

ಪ್ರಬಲ ಹಿಂದೂ ರಾಷ್ಟ್ರ ನಿರ್ಮಾಣಕ್ಕಾಗಿ ಹಿಂದೂ ದಂಪತಿ ಕನಿಷ್ಠ ಮೂರು ಮಕ್ಕಳ ಹಡೆಯಬೇಕು

ಮೈಸೂರಿನಲ್ಲಿ ಅಂತರರಾಷ್ಟ್ರೀಯ ಹಿಂದೂ ಪರಿಷತ್ ಅಧ್ಯಕ್ಷ ಪ್ರವೀಣ್ ತೊಗಾಡಿಯ ಕರೆ

- 1947ರಲ್ಲಿ ಹಿಂದೂ ಜನಸಂಖ್ಯೆ ಶೇ.86, ಈಗ ಶೇ.76
- ಆಗ ಮುಸ್ಲಿಂ ಜನಸಂಖ್ಯೆ ಶೇ. 6, ಈಗ ಶೇಕಡ 15
- 1 ಲಕ್ಷ ಹನುಮಾನ್ ಚಾಲಿಸಾ ಕೇಂದ್ರ ಸ್ಥಾಪಿಸುವ ಗುರಿ
- ಏಕ ರೂಪ ನಾಗರಿಕ ಸಂಹಿತೆ ಜಾರಿ ಆಗಲೇಬೇಕಿದೆ

ಮೈಸೂರು, ಜೂ.20(ಬಿಎಲ್‌ಯು) ಪ್ರಬಲ ಹಿಂದೂ ರಾಷ್ಟ್ರವನ್ನು ಕಟ್ಟಲು ಹಿಂದೂ ಸಮುದಾಯದ ದಂಪತಿ ಕನಿಷ್ಠ ಮೂರು ಮಕ್ಕಳನ್ನು ಹಡೆಯಲೇಬೇಕು ಎಂದು ಅಂತರರಾಷ್ಟ್ರೀಯ ಹಿಂದೂ ಪರಿಷತ್ ರಾಷ್ಟ್ರೀಯ ಬಜರಂಗದಳದ ಅಧ್ಯಕ್ಷ ಡಾ. ಪ್ರವೀಣ್ ತೊಗಾಡಿಯಾ ಕರೆ ನೀಡಿದರು.

ಮೈಸೂರಿನ ವಿನೋಬಾ ರಸ್ತೆಯ ಆಲಮ್ಮ ಛತ್ರದಲ್ಲಿ ಇಂದು ನಡೆದ ಹಿಂದೂ ಚಿಂತನಾ ಸಭೆಯಲ್ಲಿ ಮಾತನಾಡಿದ ಅವರು, 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಹಿಂದೂಗಳ ಜನಸಂಖ್ಯೆ ಶೇಕಡ 86ರಷ್ಟಿತ್ತು, ಮುಸ್ಲಿಂರ ಜನಸಂಖ್ಯೆ ಶೇಕಡ 6ರಷ್ಟಿತ್ತು. ಆದರೆ ಈಗ ಹಿಂದೂಗಳ ಜನಸಂಖ್ಯೆ ಶೇಕಡ 76ಕ್ಕೆ ಕುಸಿದರೆ, ಮುಸ್ಲಿಂರ ಜನಸಂಖ್ಯೆ ಶೇಕಡ 15ಕ್ಕೆ ಏರಿಕೆಯಾಗಿದೆ ಎಂದರು.

ಹಿಂದೂ ದಂಪತಿ ಮೂರು ಮಕ್ಕಳನ್ನು ಹಡೆದರೆ ಪ್ರಬಲ, ಎರಡು ಮಕ್ಕಳನ್ನು ಪಡೆದರೆ ದುರ್ಬಲ ಎಂದು ಅಭಿಪ್ರಾಯಪಟ್ಟ ಅವರು, ಹಿಂದೂಗಳು ಬಹುಸಂಖ್ಯಾತರಾಗಿರಲೇಬೇಕು. ಅಲ್ಪಸಂಖ್ಯಾತರಾದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಸಿದರು.

ಭಾರತದಲ್ಲಿ ಏಕ ರೂಪ ನಾಗರಿಕ ಸಂಹಿತೆ ಜಾರಿ ಮಾಡಬೇಕು. ಹಿಂದೂಗಳು ಜನಸಂಖ್ಯೆ ಹೆಚ್ಚಳ ವಿಷಯದಲ್ಲಿ ಸ್ವಯಂ ನಿಯಂತ್ರಣ ಹೇರಿಕೊಂಡಿದ್ದಾರೆ. ಆದರೆ ಮುಸ್ಲಿಂರು ಜನಸಂಖ್ಯೆ ನಿಯಂತ್ರಣ ನಿಯಮ ಪಾಲಿಸದ ಕಾರಣ ಅವರ ಸಮುದಾಯದವರು ಹೆಚ್ಚಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಏಕ ರೂಪ ನಾಗರಿಕ ಸಂಹಿತೆ ಅತ್ಯಗತ್ಯ ಎಂದರು.

ಮುಸಲ್ಮಾನರು ಮಸೀದಿಗಳಲ್ಲಿ ಸಂಘಟಿತರಾಗಿ ತಮ್ಮ ಸಮುದಾಯದ ಸಮಸ್ಯೆ ಪರಿಹಾರ ಮಾಡಿಕೊಂಡು ಒಗ್ಗಟ್ಟು ಪ್ರದರ್ಶಿಸುತ್ತಾರೆ. ಹಾಗೆಯೇ ಚರ್ಚ್‌ಗಳಲ್ಲಿ ಕ್ರಿಶ್ಚಿಯನ್‌ಗಳು ಸಂಘಟನೆಗೊಂಡು ಏನೇ ಸಮಸ್ಯೆ ಇದ್ದರೂ ಪರಿಹಾರ ಸೂತ್ರ ಕಂಡುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಹಿಂದೂಗಳು ಕೂಡ ಪ್ರಬಲವಾಗಿ ಸಂಘಟಿತರಾಗುವ ಅವಶ್ಯಕತೆ ಇದೆ. ಆದ ಕಾರಣ ಭಾರತದಲ್ಲಿ 30 ಸಾವಿರ ಹನುಮಾನ್ ಚಾಲಿಸಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಈ ವರ್ಷಾಂತ್ಯಕ್ಕೆ ಒಂದು ಲಕ್ಷ ಸ್ಥಾಪಿಸುವ ಗುರಿ ಇದೆ ಎಂದರು.

ಪ್ರತಿ ಶನಿವಾರ ಮತ್ತು ಭಾನುವಾರ ಹನುಮಾನ್ ಚಾಲಿಸಾ ಕೇಂದ್ರಗಳಲ್ಲಿ ಹಿಂದೂಗಳು ಸೇರುತ್ತಿದ್ದಾರೆ. ಹನುಮಾನ್ ಚಾಲಿಸಾ ಕೇಂದ್ರಗಳ ಮೂಲಕ ಎರಡು ಕೋಟಿ ಹಿಂದೂ ಧರ್ಮಿಯರ ನಡುವೆ ಸಂಪರ್ಕ ಕಲ್ಪಿಸುವ ಉದ್ದೇಶ ಹೊಂದಲಾಗಿದೆ ಎಂದು ಡಾ.ಪ್ರವೀಣ್ ತೊಗಾಡಿಯಾ ಸ್ಪಷ್ಟಪಡಿಸಿದರು.

ಸ್ವಾಸ್ಥ್ಯ ಹಿಂದೂ, ಸುರಕ್ಷಿತ ಹಿಂದೂ, ಸಮೃದ್ಧ ಹಿಂದೂ–ಸಂಕಲ್ಪ ಹನುಮಾನ್ ಚಾಲಿಸಾ ಕೇಂದ್ರಗಳ ಮೂಲ ಧ್ಯೇಯೋದ್ದೇಶವಾಗಿದೆ. ಆರ್ಥಿಕವಾಗಿ ಶಕ್ತಿ ಹೊಂದಿರುವ ಹಿಂದೂಗಳಿಂದ ಬಡತನ ನಿವಾರಣೆ ಮಾಡುವುದು, ಉದ್ಯೋಗ ಕಲ್ಪಿಸುವುದು ಸೇರಿದಂತೆ ಇತರೆ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದರು.

ಉತ್ತರ ಪ್ರದೇಶದಲ್ಲಿ ನಡೆದ ಮಹಾ ಕುಂಭಮೇಳದ ಸಂದರ್ಭದಲ್ಲಿ ಉಚಿತ ವಾಸ್ತವ್ಯ, ಉಚಿತ ಆರೋಗ್ಯ ತಪಾಸಣೆ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಿದ್ದೇವೆ. ರಾಮ ಮಂದಿರ ನಿರ್ಮಾಣದ ಚಳವಳಿ ರೂಪಿಸಿ ರಾಮ ಮಂದಿರ ನಿರ್ಮಾಣದಲ್ಲಿ ಯಶಸ್ವಿಯಾಗಿದ್ದೇವೆ. ಈ ಮೂಲಕ ಹಿಂದೂಗಳ ರಕ್ಷಣೆ ನಮ್ಮ ಹೊಣೆಗಾರಿಕೆಯಾಗಿದೆ ಎಂದು ಸಾರಿ ಹೇಳಿದ್ದೇವೆ ಎಂದು ಡಾ.ಪ್ರವೀಣ್ ತೊಗಾಡಿಯಾ ತಿಳಿಸಿದರು.

ಅಂತಾರಾಷ್ಟ್ರೀಯ ಹಿಂದೂ ಪರಿಷತ್ ರಾಷ್ಟ್ರೀಯ ಬಜರಂಗದಳದ ಮೈಸೂರು ಜಿಲ್ಲಾಧ್ಯಕ್ಷ ಎಲ್.ಲೋಕೇಶ್, ಬೆಂಗಳೂರು ಜಿಲ್ಲಾಧ್ಯಕ್ಷ ಸುಂದರ್ ರಾಜನ್, ಭಗತ್ ಸಿಂಗ್ ಸೇನಾ ಅಧ್ಯಕ್ಷ ನರಸಿಂಹ ಮೂರ್ತಿ ಹಾಗೂ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಿಂದೂ ದೇವಾಲಯಗಳು ಸರ್ಕಾರದ ನಿಯಂತ್ರಣ ಮುಕ್ತವಾಗಬೇಕು

ಮಸೀದಿ, ಚರ್ಚ್‌ಗಳಂತೆ ಹಿಂದೂ ದೇವಾಲಯಗಳು ಕೂಡ ಸರ್ಕಾರದಿಂದ ಮುಕ್ತವಾಗಬೇಕು ಎಂದು ಡಾ.ಪ್ರವೀಣ್ ತೊಗಾಡಿಯಾ ಅಭಿಪ್ರಾಯಪಟ್ಟರು.

ದೇಶದ ಯಾವುದೇ ಮಸೀದಿ ಹಾಗೂ ಚರ್ಚ್‌ಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿಲ್ಲ. ಅವು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿವೆ. ಆದರೆ ಒಂದು ಲಕ್ಷಕ್ಕೂ ಹೆಚ್ಚು ದೇವಾಲಯಗಳು ಸರ್ಕಾರದ ನಿಯಂತ್ರಣದಲ್ಲಿವೆ ಎಂದರು.

ಹಿಂದೂ ದೇವಾಲಯಗಳು ಧಾರ್ಮಿಕ ಕೇಂದ್ರಗಳಾಗಿ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು. ದೇವಾಲಯಗಳ ಆಡಳಿತ ಮಂಡಳಿಯನ್ನು ಸರ್ಕಾರದಿಂದ ರಚನೆ ಮತ್ತು ನಿಯಂತ್ರಣ ಮಾಡದೆ ಹಿಂದೂ ಸಮುದಾಯದವರ ನಿಯಂತ್ರಣಕ್ಕೆ ಬಿಡಬೇಕು ಎಂದು ಪ್ರವೀಣ್ ತೊಗಾಡಿಯಾ ಆಗ್ರಹಿಸಿದರು.



ಮೈಸೂರಿನ ವಿನೋಬಾ ರಸ್ತೆಯ ಆಲಮ್ಮ ಛತ್ರದಲ್ಲಿ ಶುಕ್ರವಾರ ನಡೆದ ಹಿಂದೂ ಚಿಂತನಾ ಸಭೆಯಲ್ಲಿ ಅಂತರರಾಷ್ಟ್ರೀಯ ಹಿಂದೂ ಪರಿಷತ್ ರಾಷ್ಟ್ರೀಯ ಬಜರಂಗದಳದ ಅಧ್ಯಕ್ಷ ಡಾ.ಪ್ರವೀಣ್ ತೊಗಾಡಿಯಾ ಅವರು ಹಿಂದೂ ಸಮುದಾಯದವರು ಸಂಘಟಿತರಾಗಬೇಕು ಎಂದು ಕರೆ ನೀಡಿದರು.

ಹಿಂದೂಗಳು ಸಂಕಷ್ಟಕ್ಕೆ ಸಿಲುಕಿದರೆ ಹೆಲ್ಪ್‌ಲೈನ್‌ಗೆ ಕರೆ ಮಾಡಿ

ದೇಶದ ಯಾವುದೇ ಜಾಗದಲ್ಲಿ ಹಿಂದೂ ಧರ್ಮಿಯರು ಸಂಕಷ್ಟಕ್ಕೆ ಸಿಲುಕಿದರೆ ಅಂತರರಾಷ್ಟ್ರೀಯ ಹಿಂದೂ ಪರಿಷತ್ ಹೆಲ್ಪ್‌ಲೈನ್ ಸಂಪರ್ಕಿಸಬಹುದು ಎಂದು ಡಾ.ಪ್ರವೀಣ್ ತೊಗಾಡಿಯಾ ಕರೆ ನೀಡಿದರು.

ದೇಶದ ಪ್ರತಿಯೊಂದು ಜಿಲ್ಲೆಯಲ್ಲಿ ನಮ್ಮ ಸಂಘಟನೆ ಪ್ರಬಲವಾಗಿದೆ. ದೇಶದ ಯಾವುದೇ ಸ್ಥಳದಲ್ಲಿ ಹಿಂದೂ ಧರ್ಮಿಯರು ಸಂಕಷ್ಟಕ್ಕೆ ಸಿಲುಕಿದರೆ ಹಿಂದೂ ಹೆಲ್ಪ್‌ಲೈನ್– 020– 66803300 ಅಥವಾ 07588682181 ಸಂಪರ್ಕಿಸಿದರೆ, ನಮ್ಮವರು ನಿಮ್ಮ ನೆರವಿಗೆ ಬರುತ್ತಾರೆ ಎಂದು ಪ್ರವೀಣ್ ತೊಗಾಡಿಯಾ ಆಶ್ವಾಸನೆ ನೀಡಿದರು.

ನಾಳೆ ಉಚಿತ ನೇತ್ರ ತಪಾಸಣಾ, ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು, ಜೂ.20(ಜಿಎ)–ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ರೋಟರಿ ಜಯಪ್ರಕಾಶನಗರ, ರೋಟರಿ ಜಯಪ್ರಕಾಶ ನಗರ ಚಾರಿಟಬಲ್ ಟ್ರಸ್ಟ್, ರೋಟರಿ ಕ್ಲಬ್ ಆಫ್ ಕೃಷ್ಣರಾಜ, ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್, ಲಯನ್ಸ್ ಕ್ಲಬ್ ಜೆ.ಪಿ.ನಗರ, ಸ್ನೇಹ ನಿಧಿ ಪತ್ತಿನ ಸಹಕಾರ ಸಂಘ, ಶ್ರೀ ಅಷ್ಟೈಶ್ವರ್ಯ ಸಿದ್ಧಿವಿನಾಯಕ ದೇವಸ್ಥಾನದ ಸಹಯೋಗದಲ್ಲಿ ಮೈಸೂರಿನ ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಜೂ.22 ರಂದು ಉಚಿತ ನೇತ್ರ ತಪಾಸಣಾ ಹಾಗೂ ಶಸ್ತ್ರಚಿಕಿತ್ಸೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸ್ನೇಹ ನಿಧಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚೆಲುವಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಬಿರವು ಅಂದು ಬೆಳಿಗ್ಗೆ 8ರಿಂದ ಮಧ್ಯಾಹ್ನ 12.30ರವರೆಗೆ ನಡೆಯಲಿದ್ದು, ಕಣ್ಣಿನ ಪೊರೆ, ಕಣ್ಣಿನಲ್ಲಿ ನೀರು ಸೋರುವಿಕೆ, ಹತ್ತಿರ ಮತ್ತು ದೂರ ದೃಷ್ಟಿ ದೋಷ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ವಾರೆ ಕಣ್ಣು, ರಾತ್ರಿ ಕುರುಡುತನ ಇತ್ಯಾದಿ ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಉಚಿತವಾಗಿ ತಪಾಸಣೆ ಹಾಗೂ ಚಿಕಿತ್ಸೆ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಶಿಬಿರಕ್ಕೆ ಬರುವ ಪ್ರತಿಯೊಬ್ಬರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಕಣ್ಣಿನಲ್ಲಿ ಪೊರೆ ಇದ್ದವರನ್ನು ಅದೇ ದಿನ ಮಧ್ಯಾಹ್ನ ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಶಸ್ತ್ರ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲಾಗುವುದು. ಶಸ್ತ್ರ ಚಿಕಿತ್ಸೆಗಾಗಿ ಬರುವವರು ಆಧಾರ್ ಕಾರ್ಡ್ ಜೆರಾಕ್ಸ್ ಹಾಗೂ ಮೊಬೈಲ್ ನಂಬರ್ ಅನ್ನು ಕಡ್ಡಾಯವಾಗಿ ತರಬೇಕು. ಊಟ, ವಸತಿ ಹಾಗೂ ಪ್ರಯಾಣ ವ್ಯವಸ್ಥೆ ಉಚಿತವಾಗಿರುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿ.ಕೃಷ್ಣೇಅರಸ್, ಡಾ.ಡಿ.ಎಂ.ನಾಗರಾಜು, ಕೆ.ಎನ್. ಪ್ರಮೋದ್ ಚಂದನ್, ಜೆ.ವೆಂಕಟೇಶ್ ಉಪಸ್ಥಿತರಿದ್ದರು.

ಪತ್ರಕರ್ತರಿಗೆ ಹೃದಯ ಆರೋಗ್ಯ ತಪಾಸಣೆ ಶಿಬಿರ

ಮೈಸೂರು, ಜೂ.20(ಜಿಎ)– ಪತ್ರಕರ್ತರು ಒತ್ತಡದ ಬದುಕಿಗೆ ಸಿಲುಕಿ ಹೃದಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಹೀಗಾಗಿ ಪತ್ರಕರ್ತರು ಒತ್ತಡ ಮುಕ್ತ ಬದುಕು ನಡೆಸಿ ಎಂದು ಜಯದೇವ ಹೃದ್ರೋಗ ಆಸ್ಪತ್ರೆ ಮುಖ್ಯಸ್ಥ ಡಾ.ಸದಾನಂದ್ ಸಲಹೆ ನೀಡಿದರು.

ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಪತ್ರಕರ್ತರ ಹೃದಯ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಹೃದಯಾಘಾತ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಪತ್ರಕರ್ತರು ಒತ್ತಡದಿಂದ ಹೃದಯ ಸಮಸ್ಯೆಗೊಳಗಾಗುತ್ತಿದ್ದಾರೆ. ಹೀಗಾಗಿ ಮದ್ಯಪಾನ, ಧೂಮಪಾನ ತ್ಯಜಿಸಬೇಕು. ಸಕ್ಕರೆ, ಉಪ್ಪಿನ ಅಂಶ ಕಡಿಮೆ ಮಾಡಬೇಕು. ಮಾನಸಿಕ ಒತ್ತಡದಿಂದ ದೂರ ಉಳಿಯಬೇಕು. ನಿತ್ಯವೂ ವಾಕಿಂಗ್, ಜಾಗಿಂಗ್ ಮಾಡುವ ಮೂಲಕ ಆರೋಗ್ಯ ಸ್ಥಿರತೆ ಕಾಪಾಡಿಕೊಳ್ಳಿ ಎಂದು ತಿಳಿಸಿದರು.

ಈ ವೇಳೆ ಡಾ. ಪಶುಪತಿ, ಡಾ. ಶಶಿಕಾಂತ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಉಪಾಧ್ಯಕ್ಷ ರವಿ ಪಾಂಡವಪುರ, ಕಾರ್ಯ ಕಾರಣಿ ಸದಸ್ಯರಾದ ಎಂ.ಟಿ. ಯೋಗೇಶ್‌ಕುಮಾರ್, ಶಿವಣ್ಣ ದೊಡ್ಡಹುಂಡಿ ರಾಜಣ್ಣ, ನಾಣಿ ಹೆಬ್ಬಾಳ್ ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಪತ್ರಕರ್ತರಿಗೆ ಹೃದಯ ಆರೋಗ್ಯ ತಪಾಸಣಾ ಶಿಬಿರಕ್ಕೆ ಜಯದೇವ ಹೃದ್ರೋಗ ಆಸ್ಪತ್ರೆ ಮುಖ್ಯಸ್ಥ ಡಾ.ಸದಾನಂದ್ ಚಾಲನೆ ನೀಡಿದರು.

ಮೈಸೂರಿನ ಫುಟ್‌ಪಾತ್‌ನಲ್ಲಿ ಮಾರಾಟವಾಗುತ್ತಿವೆ ಮಧ್ಯಪ್ರದೇಶದ ವಿಶೇಷ ತಳಿಯ ಕೋಳಿಗಳು!

- ಅಂಗಡಿಗಳಿಗಿಂತ ಫುಟ್‌ಪಾತ್ ವ್ಯಾಪಾರವೇ ಲಾಭದಾಯಕ; ಬಾಡಿಗೆ ಇಲ್ಲ, ತೆರಿಗೆ ನೀಡಬೇಕಿಲ್ಲ!
- ಬೆಲೆಯೂ ಕಡಿಮೆ ಇರುವುದರಿಂದ ಖರೀದಿಗೆ ಗ್ರಾಹಕರ ಉತ್ಸಾಹ

ಮೈಸೂರು, ಜೂ.20(ಬಿಎಲ್‌ಯು)– ಹಣ್ಣು, ತರಕಾರಿ ಸೇರಿದಂತೆ ನಾನಾ ಪದಾರ್ಥಗಳನ್ನು ಫುಟ್‌ಪಾತ್‌ನಲ್ಲಿ ಈಗಾಗಲೇ ವ್ಯಾಪಕವಾಗಿ ಮಾರಾಟ ಮಾಡಲಾಗುತ್ತಿದೆ. ಈಗ ನಾಟಿಕೋಳಿ, ಟರ್ಕಿಕೋಳಿ ಸೇರಿದಂತೆ ಇತರೆ ತಳಿಯ ಕೋಳಿಗಳನ್ನು ಮೈಸೂರಿನ ಫುಟ್‌ಪಾತ್‌ಗಳಲ್ಲಿ ಮಾರಾಟ ಮಾಡಲಾಗುತ್ತಿದೆ.

ಇತ್ತೀಚಿಗೆ ಅಂಗಡಿಗಳಿಗಿಂತ ಫುಟ್‌ಪಾತ್ ವ್ಯಾಪಾರ ಬಲು ಜೋರಾಗಿದೆ. ಬಾಡಿಗೆ ನೀಡಬೇಕಿಲ್ಲ, ತೆರಿಗೆ ಕಟ್ಟಬೇಕಿಲ್ಲ, ಅಂಗಡಿಗಳಿಗಿಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿರುವ ಕಾರಣ ಗ್ರಾಹಕರಿಂದ ಬೇಡಿಕೆ ಹೆಚ್ಚಾಗಿದೆ.

ಮಾಂಸದ ಅಂಗಡಿಗಳಲ್ಲಿ ಕೋಳಿ, ಕುರಿ, ಆಡಿನ ಮಾಂಸ ಮಾರಾಟ ಸರ್ವೆ ಸಾಮಾನ್ಯ. ಇಲ್ಲವೆ ಶೆಡ್ ಹಾಕಿಕೊಂಡೂ ಮಾರಾಟ ಮಾಡಲಾಗುತ್ತದೆ. ಇಂತಹ ಕಡೆ ಸ್ವಚ್ಛ ಮಾಡಿದ ಕೋಳಿಯ ಮಾಂಸ ಮಾರಾಟ ಮಾಡಲಾಗುತ್ತದೆ. ಇಲ್ಲವೇ ಇಡೀ ಕೋಳಿಯನ್ನೆ ಮಾರಾಟ ಮಾಡಲೂಬಹುದು.

ಆದರೆ ಈಗ ಮೈಸೂರಿನ ಫುಟ್‌ಪಾತ್‌ನಲ್ಲಿ ತರಹೇವಾರಿ ಕೋಳಿಗಳನ್ನು ಬಲೆಗಳ ಬೇಲಿ ಹಾಕಿ ಇಟ್ಟು ಮಾರಾಟ ಮಾಡಲಾಗುತ್ತಿದೆ. ಮೂಲತಃ ಕನಕಪುರದವರಾದ ಕೆಂಪರಾಜು, ಹೀಗೆ ವಿವಿಧ ರೀತಿಯ ಕೋಳಿಗಳನ್ನು ಮಾರಾಟ ಮಾಡುತ್ತಿದ್ದು, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮೈಸೂರು ಸುತ್ತಮುತ್ತ ಇರುವ ಫಾರಂಗಳಲ್ಲಿ ಫಾರಂ, ಬ್ರಾಯ್ಲರ್, ನಾಟಿಕೋಳಿ ಲಭ್ಯವಿದೆ. ಆದರೆ ಖಡಕ್ನಾಥ್ ಕೋಳಿಯಂತೂ ಇಲ್ಲಿ ಸಿಗುವುದೇ ಇಲ್ಲ. ಇದೊಂದು ರೀತಿಯ ನಾಟಿಕೋಳಿ.

ಮೈಸೂರಿನ ಮಾನಂದವಾಡಿ ರಸ್ತೆಯ ಪಶುಸಂಗೋಪನಾ ಆಸ್ಪತ್ರೆಯ ಎದುರು, ಫುಟ್‌ಪಾತ್‌ನ ಒಂದೆಡೆ ವಿವಿಧ ರೀತಿಯ ನಾಟಿ ಕೋಳಿಗಳನ್ನು ಬಲೆಯ ಬೇಲಿಯಲ್ಲಿಟ್ಟು ಮಾರಾಟ ಮಾಡಲಾಗುತ್ತಿದೆ. ಇದರಲ್ಲಿ ನಾಟಿಕೋಳಿ, ಟರ್ಕಿಕೋಳಿ, ಬಾತುಕೋಳಿ, ಖಡಕ್ನಾಥ್ ಕೋಳಿ ಲಭ್ಯವಿದೆ.

ಒಂದು ಬಾತುಕೋಳಿಗೆ 200 ರೂಪಾಯಿ, ಟರ್ಕಿಕೋಳಿಗೆ 250 ರೂಪಾಯಿ, ಖಡಕ್ನಾಥ್ ಕೋಳಿಗೆ 300 ರೂಪಾಯಿ ಹಾಗೂ ನಾಟಿಕೋಳಿಗೆ 200 ರೂಪಾಯಿ. ಈ ಕೋಳಿಗಳ ಮರಿಗಳನ್ನು ಪ್ರತ್ಯೇಕವಾಗಿಟ್ಟು ಮಾರುತ್ತಿದ್ದಾರೆ.

ಮೈಸೂರಿನ ಮೆಲ್ಲಹಳ್ಳಿಯಲ್ಲಿ ಸದ್ಯ ವಾಸವಾಗಿರುವ ಕೆಂಪರಾಜು, ಟೆಂಪೋದಲ್ಲಿ ಕೋಳಿಗಳನ್ನು ಪ್ರತಿ ದಿನ ತಂದು ಫುಟ್‌ಪಾತ್‌ನಲ್ಲಿ ಮಾರಾಟ ಮಾಡುತ್ತಿದ್ದಾರೆ. ಕನಕಪುರ ಬಳಿ ವಿವಿಧ ಫಾರಂಗಳಲ್ಲಿ ಒಂದೊಂದು ರೀತಿಯ ಕೋಳಿ ಸಾಕಾಣಿಕೆ ಮಾಡುತ್ತಿದ್ದು, ಅಲ್ಲಿ ಖರೀದಿಸಿ, ಇಲ್ಲಿಗೆ ತಂದು ಮಾರಾಟ ಮಾಡುತ್ತಿದ್ದಾರೆ.

ಗ್ರಾಹಕರು ಕೋಳಿ ಬೆಲೆ ಕೇಳಿದರೆ, ಸಾಮಾನ್ಯವಾಗಿ ಅವರು ಜೋಡಿ ಕೋಳಿಯ ಬೆಲೆ ಹೇಳುತ್ತಾರೆ. ಯಾಟೆ ಮತ್ತು ಹುಂಜ ಎರಡನ್ನು ಸಾಕಿದರೆ ಮೊಟ್ಟೆಯಿಂದ ಮತ್ತಷ್ಟು ಮರಿ ಮಾಡಿಕೊಂಡು ಲಾಭ ಮಾಡಬಹುದು ಎಂದು ಸಲಹೆ ನೀಡುತ್ತಾರೆ.

ಕೋಳಿ ಫಾರಂಗಳಲ್ಲಿ ತೂಕದಲ್ಲಿ ಕೋಳಿ ಮಾಂಸದ ಪ್ರಮಾಣ ಹೆಚ್ಚಾಗಿ ಬರಲಿ ಎಂದು ರಾಸಾಯನಿಕ ಪದಾರ್ಥಗಳ ಯಥೇಚ್ಛವಾಗಿ ಬಳಕೆ ಮಾಡಲಾಗುತ್ತದೆ. ಇದರಿಂದ ಆರೋಗ್ಯದ ಮೇಲೆ ಬಹಳಷ್ಟು ಪರಿಣಾಮ ಬೀರುತ್ತದೆ. ಹಾಗಾಗಿ ನಾಟಿಕೋಳಿಗಳು ಗ್ರಾಹಕರನ್ನು ಸೆಳೆದಿದೆ.

ಸಾಮಾನ್ಯವಾಗಿ ಮಾಂಸಾಹಾರಿಗಳಿಗೆ ಫಾರಂ ಕೋಳಿ ಯಾವುದು, ನಾಟಿಕೋಳಿ ಯಾವುದು ಎಂಬುದು ನೋಡಿದ ಕೂಡಲೇ ಗೊತ್ತಾಗುತ್ತದೆ. ಅದೇ ರೀತಿ ಇಲ್ಲಿ ಗ್ರಾಹಕರು ನಾಟಿಕೋಳಿ ಖಾತ್ರಿ ಮಾಡಿಕೊಂಡು ಖರೀದಿ ಮಾಡುತ್ತಿದ್ದಾರೆ.

ಅಂಗಡಿಗಳಲ್ಲಿಟ್ಟು ಮಾರಾಟ ಮಾಡುವ ಬಹಳಷ್ಟು ವಸ್ತುಗಳು ಫುಟ್‌ಪಾತ್‌ಗಳಲ್ಲಿ ಮಾರಾಟವಾಗುತ್ತಿವೆ. ಅದರ ಸಾಲಿಗೆ ಈಗ ಕೋಳಿಗಳು ಸೇರಿವೆ.

ಕೆಂಪರಾಜು ಮಾರಾಟ ಮಾಡುತ್ತಿರುವ ಹಲವು ಕೋಳಿಗಳಲ್ಲಿ ಖಡಕ್ನಾಥ್ ಕೋಳಿ ಬಹಳ ವಿಶಿಷ್ಟವಾಗಿದೆ. ಇವು ಮಧ್ಯಪ್ರದೇಶದ ಜಬುವಾ ಹಾಗೂ ಧರ್ ಜಿಲ್ಲೆಗಳ ಬುಡಕಟ್ಟು ಹಾಗೂ ಗ್ರಾಮೀಣ ಪ್ರದೇಶದ ಜನರ ಜೀವನ ನಿರ್ವಹಣೆಗೆ ಆಧಾರವಾದ ಕೋಳಿ ತಳಿಯಾಗಿದೆ.

ನೋಡಲು ಕಾಗೆಯ ಗುಣಲಕ್ಷಣ ಹೋಲುವ ಖಡಕ್ನಾಥ್ ಕೋಳಿ ಮಾಂಸ ಕೂಡ ಕಪ್ಪು ಬಣ್ಣದಲ್ಲೇ ಇರುತ್ತದೆ. ಈ ಹಿನ್ನೆಲೆ ಇದನ್ನು ಕಾಳಿ ಮಸಿ ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಕೊಕ್ಕಿನಿಂದ ಹಿಡಿದು ಕಾಲು ಉಗುರು, ಗರಿ ತನಕ ಎಲ್ಲವೂ ಕಡು ಕಪ್ಪು.

ಆದರೆ ಈ ಕೋಳಿಯ ಮೊಟ್ಟೆ ಮಾತ್ರ ಕಂದು ಬಣ್ಣ. ಇದರ ಮರಿ ನೀಲಿ ಹಾಗೂ ಕಪ್ಪು ಮಿಶ್ರಿತ ಬಣ್ಣದಲ್ಲಿರುತ್ತದೆ. ಮಧ್ಯಪ್ರದೇಶ ಮಾತ್ರವಲ್ಲದೆ ಗುಜರಾತ್, ರಾಜಸ್ಥಾನದಲ್ಲಿ ಕೂಡ ಇವುಗಳನ್ನು ಸಾಕಲಾಗುತ್ತದೆ. ಆದರೆ ಮಧ್ಯಪ್ರದೇಶದಲ್ಲಿ ಪವಿತ್ರವಾದ ಹಕ್ಕಿ ಎಂದು ಭಾವಿಸಿ ಪ್ರತಿ ದೀಪಾವಳಿ ಹಬ್ಬದ ನಂತರ ದೇವಿಗೆ ಬಲಿ ನೀಡಲಾಗುತ್ತದೆ.

ಖಡಕ್ನಾಥ್ ಕೋಳಿ ಮಾಂಸದಲ್ಲಿ ಇತರೆ ನಾಟಿ ಕೋಳಿಗಿಂತ ಹೆಚ್ಚಿನ ಪೋಷಕಾಂಶವಿದೆ. ಶೇಕಡ 25ರಷ್ಟು ಪ್ರೋಟಿನ್, 0.73ರಷ್ಟು ಕೊಬ್ಬಿನಂಶ, ಶೇಕಡ 24ರಷ್ಟು ಲೀನೋಲಿನಿಕ್ ಆಮ್ಲ ಹಾಗೂ 184 ಮಿಲಿ ಗ್ರಾಂ ಕೊಲೆಸ್ಟ್ರಾಲ್ ಇರುತ್ತದೆ. ಇಂತಹ ವಿಶಿಷ್ಟವಾದ ಕೋಳಿ ಈಗ ಮೈಸೂರಿನಲ್ಲಿ ದೊರೆಯುತ್ತಿದೆ.

ನಾಟಿಕೋಳಿ, ಬಾತುಕೋಳಿ, ಟರ್ಕಿಕೋಳಿ ಸಾಮಾನ್ಯವಾಗಿ ಮೈಸೂರಿನಲ್ಲಿ ದೊರೆಯುತ್ತದೆ. ಆದರೆ ಖಡಕ್ನಾಥ್ ಕೋಳಿ ಸಿಗುವುದು ಅಪರೂಪವಾದ ಕಾರಣ ಗ್ರಾಹಕರು ಇದರ ಖರೀದಿಗೆ ಆಸಕ್ತಿ ತೋರುತ್ತಿದ್ದಾರೆ. ಕೆಲವರು ಖರೀದಿ ಮಾಡದಿದ್ದರೂ ಇದನ್ನು ಕುತೂಹಲದಿಂದ ನೋಡುತ್ತಿರುವುದು ಸಾಮಾನ್ಯವಾಗಿದೆ.



ಮೈಸೂರಿನ ಮಾನಂದವಾಡಿ ರಸ್ತೆಯ ಪಶುಸಂಗೋಪನಾ ಆಸ್ಪತ್ರೆಯ ಎದುರು, ಫುಟ್‌ಪಾತ್‌ನಲ್ಲಿ ಬಲೆಯ ಬೇಲಿಯಲ್ಲಿಟ್ಟು ಮಾರಾಟ ಮಾಡಲಾಗುತ್ತಿರುವ ನಾಟಿ ಕೋಳಿಗಳು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡಿಎನ್‌ಎ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕುಬೇರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕುಬೇರಾ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬುಲೆಟ್ (ಕ) + ಭಗೀರಥ (ಕ)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರೋಟರಿ ಸೆಂಟ್ರಲ್ ಸಂಸ್ಥೆಯಿಂದ ಮನುಗನಹಳ್ಳಿ ಶಾಲೆಗೆ ಸೇವಾ ಸೌಲಭ್ಯ



ರೋಟರಿ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಸಂಸ್ಥೆಯು ಸಮುದಾಯ ಸೇವಾ ಯೋಜನೆಯಡಿ ಹುಣಸೂರು ತಾಲೂಕಿನ ಮನುಗನಹಳ್ಳಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ವಿವಿಧ ಸೌಲಭ್ಯ ಒದಗಿಸಿತು.

ಮೈಸೂರು, ಜೂ.20(ಎಂಟಿವೈ)– ರೋಟರಿ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಸಂಸ್ಥೆಯು ಸಮುದಾಯ ಸೇವಾ ಯೋಜನೆಯಡಿ ಹುಣಸೂರು ತಾಲೂಕಿನ ಮನುಗನಹಳ್ಳಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 27 ಸಾವಿರ ರೂ. ಮೌಲ್ಯದ ಸೇವಾ ಸೌಲಭ್ಯ ಒದಗಿಸಿದೆ.

ಗ್ರಾಮೀಣ ಮಕ್ಕಳ ಶಿಕ್ಷಣದ ಗುಣಮಟ್ಟ ಹೆಚ್ಚಿಸುವುದಕ್ಕಾಗಿ ಸಂಸ್ಥೆಯ ಪದಾಧಿಕಾರಿಗಳು ವಿವಿಧ ಸೌಲಭ್ಯ ಒದಗಿಸುತ್ತಾ ಬಂದಿದ್ದಾರೆ.

ವಿದ್ಯಾರ್ಥಿಗಳ ಕೋರಿಕೆ ಮೇರೆಗೆ ರೋಟರಿ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಸಂಸ್ಥೆಯ ಅಧ್ಯಕ್ಷ ಸುಬ್ರಹ್ಮಣ್ಯ ಆರ್ ತಂತ್ರಿ ಅವರು ಶಾಲೆಗೆ ಪ್ರವೇಶ ಪಡೆದಿರುವ 52 ವಿದ್ಯಾರ್ಥಿಗಳ ಬೋಧನಾ ಶುಲ್ಕ 10 ಸಾವಿರ ರೂ. ಪಾವತಿಸಿದರೆ, ರೋ.ಎಸ್. ಆರ್.ಸ್ವಾಮಿ ಹಾಗೂ ರೋ. ಡಾ.ಪ್ರತಿಭಾ ಹಾಗೂ ರೋ.ಬಾಲಾಜಿ ಅವರು 8 ಸಾವಿರ ರೂ. ಮೌಲ್ಯದ ಶಾಲೆಯ 3 ಶೌಚಾಲಯಗಳಿಗೆ ಎಫ್‌ಆರ್‌ಪಿ ಮತ್ತು ಹಾರ್ಡ್ ಬಾಗಿಲನ್ನು ಹಾಕಿಸಿಕೊಟ್ಟರು.

ಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ 45 ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ನೆರವಾಗುವ ನಿಟ್ಟಿನಲ್ಲಿ ಪ್ರಕಟವಾಗುವ ಮ್ಯಾಗಜೀನ್ ಕೊಡುಗೆ ನೀಡಲು ಜಿಟಿಆರ್ ಕುಟುಂಬ ಗೀತಾಮಯ್ಯ ಅವರು ವಿದ್ಯಾರ್ಥಿಗಳು ಪಾವತಿಸಬೇಕಾಗಿದ್ದ ಚಂದಾದಾರಿಕೆ ಮೊತ್ತ 9 ಸಾವಿರ ರೂ. ಪಾವತಿಸಿದರು.

ಈ ವೇಳೆ ಶಾಲೆಯ ಮುಖ್ಯೋಪಾಧ್ಯಾಯಿನಿ ಗೀತಾ, ಕ್ಲಬ್ ಉಪಾಧ್ಯಕ್ಷ ರೋ.ವಿಜಯೇಂದ್ರ ಶ್ರೀನಿವಾಸನ್, ರೋಟರಿ ಸಂಸ್ಥೆಯ ರೋ. ರಾಜೇಶ್ ದರಿರಾ, ರೋ. ಡಾ. ಪ್ರತಾಪ್ ಕುಮಾರ್ ಶೆಟ್ಟಿ, ರೋ. ರಾಮಮೋಹನ್, ರೋ. ಎಸ್.ಆರ್. ಸ್ವಾಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ಜೂ. 20– ಮೈಸೂರಿನ ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಜೂ. 21 ರಂದು ಸಂಜೆ 4.30 ರಿಂದ 5.30ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸರ್ಕಾರಿ ಪ್ರೌಢಶಾಲೆ, ಬೋಗಾದಿ, ಸಂಪನ್ಮೂಲ ವ್ಯಕ್ತಿ ಶ್ರೀಮತಿ ಬಿ.ಎಸ್. ನಿರ್ಮಲ ಕಥೆ ಹೇಳಲಿದ್ದಾರೆ. ಹೆಚ್ಚಿನ ಮಾಹಿತಿಗೆ 9243581097, 9945943115 ಸಂಪರ್ಕಿಸಬಹುದು.

ದಾಸ್ತಿ ಪ್ಯಾರಾ ಮೆಡಿಕಲ್ ಕಾಲೇಜು

ಎಲ್.46/4, ಎಂ.ಜಿ.ಟವರ್ಸ್, 2ನೇ ಮಹಡಿ, (ಜಿ.ಹೆಚ್.ಬಿ. ಕಾಂಪ್ಲೆಕ್ಸ್ ಹಿಂಭಾಗ) ಎ.ಡಿ. ಹಂತ, ಕುವೆಂಪುನಗರ, ಮೈಸೂರು – 570023. (ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ಮೈಸೂರು ಮೆಡಿಕಲ್ ಕಾಲೇಜು, ಕೆ.ಆರ್.ಆಸ್ಪತ್ರೆ ಮೈಸೂರಿನಲ್ಲಿ ಕ್ಲಿನಿಕಲ್ ತರಬೇತಿ ನೀಡಲಾಗುವುದು. ಪರಿಣಿತ ವೈದ್ಯರು ಮತ್ತು ತಾಂತ್ರಿಕ ತಜ್ಞರಿಂದ ಬೋಧನೆ

ಎಸ್.ಎಸ್.ಎಲ್.ಸಿ. / ಪಿಯುಸಿ ಪಾಸಾದವರಿಗೆ

ಪ್ರವೇಶ ತೆರೆದಿದೆ, ತ್ವರೆಮಾಡಿ

- ಡಿಪ್ಲೋಮಾ-ಇನ್-ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ (DMLT) - 3 ವರ್ಷ (ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ ಟೆಕ್ನಿಷಿಯನ್ ಹುದ್ದೆಗೆ ಅವಕಾಶ)
- ಡಿಪ್ಲೋಮಾ-ಇನ್-ಮೆಡಿಕಲ್ ಹೆಲ್ತ್ ಇನ್ಸ್‌ಪೆಕ್ಟರ್ (DMHI) - 3 ವರ್ಷ ಸರ್ಕಾರಿ/ನಗರ ಪಾಲಿಕೆ/ನಗರ ಸಭೆ/ಪುರಸಭೆಗಳಲ್ಲಿ ಉದ್ಯೋಗಕ್ಕೆ ಅವಕಾಶ)

ಸಂಪರ್ಕಿಸಿ 8904403905 | 9738786481

WANTED

Physical Education Teacher For Reputed School Qualification:- B.Ped M.Ped

8861052656

Salary Above 15000

WANTED

Computer Lecturer For Reputed College Qualification:- B.C.A Or M.C.A Minimum Experience Required

9035041423

Good Salary Offered

Aquaguard & Kent Water Purifier Sales & Service

9901200444

#319, Near Mega Medical Store, Kuvempunagar

REQUIRED FOR A CA FIRM

We are a prominent CA Firm in Mysore looking for hiring candidates having the following credentials:

Recently Qualified CA's, IPCC (Inter) Completed Candidates, Articles Completed Candidates

Vacancies also exist for Articled Clerks

Candidates with a desire to excel and interested in a sustaining relationship may send their detailed resume and expected remuneration to:

mysorecafirm@gmail.com

PROPERTY FOR SALE

EAST FACING SITE Opposite to Park 9 Mtrs Road Measuring East West : 30 ft, North South: 25 ft Total : 750 sq ft Location : Bogadi

8867770007



NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

PUBLIC NOTICE

The general public is hereby cautioned that the property stated in the "Schedule" below is the subject matter of multiple litigations. My client is a legal heir of one of the rightful persons entitled to the Schedule Property who has been a party in the said litigations. The Court of the Hon'ble Principal Senior Civil Judge & CJM, at Mysuru has issued an **Injunction/Stay Order on 14-08-2017** on the Schedule Property, which is still operative, as, "Not to enter in to any agreement of whatsoever nature in respect of the suit schedule property" by the Defendants, namely, **Mrs. Ayesha Siddiqua** (wife of late Mr. Abdul Azeez S.) and others in the suit bearing **O.S. No.: 626/2017.** The suit schedule property is described as Schedule Property here-in below. Hence, any agreement/Deed, whether registered or unregistered, from 14-08-2017 onwards in respect of the Schedule property is null and void. Any party claiming any right on the Schedule property whether by any Agreement, Power of Attorney, Joint Development Agreement, etc. whether, such document is registered or unregistered shall be null and void. The on-going cases related to the Schedule Property are:

(i) O.S. No.: 626/2017, [Rahmathunnisa Vs. Ayesha Siddiqua & others]
(ii) Mis No.: 28/2019 [Rahmathunnisa Vs. Ayesha Siddiqua & others]
(iii) O.S. No.: 821/2017 [Altair Constructions Pvt. Ltd. & another Vs. Ayesha Siddiqua & others]
(iv) WP No.: 16210/2023 [Altair Constructions Pvt. Ltd. & another Vs. Maaz Ahmed, Ayesha Siddiqua & others]
(v) WP No.: 5230/2024 [Rahmathunnisa Vs. Maaz Ahmed, Ayesha Siddiqua & others]


Cases (i) to (iii) are in the court of the Hon'ble Principal Senior Civil Judge & CJM, at Mysuru and (iv) & (v) are in the Hon'ble High Court of Karnataka at Bengaluru.

Therefore, the general public is further cautioned as NOT TO ENTER into any transaction of any kind in respect of the Schedule Property until any order from the competent Hon'ble Court of Law. Anybody ignoring this Public Notice and entering into any transaction/s of any kind in respect of the Schedule property will be doing so at their own peril and will have to face legal consequences.

SCHEDULE PROPERTY

All the Piece and Parcel of the alienated property bearing Survey No.: 168/2, (old Sy.No. 168) measuring 4 Acres, 01 Gunta, located at Rajeev Nagar, Devanur village, behind Shabnam Function Hall, Kasaba Hobli, Mysuru Taluk, Mysuru, having the following boundaries:

East by : Drainage
West by : Land of Mahadevamma and Swamy
North by : Drainage
South by : Land belonging to MUDA



Simon Ajay Kumar, Advocate
No 524/1, Ist Floor, Dhanavantri Building, Dhanavantri Road, Mysuru - 570001. Cell: 9632677225

ಹಕೋಬಾ ಕಂಪನಿಯ ಮಹಿಳೆಯರ ಉಡುಪುಗಳು ಇಂದಿನಿಂದ ಭಾರಿ ರಿಯಾಯಿತಿ ಮಾರಾಟ

ಎಲ್ಲಾ 2025ರ ಹೊಸ ಸ್ಟಾಕ್‌ನ ಸಂಗ್ರಹ ಮೈಸೂರಿನಲ್ಲಿ



hakoba SINCE 1960®

ನಿಮ್ಮ ಊಹೆಗೂ ನಿಲುಕದ ಎಂಬ್ರಾಯಿಡರಿ ಉತ್ಪನ್ನಗಳು

ಇದೀಗ ಹೊಸ ಸ್ಟಾಕ್‌ನೊಂದಿಗೆ ಮೈಸೂರಿನಲ್ಲಿ ಪ್ರದರ್ಶನ ಮತ್ತು ಮಾರಾಟ

ಹಕೋಬಾ ಮಹಿಳೆಯರ ಉಡುಪುಗಳು – ಚಿಕಾನ್ ಎಂಬ್ರಾಯಿಡರೀಸ್

- ಒಮ್ಮೆ ಪರೀಕ್ಷಿಸಿ ಎಕ್ಸ್‌ಪೋರ್ಟ್ ಡ್ರೆಸ್ ಮೆಟಿರಿಯಲ್ಸ್
- ಪಂಜಾಬಿ ಸೂಟ್ ಫ್ಯಾಬ್ರಿಕ್ಸ್ • ಸೀರೆಗಳು • ಆರ್ಗಾಂಡಿ ಸೀರೆ
- ವಾಯಿಲ್ ಸೀರೆ • ಟೆರ್ರಿನ್ ಸೀರೆ • ಶಿಫಾನ್ ಸೀರೆ • ತಸ್ಸಾ ಸೀರೆ
- ಸ್ವಿಸ್ ವಾಯಿಲ್ ಸೀರೆ • ರೆಡಿಮೇಡ್ ಪಲಾಜೋ ಪ್ಯಾಂಟ್
- ಕುರ್ತೀಸ್ • ಎಂಬ್ರಾಯಿಡರಿ ಲೆಗ್ಗಿಂಗ್ಸ್ ಮತ್ತು ದುಪ್ಪಟ್ಟಗಳ ಸಂಗ್ರಹ

ಭಾರಿ ರಿಯಾಯಿತಿ **50%** ರವರೆಗೆ

Shop online at www.hakoba.in

Timing : 10 am to 8 pm Cards Accepted Ph.: 8169209835

ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಆಡಿಟೋರಿಯಂ ಹಾಲ್) ಜೆ.ಎಲ್.ಬಿ. ರಸ್ತೆ, ಮೈಸೂರು 05

4ನೇ ವರ್ಷದ ಪುಣ್ಯಸ್ಮರಣೆ



1959–2021

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿಮ್ಮ ನೆನಪಿನಲ್ಲೇ ಇರುವ

ದುಃಖತಪ್ತರು: ಪತ್ನಿ ಕೆಂಪಮ್ಮ, ಮಕ್ಕಳು ಹಾಗೂ ಮೊಮ್ಮಕ್ಕಳು

ಶ್ರೀ ಬಿ.ಶಂಭಣ್ಣ ಎಸ್.ಎಂ. ಟೆಂಟ್‌ಹೌಸ್ ಮಾಲೀಕರು

WANTED

Watchman For School At Nanjangud (day Shift And Night Shift Available) Minimum Experience Of 2 Years Is Required

8861052656

Salary 10000 And Above

WANTED

English Teacher For Reputed School Qualification:- B.A Or M.A Good Communication Skills Required

9901240858

Salary Above 15000

ರತ್ನ ಪ್ಯಾರ ಮೆಡಿಕಲ್ ಕಾಲೇಜು

ಕುವೆಂಪುನಗರ, ಮೈಸೂರು

ADMISSION OPEN

- Bachelor's in Medical Lab technology
- Bachelor's in cardiac care Technology, OT, Dialysis & X-Ray
- Diploma in Medical Lab Technology
- B.Com (Digital Marketing)
- Direct PUC (Science, Commerce & Arts)

SSLC/PUC Pass/Fail

9886654463

AKSHARA MOTORS i-Gen6 ASHOK LEYLAND

ಅಕ್ಷರ ಮೋಟಾರ್ಸ್ ರವರಿಂದ ವಿಶೇಷ ಮೂನ್ಸೂನ್ ಕೊಡುಗೆ*



ಆಕರ್ಷಕ ಸಾಲ ಸೌಲಭ್ಯ

100% ಫೈನಾನ್ಸ್ ಸೌಲಭ್ಯ*

ಎಕ್ಸ್‌ಚೇಂಜ್ ಸೌಲಭ್ಯವಿದೆ

ಈ ಕೊಡುಗೆ 29 ಜೂನ್ 2025 ರವರೆಗೆ ಆಯ್ದ ಮಾಡೆಲ್‌ಗಳಿಗೆ ಮಾತ್ರ*

ಹೆಚ್ಚಿನ ವಿವರಗಳಿಗೆ ಕೆಳಗಿನ ಶಾಖೆಗಳಲ್ಲಿ ಸಂಪರ್ಕಿಸಿ

ಅಧಿಕೃತ ಮಾರಾಟಗಾರರು :

ಅಕ್ಷರ ಮೋಟಾರ್ಸ್ (A Unit of Cauvery Motors) ಪ್ಲಾಟ್ ನಂ. 117, ಕಾವೇರಿ ಫೋರ್ಡ್ ಹತ್ತಿರ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೈಸೂರು – 570 017 ☎ 0821 - 4850 107, 99000 43863, 99000 43868

♦ಮಂಡ್ಯ : 99000 43857 ♦ ಕೆ.ಆರ್. ಪೇಟೆ : 99000 43860 ♦ ಚಾಮರಾಜ ಜೋಡಿ ರಸ್ತೆ, ಮೈಸೂರು : 98451 12157
♦ಪಿರಿಯಾಪಟ್ಟಣ : 99000 43859 ♦ ಗೋಣಿಕೊಪ್ಪಲ್ : 99000 43858 ♦ ಚಾಮರಾಜನಗರ : 99000 25521

ಸೂಕ್ತ ಉದ್ಯೋಗ ಅವಕಾಶಗಳಿಗಾಗಿ ಈ ಕೂಡಲೇ ಸಂಪರ್ಕಿಸಿ

ಸಂಪೂರ್ಣ ಹೊಸ ಸ್ಟಾಕ್‌ನೊಂದಿಗೆ ಒಂದೇ ಬಾರಿಗೆ ಎರಡು ಸ್ಥಳಗಳಲ್ಲಿ ಇಂದಿನಿಂದ ಮಾರಾಟ ಪ್ರಾರಂಭ

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮಾರಾಟ

ಸರಪ್ಲಸ್ ಫ್ಯಾಕ್ಟರಿ ಕ್ಲಿಯರೆನ್ಸ್ ಸೇಲ್

ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಕುವೆಂಪುನಗರ

ಪುರುಷರ, ಮಹಿಳೆಯರ ಮತ್ತು ಮಕ್ಕಳ ರೆಡಿಮೇಡ್ ಗಾರ್ಮೆಂಟ್ಸ್ ಒಂದು ಲಕ್ಷಕ್ಕೂ ಅಧಿಕ ವೆರೈಟಿಗಳೊಂದಿಗೆ ಬ್ರಾಂಡೆಡ್ ಸಿದ್ಧ ಉಡುಪುಗಳು, ಸೀರೆಗಳು, ಶಾರ್ಟ್ಸ್, ಟಿ–ಶರ್ಟ್ಸ್, ವೆಸ್ಟರ್ನ್ ಟಾಪ್ಸ್, ಟ್ರ್ಯಾಕ್ ಪ್ಯಾಂಟ್, ಪಾಲಜೋ, ಬಾಟಮ್ಸ್, ಕುರ್ತೀ, ಜೀನ್ಸ್, ಶರ್ಟ್, ಜಾಕೆಟ್ಸ್, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್ ಇನ್ನೂ ಹಲವಾರು ಉಡುಪುಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕೆಂದು ನಿರ್ಧರಿಸಿರುತ್ತೇವೆ.

Lee Cooper | NETPLAY | JOHN PLAYERS | INDIGO NATION | And many more brands available

ಪುರುಷರ ಉಡುಪುಗಳ ಭಾರಿ ರಿಯಾಯಿತಿ ಮಾರಾಟ

ಜೀನ್ಸ್ ಪ್ಯಾಂಟ್ 750/-	ಕಾಟನ್ & ಫಾರ್ಮಲ್ ಪ್ಯಾಂಟ್ 650/-	ಟ್ರ್ಯಾಕ್ ಪ್ಯಾಂಟ್ 350/-	ಕಾಲರ್ ಟೀ–ಶರ್ಟ್ 300/-	ಜಿಪ್ಪರ್ ವುಡ್ಡೀಸ್ 700/-
ಶರ್ಟ್ಸ್ 350/-	ಪ್ರೀಮಿಯಂ ಶರ್ಟ್ 700/-	ರೌಂಡ್‌ನೆಕ್ ಟಿ–ಶರ್ಟ್ಸ್ 200/-	ಬಾಕ್ಸರ್ ಶಾರ್ಟ್ಸ್ 200/-	ಕಾಟನ್ & ಜೀನ್ಸ್ ಶಾರ್ಟ್ಸ್ 350/-

ಮಹಿಳೆಯರ ಮತ್ತು ಮಕ್ಕಳ ಉಡುಪುಗಳ ಭಾರಿ ರಿಯಾಯಿತಿ ಮಾರಾಟ

ಕುರ್ತೀಸ್ 250/-	ಲೆಗ್ಗಿನ್ಸ್ 200/-	ಲೇಡಿಸ್ ಜೀನ್ಸ್ 300/-	ಫಲಾಜೋ ಪಟಿಯಾಲ 250/-	ಸೀರೆಗಳು 200/-
ಡ್ರೆಸ್ 250/-	ಸ್ವೆಟ್ ಶರ್ಟ್ 300/-	ಟ್ರಾಕ್ ಪ್ಯಾಂಟ್ 300/-	ಜಿಪ್ಪರ್ ವುಡ್ಡೀಸ್ ಲೆದರ್ ಜಾಕೆಟ್ 500/-	

ಸ್ಪೆಷಲ್ ಕೌಂಟರ್‌ನಲ್ಲಿ ಮಕ್ಕಳ ಉಡುಪುಗಳು : ಜೀನ್ಸ್ ಟಿ–ಶರ್ಟ್ಸ್, ಪ್ಯಾಂಟ್, ಕಾಟನ್ ಪ್ಯಾಂಟ್, ಟ್ರಾಕ್ ಪ್ಯಾಂಟ್, ಜಾಕೆಟ್ಸ್, ಶಾರ್ಟ್ಸ್, ಸ್ವೆಟ್ ಶರ್ಟ್ಸ್, ಜಿಪ್ಪರ್ ವುಡ್ಡೀಸ್, ಫ್ಯಾನ್ಸಿ ಫ್ರಾಕ್ಸ್, ಕಾಟನ್ ಫ್ರಾಕ್ಸ್, ಸೆಟ್, ಟಾಪ್ಸ್ ಇನ್ನೂ ಹಲವಾರು ಉಡುಪುಗಳು **ರೂ. 70/-** ರಿಂದ **300/-** ರವರೆಗೆ

ವೆಸ್ಟರ್ನ್ ಟಾಪ್ಸ್ ರೂ. 150/-	ಬ್ರಾಂಡೆಡ್ ಪುರುಷರ ಟ್ರಂಕ್ಸ್ ರೂ. 200/-	ಮಹಿಳೆಯರ ಪ್ಯಾಂಟಿ ರೂ. 100/- ಮಾತ್ರ

ಕೆಮಿಸೋಲ್ **Rs. 200/-** | ಬ್ರಾಂಡೆಡ್ ಬ್ರಾ **Rs. 200/- to 250/-**

ಮಾರಾಟ 2 ಸ್ಥಳಗಳಲ್ಲಿ ಮಾತ್ರ

ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು

ನಂಜರಾಜ ಬಹದ್ದೂರು ಛತ್ರ ವಿನೋಬಾ ರಸ್ತೆ, ಮೆಟ್ರೋಪೋಲ್ ಸರ್ಕಲ್ ಹತ್ತಿರ, ಮೈಸೂರು

ಎಲ್ಲ ಪ್ರಮುಖ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳು, ಆನ್‌ಲೈನ್ ಪಾವತಿಗಳನ್ನು ಸ್ವೀಕರಿಸಲಾಗುವುದು | ಸಮಯ : ಬೆ.10 ರಿಂದ ರಾತ್ರಿ 10ರವರೆಗೆ ಸಂಪರ್ಕ : 8747869888 | ಉಚಿತ ಪ್ರವೇಶ & ಪಾರ್ಕಿಂಗ್

